## ಅಧ್ಯಯನ III

# *ನೂತನ ಸೃಷ್ಟಿಯ ಕರೆ*

**ಕರೆಯಲ್ಪಟ್ಟವರು ಮಾತ್ರವೇ ಅರ್ಹರು – ಈ ಮಹಾ ರಕ್ಷಣೆಯ ಕರೆಯು ಉಂಟಾದಾಗ – ಪಶ್ಚಾತ್ತಾಪಕ್ಕಾಗಿ ಕರೆಯೇ ಹೊರತು ದೈವಸ್ವಭಾವಕ್ಕಾಗಿ ಕರೆಯಲ್ಲ – ಯೆಹೂದ್ಯರ ಕರೆ – ಅಪೋಸ್ತಲರ ಕರೆ – ಮಹಾ ಜ್ಞಾನಿಗಳನ್ನೂ, ಶಕ್ತಿವಂತರನ್ನು ಯಾಕೆ ಹೆಚ್ಚಾಗಿ ಕರೆಯಲಿಲ್ಲ – ಉತ್ಕರ್ಷೆಯು ನಿಜವಾದ ನಮ್ರತೆಯ ಮೇಲಿನ ಕಂತಾಗಿದೆ – – ಗುಣನಡತೆಯು ಕರೆಯ ಒಂದು ಶರತ್ತಾಗಿದೆ – ಧರ್ಮಯುಗದಲ್ಲಿ ಪ್ರಪಂಚವನ್ನು ಕರೆಯಲಾಗುವುದಿಲ್ಲ, ಆದರೆ ಅದರ ಮೇಲೆ ಆಡಳಿತ ನಡೆಸಲಾಗುವುದು – ಸುವಾರ್ತಾ ಕರೆಯ ಸಮಯವು ಮಿತಿಯುಳ್ಳದ್ದಾಗಿದೆ – ನೂತನ ಸೃಷ್ಟಿಯನ್ನು ತಂದೆಯು ಕರೆಯುತ್ತಾನೆ ಇಲ್ಲವೆ ಸೆಳಕೊಳ್ಳುತ್ತಾನೆ – ಕ್ರಿಸ್ತನು ನಮ್ಮ ಜ್ಞಾನ – ಕ್ರಿಸ್ತನು ನಮ್ಮ ಸಮರ್ಥನೆ – ನಿಜವಾದ ಮತ್ತು ಹಾಗೆಂದು ಎಣಿಸಲ್ಪಟ್ಟ ಸಮರ್ಥನೆಯು ಭಿನ್ನವಾಗಿದೆ – ನೂತನ ಸೃಷ್ಟಿಗೆ ಸಮರ್ಥನೆಯು ಅವಶ್ಯಕತೆ ಇದೆಯೋ? – ಸಮರ್ಥನೆಯ ತಳ – ಪುರಾತನ ಅರ್ಹರ ಸಮರ್ಥನೆಯು ನಮ್ಮ ಸಮರ್ಥನೆಗಿಂಥಾ: ವಿಭಿನ್ನವಾದುದು – ಧರ್ಮಯುಗ ಕಾಲದ ಸಮರ್ಥನೆ – ಕ್ರಿಸ್ತನು ನಮ್ಮನ್ನು ಶುದ್ಧಿಪಡಿಸುವವನಾಗಿದ್ದಾನೆ – ಧರ್ಮಯುಗದ ಕಾಲದಲ್ಲಿ ಪವಿತ್ರಪಡಿಸುವಿಕೆ – ಲೇವಿಯ ನಮೂನೆಯ ಎರಡು ನಿರ್ಧಿಷ್ಟವಾದ ಸಮರ್ಪಣೆಗಳು – ಯಾರಿಗೂ ಭೂಮಿಯಲ್ಲಿ ಬಾಧ್ಯತೆ ಇರುವುದಿಲ್ಲ – ಮಹಾ ಸಮೂಹ – ಎರಡು ಭಾಗಗಳ ಪವಿತ್ರ ಪಡಿಸುವಿಕೆ – ಮನುಷ್ಯರ ಭಾಗ – ದೇವರ ಭಾಗ –ಪ್ರಕೃತಿ ಸ್ವಭಾವಕ್ಕನುಸಾರವಾಗಿ ಅನುಭವಗಳು ಬದಲಾಗುತ್ತವೆ – ಪವಿತ್ರ ಪಡಿಸುವಿಕೆಯು ಸಮರ್ಪಕತೆಯೂ ಅಲ್ಲ, ಭಾವೋದ್ವೇಗವೂ ಅಲ್ಲ – ನಿಮ್ಮ ಎಲ್ಲಾ ರೋಗಗಳನ್ನು ವಾಸಿ ಮಾಡುವವನು ಯಾರು? – ಕೃಪಾಸನದ ಅಗತ್ಯತೆ – ಸಮರ್ಥನೆಯು ಯಾವ ರೀತಿಯಲ್ಲಿ ಪವಿತ್ರಪಡಿಸುವಿಕೆಯಲ್ಲಿ ಒಂದುಗೂಡುತ್ತದೆ – ' ಮಹಾ ಕರೆಯುವಿಕೆ'ಯು ಮುಕ್ತಾಯದ ನಿಮಿತ್ತದಿಂದ ಸಮರ್ಪಣೆ – ಸಭ್ಯೆಯ ರಕ್ಷಣೆ ಅಥವಾ ಬಿಡುಗಡೆ.**

ನೂತನ ಸೃಷ್ಟಿಯ ಸದಸ್ಯರಾಗುವ ಅವಕಾಶ ಮತ್ತು ಅದರ ಸಾಧ್ಯತೆಗಳಲ್ಲಿ, ಸವಲತ್ತುಗಳಲ್ಲಿ, ಆಶಿರ್ವಾದಗಳಲ್ಲಿ ಮತ್ತು ಮಹಿಮೆಯಲ್ಲಿ ಭಾಗವಹಿಸುವ ಅವಕಾಶಗಳು ಮಾನವಕುಲಕ್ಕೆ ಸಾಮಾನ್ಯವಾಗಿ ಮುಕ್ತವಾಗಿರುವುದಿಲ್ಲ. ಅದು ಕೇವಲ ಕರೆಯಲ್ಪಟ್ಟ ವರ್ಗದವರಿಗೆ ಮಾತ್ರ. ಇದನ್ನು ದೇವರ ವಾಕ್ಯದಲ್ಲಿ ಬಹಳಷ್ಟು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಇಸ್ರಾಯೇಲ್ಯರನ್ನು ಮನುಷ್ಯ ವರ್ಗಕ್ಕನುಸಾರವಾಗಿ.ಲೋಕದ ಬೇರೆ ಜನರಿಂದ ಅಥವಾ ಜನಾಂಗದವರಿಂದ ಪ್ರತ್ಯೇಕಿಸಲ್ಪಟ್ಟ ಆತನ ಆಯ್ದ ಜನಾಂಗವನ್ನಾಗಿ ಕರೆಯಲಾಯಿತು. **–"ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ"** (ಆಮೋಸ : ೩:೨) ಎಂದು ಬರೆಯಲ್ಪಟ್ಟಿದೆ. ಇಸ್ರಾಯೇಲ್ಯರ ಈ ಕರೆಯು ನಿಜವಾಗಿಯೂ 'ಮಹಾ ಕರೆ' ಅಥವಾ 'ಪರಲೋಕದ ಕರೆ'ಯಾಗಿರಲಿಲ್ಲ. ಆದ ಕಾರಣ ಈ ಜನರಿಗೆ ಸಂಬಂಧಿಸಿದ ಯಾವುದೇ ವಾಗ್ದಾನಗಳಲ್ಲಿ ಪರಲೋಕ ಸಂಗತಿಗಳ ಬಗ್ಗೆ ಹೇಳಿರುವುದಿಲ್ಲ. ಅವರ ಕರೆಯು ಸಿದ್ಧತಾ ಸ್ಥಿತಿಯಾಗಿದ್ದು, ಇದು ಅಂತ್ಯಥಃ ಆ ಜನಾಂಗದ ಉಳಿಕೆಯವರು ಮಹಾ ಕರೆಯನ್ನು ಮತ್ತು ಈ ಮಹಾಕರೆಯ ಮೂಲಕ ದೇವರು ಮೊದಲಿಗೆ **ಮಾತನಾಡಲು ಪ್ರಾರಂಭಿಸಿದ** ಮಹಾ ರಕ್ಷಣೆಯ ಲಾಭವನ್ನು ಹೊಂದುವುದಕ್ಕೆ ಸಿದ್ಧತೆ ನಡೆಸುವುದಾಗಿತ್ತು ಮತ್ತು ಅದನ್ನು ಕೇಳಿದವರಿಂದ ನಮಗೆ ಅದು ದೃಢವಾಯಿತು. – **"ಇದು ಕರ್ತನಿಂದ ಮೊದಲು ನಮಗೆ ಹೇಳಲ್ಪಟ್ಟಿತು ; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು"** (ಇಬ್ರಿಯ ೨: ೩). ಆದುದರಿಂದ, ಈ ಮಹಾ ಕರೆಯ ಅಥವಾ ಪರಲೋಕದ ಕರೆಯ ಶರತ್ತುಗಳನ್ನು ನಾವು ಹಳೆ ಒಡಂಬಡಿಕೆಯಲ್ಲಿ ಹುಡುಕದೆ ಹೊಸ ಒಡಂಬಡಿಕೆಯಲ್ಲಿ ಹುಡುಕತಕ್ಕದ್ದು ; ನಮ್ಮ ತಿಳುವಳಿಕೆಯ ಕಣ್ಣುಗಳು ದೇವರ ಆಳವಾದ ಸಂಗತಿಗಳನ್ನು ಗ್ರಹಿಸಲು ತೆರೆಯಲ್ಪಟ್ಟಿದ್ದರೂ, ಮನುಷ್ಯ ವರ್ಗದ ಇಸ್ರಾಯೇಲ್ಯರೊಡನೆ ಆತನ ವ್ಯವಹಾರ ಮತ್ತು ಒದಗಿಸುವಿಕೆಗಳಲ್ಲಿ ನಾವು ಆತ್ಮಿಕ ಬೀಜಕ್ಕೆ ಲಾಭದಾಯಕವಾದ ಕೆಲವೊಂದು ಲಾಕ್ಷಣಿಕ ಪಾಠಗಳನ್ನು ಕಾಣಬಹುದು ; ಯಾಕೆಂದರೆ, ಅಪೋಸ್ತಲನು ನಮಗೆ

ಸೂಚಿಸುವಂತೆ ಮನುಷ್ಯ ವರ್ಗದ ಇಸ್ರಾಯೇಲ್ಯರು ಮತ್ತು ಅವರ ನಿಯಮಗಳು ಹಾಗೂ ಅವರೊಂದಿಗೆ ದೇವರ ವ್ಯವಹಾರಗಳು ನೂತನ ಸೃಷ್ಟಿಯ ಸದಸ್ಯರುಗಳಿಗೆ ಸೇರಿದ ಉತ್ತಮ ಸಂಗತಿಗಳ ಛಾಯೆ ಅಥವಾ ನಮೂನೆಯಾಗಿವೆ.

ದೇವರ ಯೋಜನೆಯ ಎಲ್ಲಾ ಸಂಗತಿಗಳಲ್ಲಿ ಕ್ರಿಸ್ತನಿಗೆ ಸರ್ವೋತ್ಕೃಷ್ಟತೆ ಇರಬೇಕಾದುದರಿಂದ, ಆತನು ಪ್ರಥಮ, ಶ್ರೇಷ್ಟನಾದ ಮಹಾ ಯಾಜಕನಾಗುವುದು ಅಗತ್ಯವಾಗಿತ್ತು. ದೇವರ ಮಕ್ಕಳನ್ನೊಳಗೊಂಡ ನೂತನ ಸೃಷ್ಟಿಯ ಮುಂದಾಳುವೂ, ರಕ್ಷಣಾ ನಾಯಕನೂ ಆಗಿರುವ ಆತನ ಆದರ್ಶದಲ್ಲಿ ಅವರು ತಮ್ಮನ್ನು ರೂಪಿಸಿಕೊಂಡು, ಆತನ ಹೆಜ್ಜೆ ಜಾಡಿನಲ್ಲಿ ನಡೆಯ ಬೇಕಾಗಿರುವುದರಿಂದ, ಪುರಾತನ ಅರ್ಹರಿಗೆ ನೂತನ ಸೃಷ್ಟಿಯಲ್ಲಿ ಯಾವ ಪಾತ್ರವೂ ಇಲ್ಲದಿರುವುದಕ್ಕೆ ನಮಗೆ ತೃಪ್ತಿಕರ ಕಾರಣ ದೊರೆಯುತ್ತದೆ. ಸ್ನಾನಿಕನಾದ ಯೋಹಾನನ ಬಗ್ಗೆ **“ ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕ ರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ”** (ಮತ್ತಾಯ ೧೧:೧೧) ಎಂದು ನಮ್ಮ ಕರ್ತನು ನುಡಿದ ಮಾತುಗಳು ಇದನ್ನು ಸಮರ್ಥಿಸುತ್ತವೆ. ಹಿಂದಿನ ದೈವೇಚ್ಛೆಯ ಸಹೋದರರುಗಳ ವಿಶ್ವಾಸ ಮತ್ತು ಅಮೂಲ್ಯವಾದ ಗುಣನಡತೆಯ ಬಗ್ಗೆ ತನ್ನ ಉನ್ನತ ಪ್ರಶಂಸೆಗಳನ್ನು ವ್ಯಕ್ತಪಡಿಸುತ್ತಲೇ ಅಪೊಸ್ತಲನು **“ ದೇವರು ನಮಗೋಸ್ಕರ ಶ್ರೇಷ್ಟವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು”** (ಇಬ್ರಿಯ ೧೧:೪೦).

ಇದರೊಂದಿಗೆ, ಆದಾಮನ ಪಾಪದ ದೆಸೆಯಿಂದಾಗಿ ಇನ್ನೂ ಶಿಕ್ಷೆಯನ್ನನುಭವಿಸುತ್ತಿರುವಾಗಲೇ ಯಾರನ್ನಾದರೂ ಕರೆಯಲು ಸಾಧ್ಯವಿಲ್ಲವೆಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಈ ‘ಮಹಾ ಕರೆ’ಯಲ್ಲಿ ಕರೆಯಲ್ಪಡಲು ಆದಾಮನ ದಂಡನೆಯಿಂದ ಪ್ರತಿಪಾದನೆಯು ಮೊದಲಿಗೆ ದೊರೆಯಬೇಕು. ಇದು ಮನುಷ್ಯ ವರ್ಗದ ಇಸ್ರಾಯೇಲ್ಯರಿಗೂ ಹೋರಿ ಕುರಿಗಳ ರಕ್ತಸುರಿಸುವುದರ ಮೂಲಕ ದೊರೆಯಲಿಲ್ಲ, ಯಾಕೆಂದರೆ ಇವುಗಳು ಎಂದಿಗೂ ಪಾಪವನ್ನು ನಿವಾರಿಸಲು ಸಾಧ್ಯವಿಲ್ಲ. ಇವುಗಳು ನಮ್ಮ ಜನಾಂಗದ ವಿರುದ್ಧ ಕೇವಲ ಪ್ರತಿಪಾದನೆಯ ಹಕ್ಕುಕೇಳಿಕೆಯ ಉತ್ತಮ ಬಲಿಯ ನಮೂನೆಗಳಾಗಿವೆ. ಈ ಕಾರಣದ ದೆಸೆಯಿಂದ ನಮ್ಮ ಕರ್ತನಾದ ಯೇಸುವು ವಿಮೋಚನೆಯ ಬೆಲೆ ತೆತ್ತು ಅದನ್ನು ತನ್ನ ಅಮೂಲ್ಯ ರಕ್ತದ ಮೂಲಕ ಕೊಂಡುಕೊಳ್ಳುವ ವರೆಗೆ ಕರೆಯು ಪ್ರಾರಂಭವಾಗಲು ಸಾಧ್ಯವಿಲ್ಲ. ವಿಮೋಚಕನು ಬೆಲೆ ತೆತ್ತು ಪರಲೋಕಕ್ಕೆ ಏರಿ ಹೋಗಿ ಅದನ್ನು ಅವರ ಪರವಾಗಿ ಅರ್ಪಿಸುವವರೆಗೆ ಅಪೊಸ್ತಲರನ್ನು ಸಹಾ ನೂತನ ಸೃಷ್ಟಿಗೆ ಪ್ರಯೋಗಿಕವಾಗಿ ಕರೆದು ಅಂಗೀಕರಿಸಿಕೊಳ್ಳಲಾಯಿತು. ನಂತರ, ಅವರೆಗೆ ಅಲ್ಲ, ತಂದೆಯು ಪಂಚಾಶತ್ತಮ ದಿನದಂದು ನೇರವಾಗಿ ಆ ವಿಶ್ವಾಸಿಗಳನ್ನು ಗುರುತಿಸಿ ಅವರನ್ನು ‘ನೂತನ ಸೃಷ್ಟಿ’ಗಳನ್ನಾಗಿ ಪವಿತ್ರಾತ್ಮನ ಮೂಲಕ **ಪಡಕೊಂಡನು.** ನಮ್ಮ ಕರ್ತನು ಫರಿಸಾಯರಿಗೆ **“ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಪಶ್ಚಾತ್ತಾಪ ಪಡಲು ಕರೆಯುವುದಕ್ಕೆ ಬಂದವನು”** (ಮತ್ತಾಯ ೯:೧೩) ಎಂದು ಸತ್ಯವಾಗಿ ಹೇಳಿದನು. ಮಾನವರನ್ನು ಪಶ್ಚಾತ್ತಾಪ ಪಡಲು ಕರೆಯುವುದು ಮತ್ತು ದೇವ ಸ್ವಭಾವದ ಮಹಾ ಕರೆಗೆ ಮತ್ತು ಕ್ರಿಸ್ತನೊಂದಿಗೆ ಜೊತೆ–ವಾರಸುದಾರರಾಗಲು ಕರೆಯುವುದು ಇವುಗಳಿಗೆ ಇರುವ ವಿಶಾಲವಾದ ವತ್ಯಾಸವನ್ನು ನಾವು ಗ್ರಹಿಸಿಕೊಳ್ಳಬೇಕು. ಯಾವ ಪಾಪಿಯನ್ನೂ ಇದಕ್ಕೆ ಕರೆಯಲಾಗದು ; ಈ ಕಾರಣ ನಾವು ‘ಸ್ವಭಾವದಲ್ಲಿ ಕ್ರೋಧದ ಮಕ್ಕಳಾಗಿದ್ದು’ ಮೊಟ್ಟಮೊದಲಿಗೆ ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ಪ್ರತಿಪಾದಿಸಲ್ಪಡಬೇಕು.

ಪೂರ್ಣವಾಗಿ ಇದಕ್ಕನುಸಾರವಾಗಿ ನಾವು ರೋಮಾಪುರದವರಿಗೆ ಬರೆದ ಪತ್ರಿಕೆಯ ಪ್ರಸ್ತಾವನೆಯಲ್ಲಿ **“ರೋಮಾಪುರದಲ್ಲಿ ದೇವರಿಗೆ ಪ್ರೀಯರೂ ದೇವಜನರಾಗುವುದಕ್ಕೆ ಕರೆಯಲ್ಪಟ್ಟವರೂ ಆಗಿರುವವರೆಲ್ಲರಿಗೆ . . .”** (ರೋಮ ೧:೭) ಎಂದು ಓದುತ್ತೇವೆ – ಪರಿಶುದ್ಧರಾಗುವುದಕ್ಕೆ, ದೈವ ಸ್ವಭಾವದಲ್ಲಿ ಪಾಲುಗಾರರಾಗುವುದಕ್ಕೆ

ಕರೆಯಲ್ಪಟ್ಟವರು. ಕೊರಿಂಥದವರಿಗೆ ಬರೆದ ಪತ್ರಿಕೆಯ ಪೀಠಿಕೆಯಲ್ಲಿ **" ಕೊರಿಂಥದಲ್ಲಿನ ದೇವರ ಸಭೆಗೆ ಅಂದರೆ ಕ್ರಿಸ್ತೇಸುವಿನಲ್ಲಿ ಪ್ರತಿಷ್ಟಿತರೂ ದೇವಜನರಾಗುವುದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ನಮಗೂ ಸಮಸ್ತ ದೇವಜನರಿಗೂ ಕರ್ತನಾಗಿರುವ ಯೇಸುಕ್ರಿಸ್ತನ ನಾಮ ಸ್ಮರಣೆಯನ್ನು ಮಾಡುವವರು ಎಲ್ಲಿದ್ದರೂ ಅವರೆಲ್ಲರಿಗೆ . . ."** (೧ ಕೊರಿ ೧:೨) ಎಂದು ಓದುತ್ತೇವೆ. ಈ ಕರೆಯ ಪ್ರತ್ಯೇಕತೆಯನ್ನು ಇನ್ನು ಹೆಚ್ಚಾಗಿ ಒತ್ತಿ ಹೇಳುತ್ತಾ ೯ನೇ ವಚನದಲ್ಲಿ ಲೇಖಕನು **" ದೇವರು ನಂಬಿಗಸ್ತನು ; ನಮ್ಮ ಕರ್ತನಾದ ಯೇಸುಕ್ರಿಸ್ತನೆಂಬ ತನ್ನ ಮಗನ ಅನ್ಯೂನತೆಗೆ ನಿಮ್ಮನ್ನು ಕರೆದವನು ಆತನೇ"** ಎಂದು ಬರೆಯುತ್ತಾನೆ. ಇದು ಸಹವಾಸದ, ಏಕತೆಯ ಅಭಿಪ್ರಾಯನ್ನು ಮೂಡಿಸುತ್ತದೆ. ಆ ಕಾರಣ ಆಲೋಚನೆ ಏನೆಂದರೆ, ಈ ಕರೆಯ ಉದ್ಧೇಶವೆಂದರೆ, ಜನರಲ್ಲಿ ಯಾರು ವಿಮೋಚಕನೊಂದಿಗೆ ನೂತನ ಸೃಷ್ಟಿಯಲ್ಲಿ ಒಂದಾಗುವರು ಮತ್ತು ಆತನ ಪ್ರಾಮಾಣಿಕತೆಯ ನಿಮಿತ್ತ ಆತನಿಗೆ ದೊರಕಿರುವ ಮಹಿಮೆಯ, ಗೌರವದ ಮತ್ತು ನಿರ್ಲಯತ್ವಗಳಲ್ಲಿ ಆತನ ಜೊತೆ- ವಾರಸುದಾರರಾಗುವರೆಂದು ಕಂಡುಕೊಳ್ಳುವುದು.

ಇಲ್ಲಿ ನಾವು ಕೆಲವು ಶರತ್ತುಗಳ ಮೇರೆಗೆ ಕ್ರಿಸ್ತನೊಂದಿಗೆ ಜೊತೆ ವಾರಸುದಾರರನ್ನಾಗಿ ಮಾಡಲ್ಪಡುತ್ತೇವೆ ಎಂಬ ಅಪೊಸ್ತಲನ ಮಾತುಗಳಾದ **" ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುದಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು"** (ರೋಮ ೮:೧೭) ಎಂಬುದು ನೆನಪಿಗೆ ಬರುತ್ತವೆ. ೧ ಕೊರಿಂಥ ೧:೨೪ ರಲ್ಲಿ ಅಪೊಸ್ತಲನು ತಾನು ಚರ್ಚಿಸುತ್ತಿರುವ ಕರೆಯು ಯಾವುದೇ ಅರ್ಥದಲ್ಲಿ ಒಂದು ಕಾಲದಲ್ಲಿ ಯೆಹೂದ್ಯರಿಗೆ ಕರೆಯಂತಲ್ಲ ಎಂದು ತೋರಿಸಿಕೊಡುವುದಕ್ಕಾಗಿ **"ದೇವರಿಂದ ಕರಿಸಿಕೊಂಡವರು ಯೆಹೂದ್ಯರಾಗಲೀ, ಗ್ರೀಕರಾಗಲೀ ಅವರಿಗೆ ಇಂಥವನು ದೇವರ ಶಕ್ತಿಯೂ, ದೇವರ ಜ್ಞಾನವೂ ಆಗಿರುವ ಕ್ರಿಸ್ತನೇ"** ಎಂದು ಹೇಳುತ್ತಾನೆ. ಕರೆಯಲ್ಪಡದ ಯೆಹೂದ್ಯರಿಗೆ ಆತನು ಅಡಚಣೆಯೂ, ಕರೆಲ್ಪಡದ ಗ್ರೀಕರಿಗೆ ಆತನು ಮೂರ್ಖತನವೂ ಆಗಿದ್ದಾನೆ. ನಮ್ಮ ಕರ್ತನು ಮೊದಲಿಗೆ ಮರಣಹೊಂದಿ ನೂತನ ಒಡಂಬಡಿಕೆಗೆ ಜಾಮೀನಾಗದ ಹೊರತು ಈ ಸುವಾರ್ತಾ ಯುಗದ ಕರೆಯನ್ನು ಪ್ರಚುರಪಡಿಸಲಾಗದು ಎಂಬುದಕ್ಕೆ ಇಬ್ರಿಯರಿಗೆ ಬರೆದ ಪತ್ರಿಕೆಯ ೯:೧೪,೧೫ ರಲ್ಲಿ ವಿವರಿಸಿ ೭:೨೨ ರಲ್ಲಿ **" ಯೇಸು ಆಣೆಯೊಡನೆಯೇ ಯಾಜಕನಾದುದರಿಂದ ಎಷ್ಟೋ ಶ್ರೇಷ್ಟವಾದ ಒಡಂಬಡಿಕೆಗೆ ಹೊಣೆಗಾರನಾದನು"** ಎಂದಿದ್ದಾನೆ.

### ದೊಡ್ಡವರು, ಜ್ಞಾನಿಗಳು ಮತ್ತು ಬಹಳ ಕಲಿತವರನ್ನು ಹೆಚ್ಚಾಗಿ ಕರೆಯಲಾಗಲಿಲ್ಲ

ಈ ವಿಶೇಷ ಕರೆಯು ಯಾರಿಗಾದರೂ ಮಿತಗೊಳಿಸಿದ್ದಲ್ಲಿ ಅದು ಬಿದ್ದು ಹೋದ ಜನಾಂಗದ ಉತ್ತಮರಾದವರಿಗೆ – ಕುಲೀನರಿಗೆ, ಸದ್ಗುಣ ಶೀಲರಿಗೆ ಮತ್ತು ಮೇಧಾವಿಗಳಿಗೆ ಮಾತ್ರವೆಂದು ನಾವು ಸ್ವಾಭಾವಿಕವಾಗಿ ಊಹಿಸುತ್ತೇವೆ. ಆದರೆ, ಅಪೊಸ್ತಲನು ಈ ಆಲೋಚನೆಗೆ ವ್ಯತಿರಿಕ್ತವಾಗಿ **"ಸಹೋದರರೇ, ದೇವರು ನಿಮ್ಮನ್ನು ಕರೆದಾಗ ಎಚಿಥವರನ್ನು ಕರೆದನೆಂದು ಆಲೋಚಿಸಿರಿ. ನಿಮ್ಮೊಳಗೆ ಲೌಕಿಕ ದೃಷ್ಟಿಯಲ್ಲಿ ಜ್ಞಾನಿಗಳೂ ಅನೇಕರಿಲ್ಲ, ಅಧಿಕಾರಿಗಳೂ ಅನೇಕರಿಲ್ಲ, ಕುಲೀನರೂ ಅನೇಕರಿಲ್ಲ. ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವುದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ ; ದೇವರು ಬಲಿಷ್ಟರನ್ನು ನಾಚಿಕೆಪಡಿಸುವುದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ ; ದೇವರು ಈ ಲೋಕದ ಕುಲಹೀನರನ್ನೂ, ಅಸಡ್ಡೆಯಾದವರನ್ನೂ ಆರಿಸಿ ಕೊಂಡದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವುದಕ್ಕಾಗಿ ಗಣನೆಗೆ ಬಾರದವನ್ನು ಆರಿಸಿಕೊಂಡಿದ್ದಾನೆ, ಹೀಗಿರಲಾಗಿ ದೇವರ ಮುಂದೆ ಹೊಗಳಿಕೊಳ್ಳುವುದಕ್ಕೆ ಯಾರಿಗೂ ಆಸ್ಪದವಿಲ್ಲ"** (೧ ಕೊರಿಂಥ ೧:೨೬-೨೯). ಈ ಪರಿಸ್ಥಿತಿಗೆ ಕಾರಣವನ್ನು ಯಾರೇ ಆಗಲಿ ತಾನು ಈ ಎಲ್ಲಾ ಮಹಾ ಆಶೀರ್ವಾದಗಳಿಗೆ ತನ್ನ ಸ್ವಂತ ಯೋಗ್ಯತೆಯ ಮೇರೆಗೆ ಅರ್ಹನಾದೆನೆಂದು ಕೊಚ್ಚಿಕೊಳ್ಳದಿರಲಿ ಎಂದಾಗಿದೆ ಎಂದು ಅಪೊಸ್ತಲನು ವಿವರಿಸಿ ಹೇಳುತ್ತಾನೆ. ಈ ಎಲ್ಲಾ ಸಂಗತಿಗಳೂ

ದೇವದೂತರುಗಳಿಗೂ, ಮಾನವರಿಗೂ ಉದ್ದೇಶಿಸಲಾಗಿದೆ. ದೇವರ ಶಕ್ತಿಯು ಗುಣಲಕ್ಷಣಗಳನ್ನು ತಳದಿಂದಲೇ ಅಥವಾ ಹೀನಸ್ಥಿತಿಯಿಂದಲೇ ಅಮೂಲ್ಯವಾದುದಾಗಿ ಮತ್ತು ಶುದ್ಧವಾದುದಾಗಿ ಮಾರ್ಪಡಿಸುತ್ತದೆ. ಈ ಮಾರ್ಪಾಟು ಒತ್ತಾಯ ಪೂರ್ವಕವಾದುದಲ್ಲ, ಆದರೆ ಸತ್ಯದ ಮಾರ್ಪಡಿಸುವ ಶಕ್ತಿಯಿಂದಲೇ. ಇದು ಕರೆಯಲ್ಪಟ್ಟವರೊಡನೆ ಅವರಿಗೆ ನೀಡಲ್ಪಟ್ಟ ವಾಗ್ದಾನ ಮತ್ತು ನಿರೀಕ್ಷೆಗಳಿಗನುಸಾರವಾಗಿ, ಇವೆರಡೂ ದೇವರ ಚಿತ್ತವನ್ನು ನೆರವೇರಿಸಿ ಆತನಿಗೆ ಸಂತೋಷ ವನ್ನುಂಟುಮಾಡುವುದಕ್ಕಾಗಿ ತನ್ನ ಕಾರ್ಯವೆಸಗುತ್ತವೆ. ಈ ದೈವಿಕ ವ್ಯವಸ್ಥೆಯು ತಂದೆಯ ಮಹಿಮೆಯಲ್ಲಿ ಮಾತ್ರವಲ್ಲ, ಆತನು ಯಾರನ್ನು ಆಶೀರ್ವದಿಸುತ್ತಾನೋ ಅವರ ನಮ್ರತೆ ಮತ್ತು ಶಾಶ್ವತವಾದ ಒಳ್ಳೆಯತನದಲ್ಲಿಯೂ ಫಲಿಸುತ್ತದೆ. ನಾವು ಹೊಸ ಒಡಂಬಡಿಕೆಯ ಉದ್ದಕ್ಕೂ ಈ ಕರೆ ಮತ್ತು ಇದರ ಅಡಿಯಲ್ಲಿರುವ ರಕ್ಷಣೆಯು ಮಾನವರದ್ದಲ್ಲ, ಆತನ ಶಕ್ತಿಯ ಮೂಲಕವಾಗಿ ದೊರೆತದ್ದಲ್ಲ ಆದರೆ ದೇವರ ಕೃಪೆಯಿಂದಲೇ ಎಂಬ ಅನೇಕ ಹೇಳಿಕೆಗಳನ್ನು ನೋಡುತ್ತೇವೆ. ಈ ಕರೆಯು ನಿಯಮಾನುಸಾರವಾಗಿ ಗಣ್ಯರಿಗೆ ಕಡಿಮೆ ಆಕರ್ಷಣೆಯುಳ್ಳದ್ದೂ, ತಿಳುವಳಿಕೆಯಿಲ್ಲದವರಿಗೆ ಹೆಚ್ಚು ಆಕರ್ಷಣೀಯವೂ ಯಾಕಾಗಿದೆ ಎಂದು ಕಂಡುಕೊಳ್ಳುವುದು ಕಷ್ಟಕರ.

ಪತನಗೊಂಡ ಸ್ವಭಾವದಲ್ಲಿ ಹೆಮ್ಮೆಯೆಂಬುದು ಮುಖ್ಯವಾದ ಅಂಶವಾಗಿದೆ ಮತ್ತು ನಿರಂತರವಾಗಿ ಹಾಗೆಂದೇ ಎಣಿಸಿಕೊಳ್ಳಬೇಕು. ಯಾರು ತಮ್ಮ ಹೆಚ್ಚಿನ ಸಂಗಡಿಗರಿಗಿಂತ ಕಡಿಮೆಯಾಗಿ ಬಿದ್ದುಹೋಗಿದ್ದಾರೋ ಮತ್ತು ಆ ಮೂಲಕ ತಮ್ಮ ಸ್ವಭಾವದಲ್ಲಿ ಸರಾಸರಿಯಾಗಿ ತಮ್ಮ ಸಂಗಡಿಗರಿಗಿಂತ ಹೆಚ್ಚು ಕುಲೀನರೋ ಅಂಥವರು ಈ ಪರಿಸ್ಥಿತಿಗೆ ಶೀಘ್ರವೇ ಹೊಂದಿಕೊಂಡು ತಮ್ಮಲ್ಲಿ ಕೆಲಮಟ್ಟಿನ ಶ್ರೇಷ್ಟತೆ ಮತ್ತು ಹೆಮ್ಮೆಯ ಭಾವನೆಯನ್ನು ಹೊಂದುತ್ತಾರೆ. ಇಂಥವರು, ಅವರು ಕರ್ತನನ್ನು ಹುಡುಕುತ್ತಿದ್ದರೂ, ಆತನ ಕೃಪಾಶಿರ್ವಾದಗಳನ್ನು ಬಯಸುತ್ತಿದ್ದರೂ, ತಮಗಿಂತ ಹೆಚ್ಚು ಬಿದ್ದು ಹೋಗಿರುವವರಿಗಿಂತ, ಕಡಿಮೆ ಕುಲೀನರಾದವರಿಗಿಂತ ಯಾವುದೋ ಪ್ರತ್ಯೇಕವಾದ ತಳಹದಿಯ ಮೇರೆಗೆ ತಾವು ಕರ್ತನಿಂದ ಅಂಗೀಕರಿಸಲ್ಪಡುತ್ತೇವೆಂಬ ನಿರೀಕ್ಷೆಯ ಕಡೆಗೆ ವಾಲುತ್ತಾರೆ. ದೇವರ ನಿರ್ಧಿಷ್ಟಮಾನವು ಹೇಗೂ **ಸಮರ್ಪಕತೆ** ಆಗಿದೆ ; ಮತ್ತು ಆತನು ಆ ನಿರ್ಧಷ್ಟಮಾನವನ್ನು ತಲುಪದವರೆಲ್ಲರೂ ಶಿಕ್ಷೆಗೆ ಒಳಗಾಗುತ್ತಾರೆಂದು ಆತನು ಸ್ಪಷ್ಟವಾಗಿ ಹೇಳುವವನಾಗಿದ್ದಾನೆ. ಮತ್ತು ಶಿಕ್ಷೆಗೆ ಗುರಿಪಡಿಸದವರು ಅವರು ಹೆಚ್ಚು ಅಥವಾ ಪತನದಿಂದ ಬಹಳಷ್ಟು ಕಡಿಮೆಯಾಗಿ ಶ್ರಮಪಟ್ಟಿರಲಿ ಅವರೆಲ್ಲರನ್ನೂ ಅದೇ ವಿಮೋಚಕನಿಗೆ ಮತ್ತು ಅದೇ ಪಾಪದ ಪ್ರಾಯಶ್ಚಿತ್ತಕ್ಕೆ ಸೂಚಿಸಲಾಗುವುದು. ಅಂಗೀಕಾರದ ಈ ಶರತ್ತುಗಳು ಮಾನವ ಕುಟುಂಬದ ಕೀಳು ಮತ್ತು ಹೆಚ್ಚು ಪತನಗೊಂಡವರಿಗೆ ಕುಲೀನರಿಗಿಂತ ಹೆಚ್ಚು ಆಕರ್ಷಣೀಯವಾಗಿರುತ್ತದೆ – ಬಲಹೀನರು, ಬಿದ್ದು ಹೋದವರು ಒರ್ವ ರಕ್ಷಕನ ಅಗತ್ಯತೆಯನ್ನು ಉತ್ಸುಕತೆಯಿಂದ ಗ್ರಹಿಸುತ್ತಾರೆ, ಯಾಕೆಂದರೆ ಅವರು ತಮ್ಮ ಸ್ವಂತ ಅಸಮರ್ಪಕತೆಯನ್ನು ಹೆಚ್ಚಾಗಿ ಗಣನೆಗೆ ತರುತ್ತಾರೆ. ಅದೇ ಸಮಯದಲ್ಲಿ ಕಡಿಮೆಯಾಗಿ ಬಿದ್ದುಹೋದವರು, ಸ್ವಯಂ ತೃಪ್ತಿಯ ಆಳತೆಯಲ್ಲಿ ಕ್ರಿಸ್ತನ ಕ್ರೂಜೆಯ ಅಡಿದಾವರೆಯಲ್ಲಿ ಅಡ್ಡ ಬೀಳಲು, ಸಮರ್ಥನೆಯನ್ನು ಒಂದು ಉಚಿತವಾದ ಕೊಡುಗೆಯೆಂದು ಅಂಗೀಕರಿಸಲು ಮತ್ತು ಇದರ ಮತ್ತು ಕೇವಲ ಇದರ ಆಧಾರದ ಮೇಲೆ ಕೃಪಾಸನವನ್ನು ಸಮೀಪಿಸಿ ಕರುಣೆಯನ್ನು ಹೊಂದಿಕೊಳ್ಳಲು ಮತ್ತು ಕೃಪಾಸಹಾಯವನ್ನು ಕಂಡುಕೊಳ್ಳಲು ಒಲವು ತೋರುವುದಿಲ್ಲ. ಅವರು ತಮ್ಮ ಸ್ವಂತ ತಿಳಿವಳಿಕೆಗೆ ಬಾಗುವ ಒಲವುಳ್ಳವರಾಗಿದ್ದಾರೆ. ಇಂಥಾಃ ಉತ್ತಮವಾದ ತೃಪ್ತಿಕರ ಭಾವನೆಯು ಅವರನ್ನು ತಗ್ಗಾದ ಬಾಗಿಲಿನ ಮೂಲಕ ಇಕ್ಕಟ್ಟಾದ ಮಾರ್ಗವನ್ನು ಪ್ರವೇಶಿಸದಂತೆ ಅಡ್ಡಿಪಡಿಸುತ್ತದೆ.

ದೇವರು ತನ್ನ ನೂತನ ಸೃಷ್ಟಿಯ ಸದಸ್ಯರಾಗಲು ತಾನು ಆಮಂತ್ರಿಸುವವರೆಲ್ಲರಿಗೂ ನಮ್ರತೆ ಎಂಬ ಕಂತನ್ನು ಹೊರಿಸುತ್ತಾನೆ. ಅಪೊಸ್ತಲನು ಇದನ್ನು ಸೂಚಿಸುತ್ತಾ " **ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು"** (೧ ಪೇತ್ರ ೫:೬) ಎಂದು ಬರೆಯುತ್ತಾನೆ. ಕ್ರಿಸ್ತನು ಯಾವ ರೀತಿಯಲ್ಲಿ ತನ್ನನ್ನು ತಗ್ಗಿಸಿಕೊಂಡನು, ಯಾವ ಪ್ರತಿಷ್ಟೆಯನ್ನೂ ತೋರಿಸದೆ, ಸ್ವಭಾವದಲ್ಲಿ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದಿಕೊಳ್ಳುವಷ್ಟು ವಿಧೇಯನಾದನು (ಫಿಲಿಪ್ಪಿ ೨:೬–೮

ನೋಡಿರಿ) ಎಂಬಿತ್ಯಾದಿಯಾಗಿ ಹೇಳುತ್ತಾನೆ. ಪೇತ್ರನು **"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ"**(೧ ಪೇತ್ರ ೫:೫) ಎಂದು ಹೇಳುತ್ತಾನೆ. ಹೆಚ್ಚಾಗಿ ದೊಡ್ಡ ವ್ಯಕ್ತಿಗಳನ್ನಾಗಲೀ, ಜ್ಞಾನಿಗಳನ್ನಾಗಲೀ, ಹೆಚ್ಚು ವಿದ್ಯಾವಂತರನ್ನಾಗಲೀ ಕರೆಯದೆ ಮುಖ್ಯವಾಗಿ ಈ ಲೋಕದ ಬಡವರನ್ನು, ವಿಶ್ವಾಸದಲ್ಲಿ ಶ್ರೀಮಂತರಾದವರನ್ನು ಕರೆದನೆಂದು ನೀವು ನೋಡಿದ್ದೀರಿ ಸಹೋದರರೇ. ನಮ್ರತೆಯೆಂಬ ಕಂತನ್ನು ದೇವರು ವಿಧಿಸಿದಲ್ಲದೆ, ವಿಶ್ವಾಸವೆಂಬ ಮತ್ತೊಂದು ಕಂತನ್ನು ಸಹಾ ಆತನು ವಿಧಿಸಿದ್ದಾನೆ. ಸ್ವಲ್ಪವೂ ಸಂಶಯಪಡದೆ ಆತನಲ್ಲಿ ವಿಶ್ವಾಸವಿಡುವವರನ್ನು , ಆತನ ಕೃಪೆಯೇ ತಮಗೆ ಸಾಕೆಂದು ಹೇಳುವವರನ್ನು ಮತ್ತು ಆತನ ದಯಪಾಲಿಸುವ ಶಕ್ತಿಯೇ ತಮ್ಮ ಉನ್ನತಿಗೆ ಹಾಗೂ ಆತನು ಕರೆದ ವಿಜಯಕ್ಕೆ ಕಾರಣವೆಂದು ತಿಳಿದವರನ್ನು ಮಾತ್ರವೇ ತನ್ನ ನೂತನ ಸೃಷ್ಟಿಗೆ ಆತನು ಪಡಕೊಳ್ಳುತ್ತಾನೆ.

## ಗುಣನಡತೆಯು ಕರೆಯ ಒಂದು ಶರತ್ತಾಗಿದೆ

ದೇವರು ಜ್ಞಾನಿಗಳನ್ನಾಗಲೀ, ದೊಡ್ಡ ವ್ಯಕ್ತಿಗಳನ್ನಾಗಲೀ, ಜ್ಞಾನಿಗಳನ್ನಾಗಲೀ, ಹೆಚ್ಚು ವಿದ್ಯಾವಂತರನ್ನಾಗಲೀ ಹೆಚ್ಚಾಗಿ ಕರೆಯದೆ ಹೋದಾಗ್ಯೂ ಕೆಡುಕರು, ಭ್ರಷ್ಟರು ಅಥವಾ ಕೀಳುಮಟ್ಟದವರು ಎಂಬ ಅರ್ಥದಲ್ಲಿ ಆತನ ಜನರು ಕೆಳಮಟ್ಟದವರು ಅಥವಾ ತಿಳುವಳಿಕೆ ಇಲ್ಲದವರು ಎಂಬುದಾಗಿ ಅರ್ಥಮಾಡಿಕೊಳ್ಳಬಾರದು. ಇದಕ್ಕೆ ವ್ಯತಿರಿಕ್ತವಾಗಿ ಕರ್ತನು ತಾನು ಕರೆಯುವವರಿಗಾಗಿ ಸಾಧ್ಯವಾದಷ್ಟು ಶ್ರೇಷ್ಟ ನಿರ್ಧಿಷ್ಟ ಮಾನವನ್ನು ವಿಧಿಸಿದ್ದಾನೆ ; ಅವರನ್ನು ಪವಿತ್ರತೆಗೆ, ಶುದ್ಧತೆಗೆ, ಪ್ರಾಮಾಣಿಕತೆಗೆ ಮತ್ತು ನೈತಿಕತೆಯ ಸಿದ್ಧಾಂತಗಳಿಗೆ ಕರೆಯಲಾಗಿದೆ – ಈ ಎಲ್ಲಾ ಸಂಗತಿಗಳನ್ನು ತಮ್ಮ ಸ್ವಂತ ಹೃದಯಗಳಲ್ಲಿ ಮೆಚ್ಚಿಕೊಳ್ಳುವುದಕ್ಕಾಗಿ ಮತ್ತು ಅವುಗಳನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿಗೆ ಸೇರಿಸಿದಾತನ ಮಹಿಮೆಗಾಗಿ ಅವರನ್ನು ಕರೆದಿದ್ದಾನೆ ( ೨ ಪೇತ್ರ ೧:೩ ಮತ್ತು ೧ ಪೇತ್ರ ೨:೯ ಇವುಗಳನ್ನು ನೋಡಿರಿ). ಲೋಕವು ಅವರನ್ನು ಐಹಿಕವಾದ ರೀತಿಯಲ್ಲಿ ಮಾತ್ರವೇ ನೋಡಬಹುದು. ಐಹಿಕವಾಗಿ ಅವರು ಹೆಚ್ಚು ಗಣ್ಯರು ಅಥವಾ ಇತರರಿಗಿಂತ ಸಂಸ್ಕರಿಸಲ್ಪಟ್ಟವರು ಆಗದಿರಬಹುದು.–ವಾಡಿಕೆಯಂತೆ ಕಡಿಮೆಯವರಾಗಿರಬಹುದು. ಆದರೆ ದೇವರಿಂದ ಅವರ ಅಂಗೀಕಾರವು ಐಹಿಕ/ದೈಹಿಕ ವಾದುದಲ್ಲ, ಆದರೆ ಇದು ಆತ್ಮ ಸಂಬಂಧವಾಗಿದ್ದು, ಅವರ ಮನಸ್ಸು, ಉದ್ಧೇಶ ಮತ್ತು 'ಹೃದಯ'ಗಳಿಗನುಸಾರವಾದುದು. ಇದರ ಪರಿಣಾಮವಾಗಿ, ಅವರು ಕ್ರಿಸ್ತನಲ್ಲಿ ದೇವರ ಕೃಪೆಯನ್ನು ಹೊಂದಿಕೊಂಡ ಕ್ಷಣದಿಂದ ಮತ್ತು ಅವರು ತಮ್ಮ ಪಾಪಗಳ ಕ್ಷಮಾಪಣೆಯನ್ನು ಪಡಕೊಂಡು ತಮ್ಮನ್ನು ದೇವರಿಗೆ ಸಮರ್ಪಿಸಿಕೊಂಡ ಗಳಿಗೆಯಿಂದ ಅವರು ಅಬ್ರಹಾಮನ ಸಂತತಿಯವರಾಗಿದ್ದು ಸ್ವಾಭಾವಿಕವಾಗಿ ಒಳಗಾಗಿದ್ದ ಆ ಎಲ್ಲಾ ಅಪರಾಧಗಳಿಂದ ಮುಕ್ತರೆಂದು ಎಣಿಸಲಾಗುವುದು ; ಅವರ ದೇಹವು ಕರ್ತನ ಅರ್ಹತೆಯೆಂಬ ನಿಲುವಂಗಿಯಿಂದ ಸುತ್ತಲ್ಪಟ್ಟು ಅದರ ಎಲ್ಲಾ ದೋಷಗಳೂ ಮುಚ್ಚಿಹೋಗುವುವು. ಇದೊಂದು ದೇವರಿಂದ ಕರೆಯಲ್ಪಟ್ಟು, ಆತನಿಂದ ಅಂಗೀಕರಿಸಲ್ಪಟ್ಟ ಹೊಸ ಮನಸ್ಸು ಮತ್ತು ಹೊಸ ಚಿತ್ತವಾಗಿದ್ದು ಅವುಗಳೊಂದಿಗೆ ಮಾತ್ರವೇ ವ್ಯವಹರಿಸಲಾಗುವುದು.

ನಿಜವಾಗಿಯೂ ನೂತನ ಮನಸ್ಸು ಅಭಿವೃದ್ಧಿ ಹೊಂದಿದಂತೆಲ್ಲಾ ಹೆಚ್ಚು ಉದ್ಧಾತವಾಗಿ, ಗೌರವಾರ್ಹವಾಗಿ ಋಜುವಾಗಿ ಕಂಡು ಬರುತ್ತದೆ ಮತ್ತು ಕ್ರಮೇಣವಾಗಿ ಅದು ಹೆಚ್ಚು ಹೆಚ್ಚಾದ ಶಕ್ತಿಯನ್ನು ಪಡಕೊಂಡು ದೇಹದ ಮೇಲೆ ನಿಯಂತ್ರಣವನ್ನು ಹೊಂದುತ್ತದೆ. ದೇವರನ್ನಾಗಲೀ, ಆತನ ನೂತನ ಸೃಷ್ಟಿಯನ್ನಾಗಲೀ ಗುರುತಿಸದೇ ಹೋಗುವವರು ಸಹಾ ಅಂತಿಮವಾಗಿ ಅವರ ಒಳ್ಳೆಯ ಕ್ರೀಯೆಗಳನ್ನು, ಪವಿತ್ರ ಜೀವಿತವನ್ನು ಮತ್ತು ಸ್ವಸ್ಥವಾದ ಮನಸ್ಸನ್ನು ಕಂಡು ಆಶ್ಚರ್ಯ ಚಕಿತರಾಗುವರು. ಕೆಲವೊಮ್ಮೆ ಇವುಗಳನ್ನು ಸಹಾ ಅವರು ತುಚ್ಚ ಉದ್ಧೇಶಗಳಿಗೆ ಆರೋಪಿಸಬಹುದು. ಹೊಸ ಮನಸ್ಸಿನ ಕ್ರಮೇಣ ಬೆಳವಣಿಗೆ ಮತ್ತು ಹೆಚ್ಚು ಹೆಚ್ಚಾದ ದೇವರೊಂದಿಗಿನ ಅದರ ಸಾಮರಸ್ಯದ ಎದುರು ನಿಲ್ಲಲಾರದೆ ಅವರ ಉದ್ಧೇಶ ಮತ್ತು ಪ್ರಯತ್ನವು ಖಂಡಿತವಾಗಿಯೂ ದೇವರದೇ ಆದ ತಮ್ಮ ದೇಹದಲ್ಲಿ, ತಮ್ಮ ಆತ್ಮ ಮತ್ತು

ಮನಸ್ಸಿನಲ್ಲಿದೇವರನ್ನು ಮಹಿಮೆಪಡಿಸುವುದಾಗಿದ್ದರೂ ಇವರುಗಳು ತಾವು ಸಂಪರ್ಕವಿರಿಸಿಕೊಂಡಿದ್ದ ಮರ್ತ್ಯ ಶರೀರದೊಂದಿಗೆ ಪೂರ್ಣ ನಿಯಂತ್ರಣವನ್ನು ಹೊಂದದೇ ಹೋಗುತ್ತಾರೆ. (೧ ಕೊರಿಂಥ ೬:೨೦ ನೋಡಿರಿ).

ನೂತನ ಸೃಷ್ಟಿಯ ಕುರಿತಾಗಿ ಈ ಕೆಲವು ವಿಶಿಷ್ಟ ಪ್ರಕಾರಗಳನ್ನೂ, ಮಿತಿಗಳನ್ನೂ ನಾವು ಗಮನಿಸೋಣ. ಅಪೊಸ್ತಲನು ಕರೆಯಲ್ಪಟ್ಟ ಒಬ್ಬನಿಗೆ ನೀಡುವ ಪ್ರಬೋಧನೆಯು ಎಲ್ಲರಿಗೂ ಅನ್ವಯಿಸುತ್ತದೆ. ಅದೇನೆಂದರೆ, **"ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಟ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು"** (೧ ತಿಮೋ ೬:೧೨). ಈ ನೂತನ ಸೃಷ್ಟಿಗಳು ವಿರೋಧಿಯೊಂದಿಗೆ, ತಮ್ಮ ಸುತ್ತಲೂ ತಮ್ಮೆಲ್ಲ ಸಹವಾಸದೊಂದಿಗೆ ಹೆಚ್ಚುತ್ತಿರುವ ಪಾಪದೊಂದಿಗೂ ಮತ್ತು ಸ್ವಂತ ದೇಹದ ಬಲಹೀನತೆಗಳೊಂದಿಗೂ ಎರಡನೆಯದು ಕ್ರಿಸ್ತನ ನೀತಿಯೆಂಬ ಅರ್ಹತೆಯಿಂದ ಮುಚ್ಚಲ್ಪಟ್ಟಿದೆಯಾದರೂ ಅವುಗಳೊಂದಿಗೆ ಹೋರಾಡದೆ ವಿಜಯವನ್ನಾಗಲೀ, ಮಹಾ ಬಹುಮಾನವನ್ನಾಗಲೀ ಪಡಕೊಳ್ಳಲು ಸಾಧ್ಯವಿಲ್ಲ. ಅಪೋಸ್ತಲನು ಪುನಃ ಈ ವರ್ಗದವರನ್ನು **"ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವುದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೇಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೇವೆ"** (೧ ಥೆಸ ೨:೧೨) ಎಂದು ಪ್ರಬೊಧಿಸುತ್ತಾನೆ. ನೂತನ ಸೃಷ್ಟಿಯು ದೇವರ ಕರೆಯನ್ನು ಮತ್ತು ಮಹಿಮೆ ರಾಜ್ಯದಲ್ಲಿ ಅದರ ಅಂತಿಮವಾದ ಬಹುಮಾನ ಗ್ರಹಿಸುವುದು ಮಾತ್ರವಲ್ಲ, ಆತನು ಪ್ರಸ್ತುತ ಜೀವನದಲ್ಲಿ ಆತನು ದೇವರ ಮತ್ತು ಆತನ ನೈತಿಕತೆಯ ಪ್ರತಿನಿಧಿಯಾಗಿರಬೇಕು ಮತ್ತು ಅದರಕ್ಕನುಸಾರವಾಗಿ ನಡೆದುಕೊಳ್ಳಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಎಲ್ಲಾ ಜೀವಿಗಳು ಆ ಧರ್ಮಯುಗದ ಸರ್ಕಾರಕ್ಕೆ ತೋರಿಸಬೇಕಾಗುತ್ತದೆ (ಇದು ಕೋರಿಕೆಯಲ್ಲ). ಇಲ್ಲವಾದಲ್ಲಿ ಆತನು ತನ್ನ ಅವಿಧೇಯತೆಗಾಗಿ ಛಡಿಯೇಟನ್ನು ತಿನ್ನಬೇಕಾಗುತ್ತದೆ. ಅಂತ್ಯದಲ್ಲಿ ಜನರಿಂದ ಆತನು ನಾಶನವನ್ನು ಹೊಂದುತ್ತಾನೆ. ಪ್ರವಾದಿಯ ಮಾತುಗಳನ್ನು ಕೇಳದೇ ಅವಿಧೇಯತೆ ತೋರುವವನು ಜನರಿಂದ ಕಡಿಯಲ್ಪಡುವನು ಎಂದು ಬರೆದದೆ – ಆತನು ಎರಡನೆಯ ಮರಣವನ್ನಪ್ಪುವನು, ಅದರಿಂದ ಪುನರುದ್ಧಾರ ಹೊಂದಿಕೊಳ್ಳುವ ನಿರೀಕ್ಷೆಯಿಲ್ಲ.

ನಾವು ಈ ಹಿಂದೆ ನೋಡಿರುವಂತೆ ಈ ಸುವಾರ್ತಾ ಯುಗದಲ್ಲಿ ರಕ್ಷಣೆ ಹೊಂದಿದ ಎರಡನೆಯ ವರ್ಗದವರು ಇರಬಹುದಾದರೂ ಈ ಯುಗದಲ್ಲಿ ಎರಡನೆಯ ಕರೆ ಇಲ್ಲ – **" ಇವುಗಳಾದ ಮೇಲೆ ಇಗೋ, ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು. ಅವರು ಬಿಳೀ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದು ಕೊಂಡಿದ್ದರು. . . . . "** (ಪ್ರಕಟನೆ ೭ : ೯–೧೮ರ ವರೆಗೆ ಪೂರ್ತಿಯಾಗಿ ನೋಡಿರಿ). ಅವರು ದೇವರ ಆಲಯದಲ್ಲಿ ಇದ್ದು ಆತನ ಆಸನದ ಮುಂದೆ ಜೀವವುಳ್ಳ ಕಲ್ಲುಗಳಂತೆ ಆಸನಾರೂಢಗಿರುವ ಮದಲಗಿತ್ತಿಯರ ವಿರುದ್ಧ ಲಕ್ಷಣದಲ್ಲಿ ದೇವರ ಸೇವೆ ಮಾಡುತ್ತಿರುತ್ತಾರೆ. ಆದರೆ ಈ ಎರಡನೆಯ ಮಹಾ ಸಮೂಹದವರಿಗೆ ಯಾವುದೇ ಪ್ರತ್ಯೇಕವಾದ ಮತ್ತು ನಿರ್ಧಿಷ್ಟವಾದ ಕರೆಯಿಲ್ಲ. ಅವರು ತಡವಿಲ್ಲದ ಹೃದಯ ಪೂರ್ವಕವಾದ ವಿಧೇಯತೆಯನ್ನು ತೋರಿಸುತ್ತಿದ್ದರೆ ಬಹಳ ಸುಲಭವಾಗಿ ಮತ್ತು ತೃಪ್ತಿಯೊಡನೆ ದೇವರ ಸ್ವಭಾವದ ಮಹಿಮೆಯನ್ನು ಪಡಕೊಳ್ಳ ಬಹುದಿತ್ತು. ಅಂತ್ಯದಲ್ಲಿ ಅವರುಗಳು ಸಹಾ ವಿಜಯಗಳಾಗುತ್ತಾರೆ ಎಂಬುದನ್ನು ಅವರಿಗೆ ಖರ್ಜೂರದ ಗರಿಗಳನ್ನು ಕೊಡುವುದರಲ್ಲಿ ತೋರಿಬರುತ್ತದೆ ; ಆದರೆ ಅವರಲ್ಲಿರುವ ಉತ್ಸಾಹದ ಕೊರತೆಯಿಂದಾಗಿ ಅವರು ಗೆಲ್ಲುವ ವರ್ಗದವರಾಗಿ ಆರಿಸಿಬರಲು ತೊಡಕಾಗುತ್ತದೆ. ಈ ರೀತಿಯಲ್ಲಿ ಅವರು ಶಾಶ್ವತವಾದ ಜೊತೆ–ವಾರಸುದಾರಿಕೆಯನ್ನು, ನೂತನ ಸೃಷ್ಟಿಯ ಪಾಲುದಾರರಾಗುವ ಮಹಿಮೆಯನ್ನು ಹೊಂದಿಕೊಳ್ಳಲು ತಡೆಯುಂಟಾಗುತ್ತದೆ. ಅವರಿಗೆ ಗೆಲ್ಲುವವರಿಗೆ ದೊರೆಯುವ ಮತ್ತು ಪ್ರಸ್ತುತ ಜೀವನದಲ್ಲಿಯೂ ಅವರು ಅನುಭವಿಸುತ್ತಿರುವ ಹೆಚ್ಚಿನ ಸಂತೋಷ, ಸಮಾಧಾನ ಮತ್ತು ತೃಪ್ತಿ ಇವುಗಳನ್ನು ಕಸಿದುಕೊಳ್ಳಲಾಗುತ್ತದೆ. ನಾವು ಈ

ಹಿಂದೆ ನೋಡಿದಂತೆ ಅವರು ಪಡೆದ ಸ್ಥಾನವು ಸುವ್ಯಕ್ತವಾಗಿ ಬಹಳಷ್ಟು ರೀತಿಯಲ್ಲಿ ದೇವದೂತರುಗಳ ಸಮಕ್ಷೇತ್ರ ಅಥವಾ ಭೂಮಿಕಾಣಿಗೆ ಸಮವಾಗಿದೆ.

ಕರೆಗೆ ಸಂಬಂಧ ಪಟ್ಟಂತೆ ಮತ್ತೊಂದು ಆಲೋಚನೆ ಏನೆಂದರೆ ಅದರ ಕಾಲಾವಕಾಶವು ಮಿತಿಯುಳ್ಳದ್ದು. **"ನೀವು ಈ ಹೊತ್ತು ದೇವರ ಶಬ್ಧಕ್ಕೆ ಕಿವಿಗೊಟ್ಟರೆ, ನಿಮ್ಮ ಹಿರಿಯರು ದೇವರ ಕೋಪವನ್ನು ಎಬ್ಬಿಸಿದ ಸ್ಥಳದಲ್ಲಿ ಮಾಡಿದಂತೆ ನಿಮ್ಮ ಹೃದಯಗಳನ್ನು ಕಠಿಣ ಮಾಡಿಕೊಳ್ಳಬೇಡಿರಿ"** (ಇಬ್ರಿಯ ೩:೧೫) ಮತ್ತು **" ಪ್ರಸನ್ನತೆಯ ಕಾಲದಲ್ಲಿ ನಿನ್ನ ಮನವೆಯನ್ನು ಕೇಳಿದೆನು, ರಕ್ಷಣೆಯ ದಿನದಲ್ಲಿ ನಿನಗೆ ಸಹಾಯಮಾಡಿದೆನು ಎಂದು ದೇವರು ಹೇಳುತ್ತಾನಲ್ಲಾ. ಈಗಲೇ ಆ ಸುಪ್ರಸನ್ನತೆಯ ಕಾಲ; ಇದೇ ರಕ್ಷಣೆಯ ದಿನ"** (೨ ಕೊರಿ ೬:೨) ಎಂದು ಅಪೋಸ್ತಲನು ಘೋಷಿಸುತ್ತಾನೆ. ಈ ಸ್ವೀಕಾರಾರ್ಹ ದಿನ ಅಥವಾ ವರ್ಷ ಅಥವಾ ಕಾಲ ಅಥವಾ ಶಕವು ನಮ್ಮ ಕರ್ತನಾದ ಯೇಸುಕ್ರಿಸ್ತನಿಂದ ಮತ್ತು ಆತನ ಅಭಿಷೇಕದ ಕಾಲದೊಡನೆ ಪ್ರಾರಂಭವಾಯಿತು. ಆತನು **ಕರೆಯಲ್ಪಟ್ಟನು.** ಆತನು ಈ ಗೌರವವನ್ನು ತಾನಾಗಿಯೇ ತನ್ನ ಮೇಲೆ ವಹಿಸಿಕೊಳ್ಳಲಿಲ್ಲ ಆದು ಅಂದಿನಿಂದ ಸದಾ ಆತನೊಂದಿಗೆ ಮುಂದುವರೆಯಿತು – **"ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ "** (ಇಬ್ರಿಯ ೫:೪). ಮಾನವ ಸ್ವಭಾವದಿಂದ ದೈವಿಕ ಸ್ವಭಾವಕ್ಕೆ ಬದಲಾಗುವ ಹಕ್ಕನ್ನು ವಹಿಸಿ ಕೊಳ್ಳುವವನು ನಿಜವಾಗಿಯೂ ಧೈರ್ಯಶಾಲಿ. ಆದಾಮನ ಸಂತತಿಯ ಸದಸ್ಯನೂ ಮತ್ತು ಆತನು ಕಳಕೊಂಡ ಭೂಮಿಕಾಣಿಯ ಜೊತೆ–ವಾರಸುದಾರನಾಗಿ ಕ್ರಿಸ್ತನಲ್ಲಿ ಎಲ್ಲಾ ಐಶ್ವರ್ಯ, ಮಹಿಮೆ ಮತ್ತು ಗೌರವಗಳಿದ್ದವು ಮತ್ತು ಆತನು ದೇವರ ಕರೆಗೆ ಓಗೊಟ್ಟು ನ್ಯಾಯವಾದ ಸ್ಥಿರ ಅನುಭೋಗಿ ವಾರಸುದಾರನಾದನು.

ಈ ಕರೆಯ ಮುಕ್ತಾಯವು ಅಥವಾ "ರಕ್ಷಣಾ ದಿನ"ವು ಅಥವಾ "ಸ್ವೀಕಾರ್ಹ ಸಮಯ"ವು ಅದು ಪ್ರಾರಂಭವಾದುದಕ್ಕಿಂಥ ಇನ್ನೂ ಹೆಚ್ಚು ಅನಿಶ್ಚಿತವಾಗಿ ಬರುತ್ತದೆ. ಒಂದು ನಿರ್ಧಾರಿತ, ಸಕಾರಾತ್ಮಕವಾದ ಸಂಖ್ಯೆಯ ಜನರು ನೂತನ ಸೃಷ್ಟಿಯು ರಚನೆಗೊಳ್ಳುವಂತೆ ಅಭಿಷೇಕಿಸಲ್ಪಟ್ಟರು. ಈ ಸಂಖ್ಯೆಯು ಪೂರ್ಣಗೊಂಡ ಮೇಲೆ ಸುವಾರ್ತಾ ಯುಗದ ಕಾರ್ಯವು ಸಹಾ ಮುಕ್ತಾಯಗೊಳ್ಳುತ್ತದೆ. ಸಮಂಜಸ ಸಂಖ್ಯೆಯ ಜನರು ಕರೆಯಲ್ಪಟ್ಟ ಕೂಡಲೇ ಕರೆಯು ತಾನೇ ತಾನಾಗಿ ಸ್ಥಗಿತಗೊಳ್ಳುತ್ತದೆಂದು ನಾವು ಗಮನಿಸಬಹುದು. ಯಾಕೆಂದರೆ ಹಾಗೆ ಕರೆದವರಲ್ಲಿ ಎಷ್ಟು ಜನರು ಅವಿಧೇಯತೆಯಿಂದ ವಿಫಲರಾಗುತ್ತಾರೆಂದು, ತಮ್ಮ ಕರೆ ಮತ್ತು ಆಯ್ಕೆಗಳನ್ನು ಖಚಿತಪಡಿಸಿಕೊಳ್ಳುವುದರಲ್ಲಿ ಸೋತು ಹೋಗುತ್ತಾರೆಂದು ಮತ್ತು ಆ ಸ್ಥಳದಲ್ಲಿ ಬೇರೆಯವರನ್ನು ಭರ್ತಿಮಾಡಬೇಕಾಗುವುದೆಂದು ದೇವರಿಗೆ ಮೊದಲೇ ತಿಳಿದಿದ್ದರು ಸಹಾ , ತಾನು ಈ ಮೊದಲೇ ನಿರ್ಣಯಿಸಿದಕ್ಕಿಂತ ಒಂದೇ ಒಂದು ಹೆಚ್ಚಾಗಿ ಕರೆಯುವುದು ದೇವರಿಗೆ ಸಮಂಜಸವಲ್ಲ. ಹೀಗೆ ಅಂಗೀಕರಿಸುವುದು ಒಳ್ಳೆಯದಲ್ಲ ಮತ್ತು ಅದನ್ನು ನೆರವೇರಿಸಲು ಸಹಾ ಸಾಧ್ಯವಾಗದು. ಸರ್ವಶಕ್ತನು ಒಂದೇ ಒಂದು ಆಹ್ವಾನವನ್ನು ಹೆಚ್ಚಿಸುವುದರ ಮೂಲಕ ತನ್ನ ಸೃಷ್ಟಿಗಳೊಡನೆ ಲಘುವಾಗಿ ವರ್ತಿಸುವುದಿಲ್ಲವೆಂದು ಏಕರೂಪತೆಯು ಹಕ್ಕಿನಿಂದ ಹೇಳುತ್ತದೆ. ಈ ಮಿತಿಯುಳ್ಳ ಆಯ್ದ ಸಂಖ್ಯೆಯ ರಾಜ ಯಾಜಕ ವರ್ಗದ ಪ್ರತಿಯೊಬ್ಬರಿಗೂ ಒಂದೊಂದು ಕಿರೀಟವನ್ನು ನೀಡಲಾಗುವುದೆಂಬ ಆಲೋಚನೆಯನ್ನು ದೇವರವಾಕ್ಯಗಳು ತೋರಿಸುತ್ತವೆ. ಪ್ರತಿಯೊಬ್ಬರೂ ದೇವರ ಕರೆಗೆ ಓಗೊಟ್ಟಾಗ ಮತ್ತು ಅದರ ಅಡಿಯಲ್ಲಿ ತಮ್ಮ ಸಮರ್ಪಣೆಯನ್ನು ಮಾಡಿಕೊಂಡಾಗ ಒಂದು ಕಿರೀಟವು ಆತನಿಗಾಗಿ ಪ್ರತ್ಯೇಕವಾಗಿ ಇಡಲ್ಪಡುತ್ತದೆ. ಆದುದರಿಂದ, ಕರ್ತನು ಯಾರನ್ನಾದರೂ ಕರೆದು, ಕರೆಯಲ್ಪಟ್ಟವನು ಅದನ್ನು ಅಂಗೀಕರಿಸಿ ತನ್ನನ್ನು ಆ ಕರೆಗೆ ಒಪ್ಪಿಸಿಕೊಟ್ಟ ಮೇಲೆ ಆತನಿಗೆ ಯಾವುದೇ ಕಿರೀಟವನ್ನು ಆತನಿಗೆ ಇನ್ನೂ ಹಂಚಿಕೊಡಲು ಸಾಧ್ಯವಿಲ್ಲ, ಬೇರೆಯಾರಾದರೂ ತನ್ನ ಅಪ್ರಮಾಣಿಕತೆಯ ದೆಸೆಯಿಂದ ಅದನ್ನು ಕಳಕೊಳ್ಳುವವರೆಗೆ ಕಾಯಬೇಕು ಎಂದು ಆತನು ಹೇಳಿಯಾನೆಂದು ನಾವು ಊಹಿಸುವುದು ಸರಿಯಲ್ಲ. ನಮ್ಮ ಕರ್ತನು **" ಬೇಗನೇ ಬರುತ್ತೇನೆ, ನಿನಗಿರುವುದನ್ನು ಹಿಡುಕೊಂಡಿರು ; ನಿನ್ನ ಜಯಮಾಲೆಯನ್ನು ಯಾರೂ**

**ಅಪಹರಿಸಬಾರದು"** (ಪ್ರಕಟನೆ ೩:೧೧) ಎಂದು ಎಚ್ಚರಿಕೆಯ ಪ್ರಬೋಧನೆ ನೀಡುವವನಾಗಿದ್ದಾನೆ. ಮಿತಿಯುಳ್ಳ ಸಂಖ್ಯೆಯ ಕಿರೀಟಗಳಿರುವುದು ಮಾತ್ರವಲ್ಲ , ಆದರೆ ಅಂತಿಮವಾಗಿ , ಈ ಯುಗದ ಅಂತ್ಯದಲ್ಲಿ ಒಡಂಬಡಿಕೆಗೆ ಪ್ರಾಮಾಣಿಕರಾಗಿ ಜೀವಿಸದೇ ಹೋದವರನ್ನು ತಿರಸ್ಕರಿಸಲಾಗುವುದು ಮತ್ತು ಇತರರು ಆ ಸಮಯದಲ್ಲಿ ಕಿರೀಟಕ್ಕಾಗಿ ಕಾಯುತ್ತಿರುವರು ಎಂಬ ಅಭಿಪ್ರಾಯವನ್ನು ಇದು ನೀಡುತ್ತದೆ.

ನಮಗೆ ತಿಳಿದಿರುವಂತೆ ನಮ್ಮ ವಿಮೋಚಕನೊಂದಿಗೆ ಜೊತೆ ವಾರಸುದಾರರೂ ನೂತನ ಸೃಷ್ಟಿಯ ಸದಸ್ಯರೂ ಆಗುವ ಕರೆಯು ೧೮೮೧ರಲ್ಲಿ ಸ್ಥಗಿತಗೊಂಡಿದೆ. ಆದರೆ ನಾವು ಗ್ರಹಿಸುವುದೇನೆಂದರೆ, ವಿವಿಧ ಕ್ರೈಸ್ತ ಪಂಗಡಗಳಿಗೆ ಸೇರಿದ ಬಹಳಷ್ಟು ಜನರು ಅಂದರೆ ಸುಮಾರು ಇಪ್ಪತ್ತರಿಂದ ಮೂವತ್ತು ಸಾವಿರ ಜನರು ಆ ಸಮಯದಲ್ಲಿ ಸಂಪೂರ್ಣ ಪ್ರತಿಷ್ಠೆ ಮಾಡಿದವರಾಗಿದ್ದರೂ ಅವರ ಸ್ವಯಂ ತ್ಯಾಗದ ಒಡಂಬಡಿಕೆಯನ್ನು ನೆರವೇರಿಸುವಲ್ಲಿ ಅಪ್ರಮಾಣಿಕರಾಗಿದ್ದರು. ಇವರಲ್ಲಿ ಒಬ್ಬರ ನಂತರ ಒಬ್ಬರು ಅವರ ಪರೀಕ್ಷೆಯ ಸಂಪೂರ್ಣ ಮಟ್ಟ ತಲುಪಿದ ಮೇಲೆ ಅಪ್ರಮಾಣಿಕರಾಗಿ ಕಂಡುಬಂದಲ್ಲಿ ಕರೆಯಲ್ಪಟ್ಟವರ ಸಮೂಹದಿಂದ ತಿರಸ್ಕೃತರಾದರು. ಅದೇ ಸಮಯದಲ್ಲಿ ಅಭಿಷೇಕ ಹೊಂದಿದ ಇತರರು, ಕರೆಯ ವ್ಯಾಪ್ತಿಯಲ್ಲಿ ಇಲ್ಲವಾದರೂ ಕ್ರಿಸ್ತನೊಡನೆ ಸಾಂಗತ್ಯ ಮತ್ತು ಜೊತೆ–ವಾರಸುದಾರರಾಗುವಂತೆ ಸೇರಿಸಲ್ಪಟ್ಟರು. ಅವರ ಸರದಿ ಬಂದಾಗ ಪರೀಕ್ಷೆಗೊಳಗಾಗಿ ಅನರ್ಹರೆಂದು ಕಂಡು ಬಂದಲ್ಲಿ ಅವರು ಸಹಾ ತಿರಸ್ಕೃತಗೊಂಡು ಅವರ ಸ್ಥಳದಲ್ಲಿ ಪ್ರತಿಷ್ಠೆಯ ಮನೋವೃತ್ತಿಯಲ್ಲಿ ಕಾಯುತ್ತಿರುವ ಬೇರೆಯವರು ಸೇರಿಸಲ್ಪಡುತ್ತಾರೆ. ಸ್ಪಷ್ಟವಾಗಿ, ಈ ರೀತಿಯ ವ್ಯವಸ್ಥೆಯಿಂದಾಗಿ ೧೮೮೧ರಿಂದೀಚೆಗೆ ಸರ್ವಸಾಮಾನ್ಯ ಕರೆಯ ಅಗತ್ಯತೆಯು ಕಂಡುಬಂದಿರುವುದಿಲ್ಲ. ಈಗ ಸೇರಿಸಲ್ಪಡುವವರು ಸಹಾ ೧೮೮೧ರಲ್ಲಿ ಸ್ಥಗಿತಗೊಂಡಿರುವ ಸಾಮಾನ್ಯ ಕರೆಯ ಅಹ್ವಾನವಿಲ್ಲದೆಯೇ ತಮ್ಮ ಎಲ್ಲಾ ಸವಲತ್ತುಗಳನ್ನೂ, ಅವಕಾಶಗಳನ್ನೂ ಹೊಂದಿಕೊಳ್ಳಬಹುದಾಗಿದೆ. ಅವಕಾಶ ಅನುಮತಿನೀಡಿದಾಗ ಮನವಿ ಸಲ್ಲಿಸಿ ಅವರು ಹೊರಗೆ ಹಾಕಲ್ಪಟ್ಟವರ ಸ್ಥಾನದಲ್ಲಿ ಪ್ರವೇಶವನ್ನು ಗಿಟ್ಟಿಸಿಕೊಂಡಿದ್ದಾರೆ. ಈ ರೀತಿಯ ಹೊರಹಾಕುವಿಕೆ ಮತ್ತು ಒಳ ಸೇರುವಿಕೆಯು ನೂತನ ಸೃಷ್ಟಿಯ ಕಡೆಯ ಸದಸ್ಯನು ಅರ್ಹನೆಂದು ಕಂಡು ಬರುವ ವರೆಗೂ ಮುಂದುವರೆಯುವುದೆಂಬುದು ಮತ್ತು ಎಲ್ಲಾ ಕಿರೀಟಗಳೂ ಶಾಶ್ವತವಾಗಿ ಹಂಚಲ್ಪಡುತ್ತದೆಂಬುದು ನಮ್ಮ ಆಶಯವಾಗಿದೆ.

**" ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಬೇರೆ ಬರತಕ್ಕದ್ದಲ್ಲ, ನೀವು ಕತ್ತಲೆಯವರಲ್ಲ"** (೧ ಥೆಸ ೫:೪) ಎಂದು ಅಪೋಸ್ತಲನು ಹೇಳುತ್ತಾನೆ. ದೇವರ ವಾಕ್ಯದ ಈ ಹಿಂದಿನ ಎಲ್ಲಾ ಪೂರ್ವನಿದರ್ಶನಗಳೊಡನೆ ಸಾಮರಸ್ಯದಿಂದ ನಾವು ಈ ಸುವಾರ್ತಾ ಯುಗದ ಸುಗ್ಗಿಯ ಕಾಲದಲ್ಲಿ ಎಲ್ಲಾ ಯುಗದ ದೈವಿಕ ಯೋಜನೆಯ ಸಂಬಂದಿತ ಸತ್ಯಜ್ಞಾನವೊಂದನ್ನು ನಂಬುವರೆ ನಾವು ಒಲವು ತೋರುತ್ತೇವೆ. ದೇವಕುಮಾರನ ಪ್ರಸನ್ನತೆ ಮತ್ತು ಈ ಸುಗ್ಗಿಯ ಕಾರ್ಯಗಳು ದೇವರಿಂದ ಪ್ರತಿಷ್ಠೆಗೊಂಡವರೆಲ್ಲರ ಗಮನಕ್ಕೆ ಬರುತ್ತದೆ. 'ಪ್ರಸ್ತುತ ಸತ್ಯ'ವು ಪರೀಕ್ಷಾಕಾರಿ ಅಥವಾ ಇಲ್ಲಿ ಪ್ರತಿಷ್ಠೆಗೊಂಡವರಿಗೆ ಸಮಂಜಸವಾದ ಹ್ಲದಯ ಪರಿಸ್ಥಿತಿಯ ಸಾಕ್ಷಿಯಾಗಿತ್ತು. ನಮ್ಮ ಕರ್ತನ ಉಪಸ್ಥಿತಿ ಮತ್ತು ಯೆಹೂದ್ಯ ಕಾಲದ ಸುಗ್ಗಿಯು ಸಹಾ ಪ್ರಥಮ ಆಗಮನ ಕಾಲದಲ್ಲಿ ಈ ಲೋಕದ ಇಸ್ರಾಯೇಲ್ಯರಿಗೆ ಒಂದು ರೀತಿಯ ಪರೀಕ್ಷೆಯಾಗಿ ಪರಿಣಮಿಸಿತ್ತು. ಸತ್ಯದ ಸ್ಪಷ್ಟ ತಿಳುವಳಿಕೆಯ ಮತ್ತು ವಿಶ್ವಾಸದ ನಿಷ್ಠೆಯ ಬಗ್ಗೆ ರುಜುವಾತುಪಡಿಸಿದವರು ಈ ಸಮಯದಲ್ಲಿ ಅಮೂಲ್ಯ ರಕ್ತದ ಮತ್ತು ನಮ್ಮ ಕರ್ತನ ಸೇವೆಯ ಬಗ್ಗೆ ತಮ್ಮ ಆಳವಾದ ಸಮರ್ಪಣೆಯನ್ನು ವ್ಯಕ್ತಪಡಿಸಿದವರು ಮತ್ತು ದೇವರ ಯೋಜನೆಗಳ ಬಗ್ಗೆ ಸ್ಪಷ್ಟವಾದ ಒಳನೋಟವನ್ನು ಹೊಂದಿರುವವರು ೧೮೮೧ರ ಈಚೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದರೂ ಅಂತಹವರು ಕರ್ತನಿಂದ ಕ್ರಿಸ್ತನ ಜೊತೆ–ವಾರಸುದಾರರಾಗಿ ಅಂಗೀಕರಿಸಲ್ಪಟ್ಟಿದಾರೆಂಬುದು ನಮ್ಮ ನಿರೀಕ್ಷಣೆಯ ಭಾಗವಾಗಿದೆ. ಅವರ ಸಮರ್ಪಣೆಯು ಬಹಳ ಹಿಂದೆಯೇ ಕರೆಯು ಮುಕ್ತಾಯಗೊಳ್ಳುವ ಮೊದಲೇ ಅಗುತ್ತಿದ್ದರೆ, ಅವರು ಬಹಳ ಕಾಲದ ನಂತರ ಸಮರ್ಪಣೆಯ ಮನೋವ್ಲತ್ತಿಯೊಳಗೆ ಬರುತ್ತಿದ್ದಾರೆಂದು ನಾವು ಅರ್ಥಮಾಡಿಕೊಳ್ಳಬಹುದಿತ್ತು. ಆದುದರಿಂದ ಪ್ರಸ್ತುತ ಸತ್ಯದ ಜ್ಞಾನವನ್ನು ಅವರಿಗೆ ಆಶೀರ್ವಾದವಾಗಿ ಮತ್ತು ಕರ್ತನೊಂದಿಗೆ ಅವರ ಅತ್ಮದ ಅನ್ಯೂನತೆಯ ಕುರುಹಾಗಿ ದಯಪಾಲಿಸಲಾಗಿದೆ. ಅವರು

೧೮೮೧ರಲ್ಲಿ ಅಥವಾ ಅದಕ್ಕೂ ಹಿಂದೆ ಸಮರ್ಪಣೆಗೊಂಡವರಲ್ಲವಾದಲ್ಲಿ ಊಹೆ ಏನೆಂದರೆ, ಅವರು ಈಗ ಕರೆದ ವರ್ಗದ ಅನ್ಯೂನತೆಗೆ ಅಂಗೀಕರಿಸಲ್ಪಟ್ಟಿದ್ದಾರೆ ಮತ್ತು ಅವರಿಗೆ ಈ ಹಿಂದೆ ಕರೆಯಲ್ಪಟ್ಟು ಉತ್ಸಾಹದ ಕೊರತೆ ತೋರಿಸಿದವರ – ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲವಾಗಿದ್ದು ಉಗುಳಲ್ಪಟ್ಟವರ ಸ್ಥಾನವನ್ನು ಕೊಡಲಾಗಿದೆ. ಬರಲಿರುವ ಕಷ್ಟ ಕಾಲದಲ್ಲಿಯೂ ಅವರು ಅವರ ಭಾಗವನ್ನು ಯಥಾವತ್ತಾಗಿ ಪಡೆಯುತ್ತಾರೆ ಮತ್ತು ಅವರು ದೇವರ ವಾಕ್ಯದ ಮೂಲಕ ಕಲಿಯಬೇಕಾಗಿದ್ದ ಶಿಸ್ತು ಪಾಲನೆಗಳು ಮತ್ತು ದಂಡನೆಗಳ ಬಗ್ಗೆ ಅಮೂಲ್ಯವಾದ ಪಾಠಗಳನ್ನು ಕಲಿಯುತ್ತಾರೆ. ಮಹಾ ಸಂಕಟದ ಸಮಯದಲ್ಲಿ ಅವರು ಮಹಾ ಸಮೂಹದಲ್ಲಿ ಸ್ಥಾನ ಪಡಕೊಳ್ಳುತ್ತಾರೆ. ಈ ಕಾರಣದಿಂದ ಅವರು ಈ ಮಹಾ ಸಂಕಟಗಳ ಮೂಲಕ ಇಚ್ಛಾಪೂರ್ವಕವಾಗಿಯೂ ಮತ್ತು ಸಂತೋಷಪೂರ್ವಕವಾಗಿಯೂ ಕ್ರಿಸ್ತನ ಸಿಂಹಾಸನದಲ್ಲಿ ಸ್ಥಾನ ಪಡೆಯಬಹುದು.

## ದೇವರು ಯಾವ ರೀತಿಯಲ್ಲಿ ಕರೆಯುತ್ತಾನೆ?

***"ನೀವು ಕ್ರಿಸ್ತಯೇಸುವಿನಲ್ಲಿರುವುದು ಆತನಿಂದಲೇ. ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು"*** (೧ ಕೊರಿ ೧:೩೦)

## ಕ್ರಿಸ್ತನು ನಮ್ಮ ಜ್ಞಾನವು

ರಕ್ಷಣೆಯ ಹೆಜ್ಜೆಯಲ್ಲಿ ಜ್ಞಾನಕ್ಕೆ ಪ್ರಥಮ ಹಾಗೂ ಬಹು ಮುಖ್ಯವಾದ ಸ್ಥಾನವನ್ನು ನೀಡಲಾಗಿದೆ. ಜ್ಞಾನವಂತನ ಸಾಕ್ಷವು ಇದಕ್ಕೆ ಒಪ್ಪುತ್ತದೆ – **"ಜ್ಞಾನವು ಪ್ರಧಾನವಾದುದು ...... ನಿಮ್ಮ ಎಲ್ಲಾ ತಿಳುವಳಿಕೆಗಳನ್ನು ಪಡಕೊಳ್ಳುವುದರಲ್ಲಿ "** ನಾವೆಲ್ಲರೂ ಎಷ್ಟೇ ಕ್ರಮದಲ್ಲಿ ಇಡಲ್ಪಟ್ಟಿದ್ದರೂ, ಎಷ್ಟೇ ಬಲಹೀನರೂ ಅಥವಾ ಬಲಿಷ್ಟರು ಆಗಿದ್ದರೂ ನಾವು ಸೂಕ್ತ ಮಾರ್ಗವನ್ನು ಅನುಸರಿಸಲು ಜ್ಞಾನವು ಪ್ರಧಾನವಾಗಿ ಅವಶ್ಯವಾಗಿದೆ. ಇದನ್ನು ಎಲ್ಲಾ ಜನರೂ ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ. ಬುದ್ಧಿವಂತರೆಲ್ಲರೂ ಇನ್ನೂ ಹೆಚ್ಚಾದ ತಿಳುವಳಿಕೆ ಮತ್ತು ಜ್ಞಾನವನ್ನು ಬಯಸುತ್ತಾರೆ. ಬಹಳ ಮೂರ್ಖವಾದ ಮಾರ್ಗವನ್ನು ಅನುಸರಿಸುವವರು ಸಹಾ ನಿಯಮದ ಪ್ರಕಾರವಾಗಿ ಅವುಗಳನ್ನು ಆ ಸಮಯದಲ್ಲಿ ದಡ್ಡತನವೆಂದು ಅರಿಯದ ಮಾರ್ಗದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಆದಿಮಾತೆ ಹವ್ವಳೊಂದಿಗೂ ಹಾಗೆಯೇ ಆಯಿತು : ಆಕೆಯು ಜ್ಞಾನಕ್ಕಾಗಿ, ತಿಳುವಳಿಕೆಗಾಗಿ ಹಂಬಲಿಸಿದಳು ; ನಿಷಿದ್ದಗೊಳಿಸಿದ್ದ ಮರದ ಹಣ್ಣು ಜ್ಞಾನದ ದ್ವಾರವಾಗಿದೆ ಎಂಬಂತೆ ಆಕೆಗೆ ತೋರಿಬಂದು, ಸೃಷ್ಟಿಕರ್ತನಿಗೇ ಅವಿಧೇಯತೆ ತೋರುವ ಶೋಧನೆಗೆ ಆಕೆ ಒಳಗಾದಳು. ಆದುದರಿಂದ ಜ್ಞಾನವಂತ ಸಲಹೆಗಾರನು ಅಹ್ಲಾದಕರವಾದ ಜ್ಞಾನದ ಮಾರ್ಗದಲ್ಲಿ ಮತ್ತು ಅದರ ಶಾಂತಿಪಥದಲ್ಲಿ ನಮ್ಮನ್ನು ಕೊಂಡೊಯ್ಯುವುದು ಎಷ್ಟೋ ಅವಶ್ಯವಾಗಿದೆ.

ಆದಿಮಾತೆ ಹವ್ವಳು ಮತ್ತು ಆಕೆಯ ಆಕೆಯ ಸಮಗ್ರತೆಗೂ ಜ್ಞಾನದ ಮಾರ್ಗದರ್ಶನದ ಅವಶ್ಯಕತೆ ಇರುವಲ್ಲಿ ಆಕೆಯ ಪಥನಗೊಂಡ ಅಸಮರ್ಪಕ ಮಕ್ಕಳಾದ ನಮಗೆ ಅಂಥಾಃ ಮಾರ್ಗದರ್ಶನವು ಇನ್ನೂ ಹೆಚ್ಚಾಗಿಯೇ ಬೇಕಾಗುತ್ತದೆ. ನಮ್ಮ ಪರಲೋಕದ ತಂದೆ ನಮ್ಮನ್ನು ನೂತನ ಸೃಷ್ಟಿಯ ಸದಸ್ಯತ್ವಕ್ಕೆ ಕರೆಯುವಾಗ ನಮ್ಮ ಎಲ್ಲಾ ಅಗತ್ಯತೆಗಳನ್ನೂ ಮುಂತಿಳಿದಿದ್ದಾನೆ. ನಮ್ಮ ಸ್ವಂತ ಜ್ಞಾನವು ನಮಗೆ ಸಾಕಾಗುವುದಿಲ್ಲ, ವಿರೋಧಿಯ ಮತ್ತು ಆತನ ಮೋಸಕ್ಕೆ ಒಳಗಾದ ಅನುಯಾಯಿಗಳ ಜ್ಞಾನವು ನಮ್ಮ ಹಾನಿಗಾಗಿ ಕಾರ್ಯಗತಗೊಳ್ಳುವುದು – ಬೆಳಕು ಕತ್ತಲಾಗಿಯೂ, ಕತ್ತಲು ಬೆಳಕಾಗಿಯೂ ತೋರಿಬರುವುವು. , ಆದುದರಿಂದ ನಮ್ಮ ಪ್ರಸ್ತಾಪದ ವಿಷಯ **'ಕ್ರಿಸ್ತನು ನಮ್ಮ ಜ್ಞಾನವಾಗಬೇಕು'** ಎಂಬುದು. ನಾವು ಯಾವಾಗಲಾದರೂ ದೇವರ ಬಳಿಗೆ ಬರುವ ಮೊದಲು , ನಾವು ಯಾವಾಗಲಾದರೂ ನಾವು ಪಾಪನಿವೃತ್ತಿಯನ್ನು

ಹೊಂದಿಕೊಳ್ಳುವ ಮೊದಲು ಅಥವಾ ಅದರ ಮೂಲಕ ಮಕ್ಕಳ ಸಂಬಂಧವನ್ನು ತಲುಪುವ ಮೊದಲು ನಮಗೆ ಸಹಾಯ ಬೇಕು, ಮಾರ್ಗದರ್ಶನ ಬೇಕು, ಜ್ಞಾನ ಬೇಕು. ದೇವರು ನಮ್ಮ ತಿಳುವಳಿಕೆಯ ಕಣ್ಣುಗಳನ್ನು ತೆರೆಯುವುದಾದರೆ ದೇವರ ತನ್ನ ಮಗನ ಮೂಲಕವಾಗಿ ನಮಗೆ ಒದಗಿಸಿಕೊಟ್ಟಿರುವುದನ್ನೆಲ್ಲಾ ನಾವು ಗ್ರಹಿಸಬಹುದಾಗಿದೆ.

ಮೇಲಿನಿಂದ ಬರುವ ಜ್ಞಾನವನ್ನು ಕೇಳುವ ಕಿವಿಗಳು ನಮಗೆ ಇರಬೇಕಾದಲ್ಲಿ ಹೃದಯದ ನಿಷ್ಠಾವಂತ ಸ್ಥಿತಿಯ ಅಗತ್ಯವಿದೆ. ನಮ್ಮಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಮ್ರತೆ ಇರಬೇಕು. ಇಲ್ಲವಾದಲ್ಲಿ ನಾವು ಆಲೋಚಿಸಿ ತಿಳಿದು ಕೊಳ್ಳಬೇಕಾದುದಕ್ಕಿಂತ ಇನ್ನೂ ಹೆಚ್ಚಿನವರಾಗಿ ನಮ್ಮನ್ನು ನಾವು ಆಲೋಚಿಸಿಕೊಳ್ಳುತ್ತೇವೆ ಮತ್ತು ದೇವರ ದೃಷ್ಟಿಯಲ್ಲಿ ನಮ್ಮ ಬಲಹೀನತೆಗಳನ್ನು , ದೋಷಗಳನ್ನು, ಅನರ್ಹತೆಗಳನ್ನು ಗ್ರಹಿಸುವುದರಲ್ಲಿ ವಿಫಲರಾಗುತ್ತೇವೆ. ನಮ್ಮ ನಮ್ರ ಮನಸ್ಸು ಕಂಡುಕೊಳ್ಳುವ ನಮ್ಮ ಎಲ್ಲ ಕೊರತೆಗಳನ್ನು ಒಪ್ಪಿಕೊಳ್ಳುವ, ಅಂಗೀಕರಿಸುವಂತೆ ನಮ್ಮಲ್ಲಿ ಕೆಲಮಟ್ಟಿನ ಪ್ರಾಮಾಣಿಕತೆ ಅಥವಾ ನಿಷ್ಕಪಟತೆ ಇರಬೇಕು. ಈ ದೃಷ್ಟಿಕೋನದಿಂದ ನೋಡುವಾಗ, ಯಾರು ದೇವರೊಂದಿಗೆ ನೈತಿಕತೆ ಮತ್ತು ಸಾಮರಸ್ಯಗಳಿಗಾಗಿ ಬಯಸುತ್ತಾರೋ ಅಂಥವರಿಗೆ ಕರ್ತನ ಅನುಗ್ರಹಗಳು ಯೇಸು ಕ್ರಿಸ್ತನನ್ನು ರಕ್ಷಕನನ್ನಾಗಿ ಸೂಚಿಸುತ್ತವೆ. ಯಾರಾದರೂ ನಮಗಾಗಿ ಪೂರೈಸಲ್ಪಟ್ಟ ಪಾಪ ನಿವೃತ್ತಿಯ ವೇದಾಂತವನ್ನು ಮೊದಲಿಗೆ ಎಷ್ಟೇ ಅಸಮರ್ಪಕವಾಗಿ ಅರ್ಥಮಾಡಿಕೊಂಡಾಗ್ಯೂ ಅವರು ಕಡೆಪಕ್ಷ ಅವರುಗಳು ತಾವು ಸಹಾ ಇತರರಂತೆ "ಸ್ವಭಾವಿಕವಾಗಿ ಕ್ರೋಧದ ಮಕ್ಕಳು" ಎಂಬುದನ್ನು ಗ್ರಹಿಸಬೇಕು. – ಪಾಪಿಗಳು ; ಕ್ರಿಸ್ತನ ತ್ಯಾಗವು ನೈತಿಕತೆಯುಳ್ಳದ್ದು ಮತ್ತು ದೇವರು ಇದನ್ನು ನಮಗಾಗಿ ಒದಗಿಸಿದನು ಮತ್ತು ನಮ್ಮ ಪರವಾಗಿ ಅಂಗೀಕರಿಸಿದನು ; ಆತನ ಬಾಸುಂಡೆಗಳಿಂದ ನಮಗೆ ಗುಣವಾಗುವಂತೆ, ಆತನ ವಿಧೇಯತೆಯ ಮೂಲಕ ತಂದೆಯು ನಮ್ಮನ್ನು ಒಪ್ಪಿಕೊಳ್ಳುವಂತೆ, ನಮ್ಮ ಪಾಪಗಳು ಆತನ ಮೇಲೆ ಹಾಕಿದಂತೆ ಹಾಗೂ ಆತನು ಅದನ್ನು ಹೊತ್ತಂತೆ ಮತ್ತು ಆತನ ನೈತಿಕತೆ ಮತ್ತು ಅರ್ಹತೆಗಳು ನೈತಿಕತೆಯ ನಿಲುವಂಗಿಯೋಪಾದಿಯಲ್ಲಿ ನಮಗೆ ಅನ್ವಯಿಸುವಂತೆ ಎಣಿಕೆಯಾದವು. ನಾವು ಜ್ಞಾನದ ಮೇರೆಗೆ ಕಾರ್ಯವೆಸಗುವ ಮುನ್ನ ಕ್ರಿಸ್ತನು ಈ ರೀತಿಯಾಗಿ ನಮಗೆ **'ಜ್ಞಾನ'**ವಾಗಿ ಮಾಡಲ್ಪಟ್ಟನೆಂಬುದನ್ನು ನಾವು ನೋಡಬೇಕು ಮತ್ತು ಆತನ ಅರ್ಹತೆಯನ್ನು ಹೃತ್ಪೂರ್ವಕವಾಗಿ ಅಂಗೀಕರಿಸಿ ಕರ್ತನ ಮುಂದೆ ಪ್ರತಿಪಾದಿಸಲ್ಪಡಬೇಕು, ಶುದ್ಧೀಕರಿಸಲ್ಪಡಬೇಕು ಮತ್ತು ಆಗಿಂದಾಗ್ಗ್ಯೆ ಬಿಡುಗಡೆ ಮತ್ತು ಮಹಿಮೆಯನ್ನು ಹೊಂದಿಕೊಳ್ಳಬೇಕು. ಆದರೆ ಮುಂದಿನ ಹೆಜ್ಜೆ ಇಟ್ಟಾಗ ಕ್ರಿಸ್ತನು ನಮ್ಮ ಜ್ಞಾನವಾಗಿರುವುದು ಸ್ಥಗಿತಗೊಳ್ಳುವುದಿಲ್ಲ, ಆದರೆ ಆತನು ನಮ್ಮ ಪ್ರತಿಪಾದಕನಾಗುತ್ತಾನೆ. ಇಲ್ಲ : ನಮಗೆ ಆತನು ನಮ್ಮ ಜ್ಞಾನವಾಗಿ, ನಮ್ಮ ವಿವೇಕಿ ಸಲಹೆಗಾರನಾಗಿ ನಮಗೆ ಇನ್ನೂ ಬೇಕು. ಆತನ ಮಾರ್ಗದರ್ಶನದಲ್ಲಿ ನಾವು ಸಂಪೂರ್ಣ ಸಮರ್ಪಣೆಯನ್ನು ಮಾಡಿಕೊಳ್ಳುವ ಜ್ಞಾನವನ್ನು ಮತ್ತು ಅದನ್ನು ಪವಿತ್ರ ಜೀವನದ ಮೂಲಕ ಅನುಸರಿಸುವ ಮತ್ತು ತಂದೆಯ ಚಿತ್ತವನ್ನು ನೆರವೇರಿಸುವ ವಿವೇಕವನ್ನು ಕಂಡುಕೊಳ್ಳಬೇಕು. ನಾವು ತೆಗುದುಕೊಳ್ಳುವ ಪ್ರತಿಯೊಂದು ಹೆಜ್ಜೆಯಲ್ಲಿಯೂ, ವಿವೇಕವು ಪ್ರಧಾನ ಸಂಗತಿಯಗಿದೆ ; ನಮ್ಮ ಸಮರ್ಪಿತ ಅಥವಾ ಪರಿಶುದ್ಧ ಜೀವನ ಪರ್ಯಂತ, ನಾವು ಪರಲೋಕಪುರಕ್ಕೆ ಮಾಡುವ ನಮ್ಮ ಪ್ರಯಾಣದ ಪ್ರತಿಯೊಂದು ಹೆಜ್ಜೆಯಲ್ಲಿಯೂ ನಮಗೆ ಮೇಲಿನಿಂದ ಬರುವ ಜ್ಞಾನವು ಬೇಕು. ಇದನ್ನು ಅಪೋಸ್ತಲನು " **ಮೇಲಿನಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾದದ್ದು, ಆಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದು, ಕರುಣೆ ಮುಂತಾದ ಒಳ್ಳೇ ಫಲ ಗಳಿಂದ ತುಂಬಿರುವಂಥದು ಆಗಿದೆ ; ಅದರಲ್ಲಿ ಚಂಚಲವೂ ಕಪಟವೂ ಇಲ್ಲ"** (ಯಾಕೋಬ ೩:೧೭). ಈ ಲೋಕದ ಜ್ಞಾನವು ಸ್ವಾರ್ಥ, ಸ್ವಯಂ–ಇಚ್ಛೆ, ಸ್ವಯಂ–ಪರಿಗಣನೆ, ಸ್ವಯಂ–ನೀತಿ ಮತ್ತು ಸ್ವಯಂ–ತೃಪ್ತಿ, ಇವುಗಳ ಪಥದಲ್ಲಿ ತನ್ನ ಕಾರ್ಯವೆಸಗುತ್ತದೆ. ಈ ಸಂಗತಿಗಳು ಕಹಿ ಮತ್ಸರ ಮತ್ತು ಕಲಹಗಳಿಗೆ ಕಾರನವಾಗುತ್ತದೆ, ಯಾಕೆಂದರೆ ಈ ಜ್ಞಾನವು ಮೇಲಿಂದ ಬಂದದ್ದಾಗಿರದೆ ಈ ಲೋಕದಿಂದಲೇ ಬಂದದ್ದು, ವಿಷಯಲಂಪಟತೆ ಮತ್ತು ಪೈಶಾಚಿಕತೆಯಿಂದ ಕೂಡಿದ್ದು. ಆದರೆ ಪರಲೋಕದಿಂದ ಬಂದ ಜ್ಞಾನವು ಇದಕ್ಕೆ ವ್ಯತಿರಿಕ್ತವಾಗಿ ದೇವರ ಸ್ವಭಾವವಾದ ಪ್ರೀತಿಯೊಂದಿಗೆ

ಸಾಮರಸ್ಯವುಳ್ಳದ್ದು. " ಅದು ಹೊಟ್ಟೆ ಕಿಚ್ಚು ಪಡುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ, ಮರ್ಯಾದೆಗೆಟ್ಟು ನಡೆಯುವುದಿಲ್ಲ , ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವುದರಲ್ಲಿ ಸಂತೋಷ ಪಡುತ್ತದೆ" (೧ ಕೊರಿ:೧೩:೪,೫,೬).

ಈ ಜ್ಞಾನವನ್ನು ಕಾರ್ಯಗತಗೊಳಿಸುವುದರಲ್ಲಿ ಸಹಾ ಒಂದು ಕ್ರಮವಿದೆ, ಈ ಸಮಯದಲ್ಲಿ ಇದು ಅಪೊಸ್ತಲನು ಮೇಲೆಹೇಳಿದ ಎಲ್ಲಾ ಶರತ್ತುಗಳನ್ನು ಎತ್ತಿ ಹಿಡಿಯುವುದಾಗಿದ್ದರೂ ಇದು ಪ್ರತಿಯೊಂದಕ್ಕೂ ನೀಡುವ ಶ್ರೇಯಾಂಕದಲ್ಲಿ ವತ್ಯಾಸವಿದೆ. ಮೇಲಿನಿಂದ ಬರುವ ಜ್ಞಾನದ ಚೈತನ್ಯವು ಶಾಂತಿಶೀಲವಾಗಿದ್ದು ಅದು ಶಾಂತಿಯನ್ನು ಬಯಸುವುದಲ್ಲದೆ ಅದನ್ನು ಉತ್ತೇಜಿಸಲು ಬಯಸುತ್ತದೆ. ಹೀಗಿದ್ದರೂ ಇದು ಶಾಂತಿಗೆ ಮೊದಲ ಆದ್ಯತೆ ನೀಡದೆ ಶುದ್ಧತೆಗೆ ನೀಡುವುದಾಗಿದೆ – ಮೊದಲಿಗೆ ಶುದ್ಧತೆ ನಂತರ ಶಾಂತಿಶೀಲತೆ. ಈ ಲೋಕದ ಜ್ಞಾನವು 'ಯಾವ ಬೆಲೆ ತೆತ್ತಾದರೂ ಶಾಂತಿ' ಎಂಬ ಸಲಹೆಯನ್ನು ನೀಡುತ್ತದೆ. ಇನ್ನೂ ಆ ಸ್ವಾರ್ಥ ಶಾಂತಿಯನ್ನು ಉತ್ತೇಜಿಸುವಂತೆ ಆತ್ಮಸಾಕ್ಷಿಯನ್ನು ಬಲವಂತ ಮಾಡುತ್ತದೆ. ಶುದ್ಧವಾದ ಜ್ಞಾನವು ಸರಳವಾದುದು, ಕುತಂತ್ರವಿಲ್ಲದ್ದು, ಗೌರವಾನ್ವಿತವಾದುದು ಮತ್ತು ಮುಕ್ತವಾದುದು : ಅದು ಬೆಳಕನ್ನು ಪ್ರೀತಿಸುತ್ತದೆ; ಅದು ಕತ್ತಲೆಗೆ, ಪಾಪಕ್ಕೆ ಸಂಬಂಧಿಸಿಲ್ಲ ಅಥವಾ ಅಡಗಿಸಿಡಬೇಕಾದ ಯಾವುದನ್ನೂ ಅದು ಉಪಕರಿಸುವುದಿಲ್ಲ; ಅದು ಅಡಗಿಸಿಟ್ಟ ಕೆಲಸಗಳನ್ನು ಪಾಪದ ಕಾರ್ಯಗಳೆಂದು ಗ್ರಹಿಸುತ್ತದೆ, ಗುಪ್ತವಾದ ಸಂಗತಿಗಳು ಕೆಡುಕನ ಸಂಗತಿಗಳಾಗಿವೆ. ಅದು ಎಲ್ಲಿಯವರೆಗೆ ಪ್ರಾಮಾಣಿಕತೆ ಮತ್ತು ಶುದ್ಧತೆಯೊಂದಿಗೆ ಏಕರೂಪವಾಗಿರುತ್ತದೆಯೋ ಅಲ್ಲಿಯವರೆಗೆ ಶಾಂತಿಶೀಲವೆನಿಸುತ್ತದೆ. ಅದು ಶಾಂತಿ,ಸಾಮರಸ್ಯ ಮತ್ತು ಅನ್ಯೂನತೆಯನ್ನು ಅಪೇಕ್ಷಿಸುತ್ತದೆ. ಆದರೆ ಶಾಂತಿಯೇ ಮೊದಲನೆಯದಲ್ಲವಾದ್ದರಿಂದ ಅದು ಕೇವಲ ನೈತಿಕವಾಗಿ ಶಾಂತಿಯೊಡನಿರುತ್ತದೆ ಮತ್ತು ಪ್ರಮಾಣಿಕವಾದ, ಶುದ್ಧವಾದ ಮತ್ತು ಒಳ್ಳೆಯ ಸಂಗತಿಗಳೊಂದಿಗೆ ಸಾಮರಸ್ಯದಿಂದಿರುತ್ತದೆ.

ಈ ಪರಲೋಕದ ಜ್ಞಾನವು ಕೋಮಲವಾದುದು – ಅದರ ಯೋಜನೆ ಮತ್ತು ಪದ್ಧತಿಗಳಲ್ಲಿ ಒರಟಾದುದಲ್ಲ, ಕಠೋರವಾದುದಲ್ಲ . ಆದರ ಕೋಮಲತೆಯನ್ನು ಅದರ ಶುದ್ಧತೆ ಮತ್ತು ಶಾಂತಿಶೀಲತೆಗಳು ಅನುಸರಿಸುತ್ತವೆ. ಅದನ್ನು ಹೊಂದಿರುವವರು ಪ್ರಾಥಮಿಕವಾಗಿ ಕೋಮಲರು ನಂತರ ಶುದ್ಧರು ಮತ್ತು ಶಾಂತಿಶೀಲರೂ ಆಗಿರದೆ ಪ್ರಥಮವಾಗಿ ಶುದ್ಧರು, ಸತ್ಯದೊಂದಿಗೆ ಪವಿತ್ರಗೊಂಡವರು ಆಗಿದ್ದಾರೆ. ಅವರು ಶಾಂತಿಯನ್ನು ಬಯಸುವವರು ಮತ್ತು ಅದನ್ನು ಉತ್ತೇಜಿಸುವಲ್ಲಿ ಒಲವು ತೋರುವವರೂ ಆಗಿದ್ದಾರೆ ; ಆದುದರಿಂದ ಅವರು ಕೋಮಲರೂ ವಿನಂತಿಸಿಕೊಳ್ಳಲು ಸುಲಭವಾದವರೂ ಆಗಿದ್ದಾರೆ. ಆದರೆ ಅವರು ಶುದ್ಧತೆಯೊಂದಿಗೆ, ಶಾಂತಿಯೊಂದಿಗೆ ಮತ್ತು ಕೋಮಲತೆಯೊಂದಿಗೆ ಸಾಮರಸ್ಯದಿಂದ ಮಾತ್ರವೇ ವಿನಂತಿಸಿಕೊಳ್ಳಬಲ್ಲವರಾಗಿದ್ದಾರೆ. ಅವರನ್ನು ಯಾವುದೇ ಕೆಟ್ಟ ಕಾರ್ಯಗಳಿಗಾಗಿ ವಿನಂತಿಸಿಕೊಳ್ಳುವುದು ಸುಲಭವಲ್ಲ. ಯಾಕೆಂದರೆ ಪರಲೋಕ ಜ್ಞಾನವು ಅಂಥಾಃ ಕ್ರಮವನ್ನು ನಿಷೇದಿಸುತ್ತದೆ.

ಪರಲೋಕ ಜ್ಞಾನವು ಕರುಣೆ ಮತ್ತು ಒಳ್ಳೆಯಫಲಗಳಿಂದ ತುಂಬಿದೆ : ಅದು ಕರುಣೆಯಲ್ಲಿ ಸಂತೋಷಿಸುತ್ತದೆ. ಅದು ನಕಲು ಮಾಡಿಕೊಳ್ಳಬಯಸುವ ದೈವಲಕ್ಷಣಗಳಲ್ಲಿ ಇದು ಅತ್ಯವಶ್ಯಕವಾದುದೆಂದು ಅದಕ್ಕೆ ತೋರಿಬರುತ್ತದೆ. ಕರುಣೆ ಮತ್ತು ಕರ್ತನ ಪವಿತ್ರಾತ್ಮನ ಎಲ್ಲಾ ಒಳ್ಳೆಯ ಫಲಗಳು ಮೇಲಿನಿಂದ ಬರುವ ಜ್ಞಾನದ ಮೂಲಕ ಹೃದಯದಲ್ಲಿ ಬೆಳಗಿ, ಬೆಳೆದು, ಪಕ್ವಗೊಂಡು ಅದರಿಂದ ಹೊರಡುತ್ತದೆಂಬುದು ಸತ್ಯ. ಆದರೆ ಈ ಕರುಣೆಯು ತಿಳಿಕೆಯಿಲ್ಲದವರ, ಉದ್ಧೇಶಪುರ್ವಕವಲ್ಲದಂತೆ ತಪ್ಪು ಮಾಡುವವರನ್ನು ಅನುಕಂಪ ಮತ್ತು ಸಹಾಯ ಮಾಡುವ ದೃಷ್ಟಿಯಿಂದ ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತದೆ. ಉದ್ದೇಶಪೂರ್ವಕವಾಗಿ ತಪ್ಪು ಮಾಡುವವರ ಬಗ್ಗೆ ಅದಕ್ಕೆ ಅನುಕಂಪವಾಗಲೀ, ಸೇರುವಿಕೆಯಾಗಲೀ ಇರುವುದಿಲ್ಲ. ಯಾಕೆಂದರೆ, ಜ್ಞಾನದ ಹುರುಪು ಮೊದಲಿಗೆ ಕರುಣೆಯಲ್ಲ, ಶುದ್ಧತೆ. ಆದುದರಿಂದ ಈ ಜ್ಞಾನದ ಕರುಣೆಯು ಸಂಪೂರ್ನವಾಗಿ ಉದ್ಧೇಶರಹಿತ ಮತ್ತು ತಿಳುವಳಿಕೆಯಿಲ್ಲದೆಯೇ ತಪ್ಪು ಮಾಡುವವರ ಬಗ್ಗೆ ಪೂರ್ಣವಾಗಿ ತನ್ನ ಕಾರ್ಯವೆಸಗುತ್ತದೆ.

ಈ ಪರಲೋಕದ ಜ್ಞಾನವನ್ನು 'ಪಕ್ಷಪಾತವಿಲ್ಲದ್ದು' ಎಂದು ಘೋಷಿಸಲಾಗಿದೆ. ಪಕ್ಷಪಾತವು ಅನ್ಯಾಯವೆಂಬ ಅರ್ಥವನ್ನು ಕೊಡುತ್ತದೆ ; ಶುದ್ಧತೆ, ಶಾಂತಿ, ಕೋಮಲತೆ, ಕರುಣೆ ಮತ್ತು ಮೇಲಿನಿಂದ ಬರುವ ಜ್ಞಾನ ಚೈತನ್ಯದ ಫಲವು ನಮ್ಮನ್ನು ಇನ್ನುಮುಂದೆ ನಡತೆಯು ಅವರ ನಿಜ ಮೌಲ್ಯವನ್ನು ನಿರೂಪಿಸದ ಹೊರತು ಯಾವದೇ ವ್ಯಕ್ತಿಗಳನ್ನು ಗೌರವಿಸುವವರನ್ನಾಗಿ ನಡೆಸುವುದಿಲ್ಲ. ಮಾನವನ ಬಾಹ್ಯಲಕ್ಷಣಗಳು ಅಂದರೆ ಆತನ ಚರ್ಮದ ಬಣ್ಣ ಇತ್ಯಾದಿಗಳು ಕರ್ತನ ಆತ್ಮನಿಂದ – ಮೇಲಿನಿಂದ ಬರುವ ಜ್ಞಾನದ ಆತ್ಮನಿಂದ ನಿರ್ಲಕ್ಷಿಸಲ್ಪಡುತ್ತವೆ ; ಅದು ನಿಷ್ಪಕ್ಷಪಾತವುಳ್ಳದ್ದು ಮತ್ತು ಯಾವುದು ಶುದ್ಧವೋ, ಶಾಂತಿಶೀಲವೋ, ಕೋಮಲವೋ, ಸತ್ಯವಾದುದೋ ಇವುಗಳು ಎಲ್ಲೇ ಕಂಡರೂ, ಯಾವುದೇ ಸಂಧರ್ಭಗಳಲ್ಲಿ ಪ್ರಕಟಗೊಂಡರೂ ಅವುಗಳನ್ನು ಬಯಸುವುದಾಗಿದೆ.

ಮೇಲಿನಿಂದ ಬರುವ ಈ ಜ್ಞಾನವು ಇನ್ನೂ ಹೆಚ್ಚಾಗಿ 'ಕಪಟವಿಲ್ಲದ್ದು' – ಅದು ಅಷ್ಟೊಂದು ಶುದ್ಧವೂ, ಶಾಂತಿಶೀಲವೂ, ಕೋಮಲವೂ ಆಗಿದ್ದು ಅದರ ನಿಯಂತ್ರಣವಿರುವಲ್ಲಿ ಕಪಟತೆಯ ಅಗತ್ಯತೆ ಇರುವುದಿಲ್ಲ. ಆದರೆ ಪಾಪಮಯವಾದ ಎಲ್ಲಾದರಲ್ಲಿಯೂ ಅದು ಸಾಮರಸ್ಯವಿಲ್ಲದ್ದು, ಅನುಕಂಪವಿಲ್ಲದ್ದು, ಒಡನಾಡಿತನವಿಲ್ಲದ್ದು ಅಗಿರಲು ಬದ್ಧವಾಗಿದೆ. ಯಾಕೆಂದರೆ ಒಡನಾಟದಲ್ಲಿ, ಅನುಕಂಪದಲ್ಲಿ, ಶುದ್ಧವಾಗಿರುವ ಎಲ್ಲದರಲ್ಲಿ, ಅಥವಾ ಶುದ್ಧತೆ, ಶಾಂತಿ ಮತ್ತು ಕೋಮಲತೆಗಳನ್ನು ಮಾಡುವವುಗಳಲ್ಲಿ ಮತ್ತು ಇಂಥಾಃ ಪರಿಸ್ಥಿಗಳಲ್ಲಿ ಕಪಟತೆಗೆ ಅವಕಾಶವಿಲ್ಲ.

ದೇವರು ತನ್ನ ಮಗನ ಮೂಲಕವಾಗಿ ದಯಪಾಲಿಸಿರುವ ಈ ಎಲ್ಲಾ ಸಂಗತಿಗಳ ಪರಲೋಕದ ಜ್ಞಾನವು ಆತನ ವಿಮೋಚನಾ ಕಾರ್ಯದ ಸಂದೇಶದಲ್ಲಿ ಮಾತ್ರವಲ್ಲ, ಚೈತನ್ಯದ ಮತ್ತು ತಂದೆಗೆ ವಿಧೇಯರಾಗುವ ಕೃಪೆಯ ಪ್ರಕಟನೆಯಲ್ಲಿ ಸಹಾ ನಮಗೆ ವಾಕ್ಯಗಳ ಮತ್ತು ಉದಾಹರಣೆಗಳೆರಡರಲ್ಲಿಯೂ ನಮಗೆ ಬೋಧಿಸುತ್ತವೆ. ಮಾತ್ರವಲ್ಲದೆ, ಮೇಲಿನಿಂದ ಬರುವ ಈ ಜ್ಞಾನವು ನಮಗೆ ಕ್ರಿಸ್ತನ ಪ್ರತಿನಿಧಿಗಳಾದ ಅಪೋಸ್ತಲರುಗಳ ಬೋಧನೆಗಳ ಮೂಲಕ ಮಾತ್ರವಲ್ಲದೆ ಜ್ಞಾನದ ಆತ್ಮನನ್ನು ಪಡಕೊಂಡವರಾಗಿ ಪ್ರತಿ ನಿತ್ಯವೂ ತಮ್ಮ ಬೆಳಕು ಪರಲೋಕದ ತಂದೆಯನ್ನು ಮಹಿಮೆಪಡಿಸಲಿ ಎಂದು ಬಯಸುವವರ ಮೂಲಕ ಉಂಟಾಗುತ್ತದೆ.

## ಕ್ರಿಸ್ತನು ನಮ್ಮ ಪ್ರತಿಪಾದಕನಾಗಿದ್ದಾನೆ

ದೇವರ ಮತ್ತು ಮನುಷ್ಯರ ನಡುವೆ ಉಂಟಾಗಿರುವ ಸಂಧಾನದ ಬಗ್ಗೆ ಮತ್ತು ಇದರಲ್ಲಿ ನಮ್ಮ ಕರ್ತನಾದ ಯೇಸು ಕ್ರಿಸ್ತನು ಯಾರ್ಯಾರು ಆತನನ್ನು ಅಂಗೀಕರಿಸಿದ್ದಾರೋ ಅವರೆಲ್ಲರ ಪ್ರತಿಪಾದಕನಾಗಿರುವ ಬಗ್ಗೆ ನಾವೀಗಾಗಲೇ ಸ್ವಲ್ಪ ಮಟ್ಟಿಗೆ ಚರ್ಚಿಸಿದ್ದೇವೆ. ಆದರೆ ನಾವಿಲ್ಲಿ ನಿರ್ಧಿಷ್ಟವಾಗಿ ಪ್ರತಿಪಾದನೆ (ಸಮರ್ಥನೆ) ಎಂಬ ಸಾಮಾನ್ಯ ಪದದ ಬಗ್ಗೆ ಪರೀಕ್ಷಿಸುವವರಾಗಿದ್ದೇವೆ. ಯಾಕೆಂದರೆ ಇದು ದೇವಜನರಿಂದ ಅಸಮರ್ಪಕವಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲ್ಪಟ್ಟಿದೆ ಎಂದು ನಮಗೆ ತೋರಿಬರುತ್ತಿದೆ. ಪ್ರತಿಪಾದನೆ ಎಂಬ ಪದದ ಪ್ರಾಥಮಿಕ ಭಾವನೆ ಏನೆಂದರೆ (೧) ನ್ಯಾಯ ಅಥವಾ ಹಕ್ಕಿನ ಪ್ರಮಾಣ ; (೨) ಪ್ರಮಾಣದ ಹೊಂದಿಕೆಯನ್ನು ಮೀರಿ, ಅದರ ಅಗತ್ಯತೆಗನುಸಾರವಾಗಿ ಇಲ್ಲದಿರುವುದು (೩) ವ್ಯಕ್ತಿ ಅಥವಾ ವಸ್ತುವನ್ನು ಸಮಂಜಸವಾದ ಅಥವಾ ನ್ಯಾಯವಾದ ಪ್ರಮಾಣಕ್ಕೆ ತರುವುದು. ಇದಕ್ಕೆ ದೃಷ್ಟಾಂತವೆಂದರೆ ಒಂದು ಜೊತೆ ತ್ರಾಸದ ಬಟ್ಟಲು ಅಥವಾ ತಕ್ಕಡಿ. ಒಂದು ಬಟ್ಟಲ್ಲಿನಲ್ಲಿಯ ತೂಕವು ನ್ಯಾಯವನ್ನು ಪ್ರತಿನಿಧಿಸುತ್ತದೆ. ಮತ್ತೊಂದು ಕಡೆ ಪ್ರತಿನಿಧಿಸುವ ಮಾನವ ವಿಧೇಯತೆಯು ನ್ಯಾಯವನ್ನು ಸಮತೋಲನ ಗಳಿಸಬೇಕಾದ್ದಲ್ಲಿ ಅದೇ ತೂಕದ್ದಾಗಿರಬೇಕು. ಆದರೆ ಹೆಚ್ಚು ಕಡಿಮೆ ಇದು ಎಲ್ಲರಲ್ಲಿಯೂ ಕೊರತೆಯುಳ್ಳದ್ದಾಗಿರುತ್ತದೆ. ಈ ಕೊರತೆಯನ್ನು ಸರಿಪಡಿಸಿ ನ್ಯಾಯಕ್ಕೆ ಸರಿಸಮಾನಗೊಳಿಸುವಂತೆ ಅದಕ್ಕೆ ಏನನ್ನಾದರೂ ಸೇರಿಸಬೇಕಾಗುತ್ತದೆ. ಈ ದೃಷ್ಟಾಂತವನ್ನು ಹೆಚ್ಚು ನಿರ್ಧಿಷ್ಟವಾಗಿ ಅನ್ವಯಿಸುವುದರ ಮೂಲಕ ನಾವು ಆದಾಮನು ಮೂಲದಲ್ಲಿ ದೇವರೊಂದಿಗೆ ಸಾಮರಸ್ಯದಲ್ಲಿರುವಂತೆ ಮತ್ತು ಆತನಿಗೆ

ವಿಧೇಯನಾಗಿರುವಂತೆ ಸಮರ್ಪರ್ಕವಾಗಿ ಸೃಷ್ಟಿಸಲ್ಪಟ್ಟನು. ಇದು ಆತನ ಹಕ್ಕು ಮತ್ತು ಸಮಂಜಸವಾದ ನ್ಯಾಯ ಪರಿಸ್ಥಿತಿ.ಈ ರೀತಿಯಲ್ಲಿಯೇ ಆತನು ಮುಂದುವರೆಯಬೇಕಾಗಿತ್ತು. ಆದರೆ, ಪಾಪದ ದೆಸೆಯಿಂದ ಆತನು ದೇವರ ದಂಡನೆಗೆ ಒಳಗಾದನು ಮತ್ತು ಬಹಳ ಸಮಯದವರೆಗೆ ದೇವರ ಮಟ್ಟವನ್ನು ಮುಟ್ಟದ ರೀತಿಯಲ್ಲಿ ನೇರವಾಗಿ ತಿರಸ್ಕರಿಸಲ್ಪಟ್ಟನು. ಅಂದಿನಿಂದ ಆತನ ಪೀಳಿಗೆಯು 'ಪಾಪದಲ್ಲಿ ಜನಿಸಿ, ದುಷ್ಟತನದಲ್ಲಿ ರೂಪುಗೊಂಡು' ತಮ್ಮ ತಂದೆಯಾದ ಆದಾಮನಿಗಿಂತಲೂ ಕೆಳಮಟ್ಟದಲ್ಲಿ ಅಂದರೆ ದೇವರ ನ್ಯಾಯವು ಬಯಸುವ ಮಟ್ಟಕ್ಕಿಂತ ಬಹಳ ಕೀಳಾದ ಮಟ್ಟದಲ್ಲಿ ಜೀವಿಸುವವರಾದರು. ಇದನ್ನು ಒಪ್ಪಿಕೊಂಡ ನಂತರ, ಆದಾಮನ ಸಂತತಿಯ ಯಾರಾದರೂ ತಮ್ಮ ಸೃಷ್ಟಿಕರ್ತನಿಗೆ ನೂತನ ಸಮತೋಲನಕ್ಕೆ, ಪರೀಕ್ಷೆಗೆ ಅಥವಾ ತಾವು ಅಂತ್ಯವಿಲ್ಲದ ನ್ಯಾಯದ ಮಟ್ಟವನ್ನು ಪುನಃ ಮುಟ್ಟಬಲ್ಲೆವೋ ಎಂದು ಕೇಳುವುದು ನಿಷ್ಪ್ರಯೋಜಕವಾಗಿತ್ತು. ಅಂಥಾಃ ಪರೀಕ್ಷೆಯು ಪೂರ್ಣವಾಗಿ ನಿಷ್ಪ್ರಯೋಜಕವೆಂದು ನಾವು ಒಪ್ಪುತ್ತೇವೆ ; ಯೋಗ್ಯವಾಗಿದ್ದ ಮನುಷ್ಯನು ತನ್ನ ಅವಿಧೇಯತೆಯ ಕಾರಣ ತನ್ನ ನೆಲೆಯನ್ನು ಕಳಕೊಂಡಿರುವಲ್ಲಿ ಅಯೋಗ್ಯರೂ, ಬಿದ್ದುಹೋದವರೂ, ನೀತಿಭ್ರಷ್ಟರೂ ಆದ ನಮಗೆ ನ್ಯಾಯದ ಪ್ರಮಾಣವನ್ನು ಮುಟ್ಟುವ ಮತ್ತು ದೇವರ ಮುಂದೆ ನಮ್ಮನ್ನು ಸಮರ್ಥಿಸಿಕೊಳ್ಳುವ ಯಾವ ನಿರೀಕ್ಷೆಯೂ ಇರುವುದಿಲ್ಲ. ನಮ್ಮ ಜನಾಂಗವು ಮೂಲದಲ್ಲಿ ತಂದೆಯಾದ ಅಬ್ರಹಾಮನನ್ನು ಪ್ರತಿನಿಧಿಸುವಲ್ಲಿ**" ನಾವೆಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದೇವೆ".**

ಹಾಗಾದಲ್ಲಿ, ಒಂದು ಜನಾಂಗವಾಗಿ ನಾವೆಲ್ಲರೂ ಅನ್ಯಾಯಿಗಳೂ, ಅನೀತಿವಂತರೂ, ಅಸಮರ್ಪರ್ಕರೂ ಆಗಿದ್ದೇವೆಂದು ನೋಡುತ್ತೇವೆ. ಯಾರೂ ಸಹಾ ಯಾವುದೇ ಕಾರ್ಯದ ನಿಮಿತ್ತ ನ್ಯಾಯದ ಅವಶ್ಯಕತೆಗಳನ್ನು ತಲುಪಿಲ್ಲ. ಮಾತ್ರವಲ್ಲದೆ "ಯಾರೂ ದೇವರಿಗೆ ಈಡನ್ನು ಕೊಟ್ಟು ತನ್ನ ಸಹೋದರನ ಪ್ರಾಣವನ್ನು ಬಿಡಿಸಲಾರನು"(ಕೀರ್ತನೆ ೪:೭ ನೋಡಿರಿ). ಯಾರೂ ಇತರರ ಕೊರತೆಗಳನ್ನು ನೀಗಿಸಲಾರನು. ಯಾಕೆಂದರೆ, ಯಾರ ಬಳಿಯೂ ಅರ್ಹತೆಯ ಮಿಗತೆ ಇಲ್ಲ, ತೂಕವಾಗಲೀ, ಸದ್ಗುಣಗಳಾಗಲೀ ತನಗೆ ಬೇಕಾಗುವಷ್ಟೂ ಇಲ್ಲ. ಎಲ್ಲರೂ ಪಾಪಮಾಡಿ, ಕೊರತೆಯುಳ್ಳವರಾಗಿದ್ದಾರೆ. ಆತನು ಅವರನ್ನು ಆಗಲೇ ಖಂಡಿಸಿ, ಅವರು ತನ್ನ ಕೃಪೆಗೆ ಯೋಗ್ಯರಲ್ಲ ಎಂದು ಘೋಷಿಸಿರುವುದರಿಂದ ನಾವು ಅನ್ಯಾಯವಂತರನ್ನು, ಬಿದ್ದುಹೋದವರನ್ನು ದೇವರು ಪುನಃ ಅಂಗೀಕರಿಸಿ ಅವರೊಡನೆ ವ್ಯವಹರಿಸಬಲ್ಲನೋ ಎಂದು ಪ್ರಶ್ನಿಸುತ್ತೇವೆ. ಅದನ್ನು ಮಾಡನು ಆತನ ಬಳಿ ಒಂದು ಮಾರ್ಗವದೆ ಎಂದು ಆತನು ನಮಗೆ ತೋರಿಸುತ್ತಾನೆ. ಈ ಮಾರ್ಗದ ಮೂಲಕ ಆತನು ಇನ್ನೂ ನೀತಿವಂತನೂ ಮತ್ತು ಅದೇ ಸಮಯದಲ್ಲಿ ಕ್ರಿಸ್ತನನ್ನು ನಂಬಿದವರಿಗೆ ಪ್ರತಿಪಾದಕನೂ ಆಗಿದ್ದಾನೆ. ಕ್ರಿಸ್ತನನ್ನು ನೂತನ ಒಡಂಬಡಿಕೆಯ ಮಧ್ಯಸ್ತನಾಗಿ ನೇಮಿಸಿರುವೆನೆಂದು ಆತನು ತೋರಿಸಿಕೊಡುತ್ತಾನೆ. ಆ ಕ್ರಿಸ್ತನು ಈ ಲೊಕವನ್ನು ತನ್ನ ಅಮೂಲ್ಯರಕ್ತವನ್ನು ಸುರಿಸಿ, ತನ್ನನ್ನೇ ಸಮರ್ಪಿಸಿ ಕೊಂಡುಕೊಂಡಿದ್ದಾನೆ. ಸೂಕ್ತಸಮಯದಲ್ಲಿ, ಧರ್ಮಯುಗದಲ್ಲಿ ಕ್ರಿಸ್ತನು ಹೆಚ್ಚಿನ ಅಧಿಕಾರ ಹೊಂದಿದವನಾಗಿ ಈ ಲೋಕದ ರಾಜನಾಗಿ ಅದನ್ನು ಆಳುತ್ತಾನೆ. ಈ ಲೋಕದ ಎಲ್ಲಾ ಕುಟುಂಬಗಳನ್ನು ಸತ್ಯಜ್ಞಾನದ ಮೂಲಕ ಆಶೀರ್ವದಿಸುವನು ಮತ್ತು ತಂದೆಯಾದ ಆದಾಮನು ಪ್ರತಿನಿಧಿಸಿದ್ದು ಪತನದ ಅನುಭವದಿಂದ ಕಳಕೊಂಡಿದ್ದ ದೇವರ ಸ್ವರೂಪವನ್ನು ಪುನಃವಶ ಮಾಡಿಕೊಳ್ಳುವ ಅವಕಾಸವನ್ನು ಒದಗಿಸುವನು. ಮಾನವಕುಲವನ್ನು ಪುನಃ ಸಮರ್ಥನೆಗೆ ಹಿಂತಿರುಗಿಸುವ ಈ ಕಾರ್ಯವೇ **'ಪ್ರತಿಪಾದನೆ'** ಆಗಿದೆ. ಇದು ನಿಜವಾದ ಸಮರ್ಥನೆ (ಪ್ರತಿಪಾದನೆ) ಯಾಗಿದ್ದು ಸುವಾರ್ತಾಯುಗದಲ್ಲಿ ಸಭೆಗೆ ಆರೋಪಿಸಿದ್ದ ಎಣಿಕೆಯ ಸಮರ್ಥನೆ ಅಥವಾ ನಂಬಿಕೆಯ ಮೂಲಕವಾದ ಸಮರ್ಥನೆ ಇವುಗಳಿಂದ ಬೇರೆಯಾಗಿದೆ. ನಿಜವಾದ ಸಮರ್ಥನೆಯು ಧರ್ಮಯುಗದಲ್ಲಿ ನಮ್ಮ ಕರ್ತನ ಆಳ್ವಿಕೆಯೊಂದಿಗೆ ಪ್ರಾರಂಭವಾಗುವುದು ಮತ್ತು ಇದು ಪ್ರತಿಯೊಬ್ಬನೂ ತನ್ನ ತಂದೆಯಾದ ಆದಾಮನು ಕಳಕೊಂಡದ್ದನ್ನೆಲ್ಲಾ ಸಹಾಯಕವಾಗುವ ಹೆಚ್ಚಿನ ಅನುಭವಗಳೊಂದಿಗೆ ಹಿಂದಕ್ಕೆ ಪಡೆಯುವ ಅವಕಾಶ ಹೊಂದಿಕೊಳ್ಳುವವರೆಗೂ ಹಂತ ಹಂತವಾಗಿ ಮುಂದುವರೆಯುವುದು. ಈ ನಿಜವಾದ ಸಮರ್ಥನಾ ಕಾಲಕ್ಕಾಗಿ ದೇವರಿಗೆ ಸ್ತೋತ್ರ!. ಇದು ಇಷ್ಟವುಳ್ಳ, ವಿಧೇಯ ಜನಾಂಗದವರನ್ನು ನಿಜವಾಗಿಯೂ ಸರಿಪಡಿಸುವಂತಾದ್ದು. ಅವರನ್ನು ಅಸಮರ್ಪರ್ಕತೆಯಿಂದ ಸಮರ್ಪರ್ಕತೆಗೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ನೀತಿಯುತವಾಗಿ ನಿಜವಾಗಿಯೂ ಹಿಂತಿರುಗಿಸುವಂಥಾದ್ದು !

ಆದರೆ, ನಾವೀಗ ವಿಶೇಷವಾಗಿ ನೂತನ ಸೃಷ್ಟಿಯವರನ್ನು ಪರಿಗಣಿಸುತ್ತಿದ್ದು, ದೇವರು ತನ್ನ ಸ್ವಭಾವಕ್ಕೆ, ಮಹಿಮೆಗೆ ಮತ್ತು ನಿರ್ಲಯತ್ವಕ್ಕೆ ಕರೆದಿರುವ ಮಾನವ ಕುಲದ ಈ ಅಲ್ಪ ಜನಾಂಗದವರನ್ನು ಸಮರ್ಥಿಸಲು ಯಾವ ಹೆಜ್ಜೆಗಳನ್ನು ತೆಗೆದುಕೊಳ್ಳುತ್ತಾನೆಂದು ಪರಿಶೀಲಿಸುತ್ತಿದ್ದೇವೆ. ಯಾಕೆಂದರೆ, ಸ್ವಭಾವದಲ್ಲಿ ಅವರೂ ಸಹಾ ಇತರರಂತೆ ಕ್ರೋಧದ ಮಕ್ಕಳಾಗಿದ್ದಾರೆ. ದೇವರು ಪಾಪಿಗಳಾಗಿ ಮರಣ ದಂಡನೆಯಲ್ಲಿರುವ ಲೋಕದವರೊಂದಿಗೆ ವ್ಯವಹರಿಸಲು ಸಾಧ್ಯವಿಲ್ಲದ ಕಾರಣ, ಈ ತಳಹದಿಯಲ್ಲಿ ಆತನು ತಾನು ನೂತನ ಸೃಷ್ಟಿಗಳಾಗಲು ಕರೆದವರೊಡನೆಯೂ ವ್ಯವಹರಿಸಲಾಗದ್ದರಿಂದ ಇವರುಗಳಿಗೆ ಮಾತ್ರವಲ್ಲದೆ, ಇಡೀ ಪ್ರಪಂಚಕ್ಕೆ ಸಮರ್ಥನೆಯ ಅಗತ್ಯವಿದೆ. ದೇವರು ಅವರೊಡನೆ ಪುನಃ ಸಾಂಗತ್ಯಕ್ಕೆ ಬರುವ ಮುನ್ನವೇ ಆತನು ಸಭೆಯ ಒಡನಾತಕ್ಕೆ ತರುವುದು ಹೇಗೆ? ಸಮರ್ಥನೆ ಹೊಂದುವ ಮೊದಲೇ ಅದನ್ನು ತನ್ನ ಮಗನೊಡನೆ ಜೊತೆ–ವಾರಸುದಾರಿಕೆಗೆ ಕರೆಯುವುದಾದರೂ ಹೇಗೆ? ನೂತ ಸೃಷ್ಟಿಗೆ ನಮ್ಮನ್ನು ಕರೆಯಲು ಸಮರ್ಥನೆಯು ಒಂದು ಪೂರ್ವಾವಶ್ಯಕತೆಯೆಂದು ನಾವು ಒಪ್ಪಿಕೊಳ್ಳಲೇಬೇಕು. ಆದರೆ ಈ ಸಮರ್ಥನೆಯನ್ನು ನಮಗೆ ಜಾರಿಗೊಳಿಸುವುದಾದರೂ ಹೇಗೆ? ನಾವು ನಿರಪೇಕ್ಷವಾದ, ನಿಜವಾದ ಸಮರ್ಪಕತೆಗೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ನೈತಿಕವಾಗಿ ಹಿಂತಿರುಬೇಕೇ? 'ಇಲ್ಲ'ವೆಂದು ನಾವು ಉತ್ತರಿಸುತ್ತೇವೆ. ದೇವರು ನಮಗೆ ಅಂಥಾಃ ನಿಜವಾದ ಸಮರ್ಥನೆಯನ್ನು ಒದಗಿಸಿಕೊಟ್ಟಿಲ್ಲ. ಆದರೆ, ಆತನು ಬೇರೊಂದು ರೀತಿಯ ಸಮರ್ಥನೆಯನ್ನು ಒದಗಿಸಿದ್ದಾನೆ. ದೇವರ ವಾಕ್ಯಗಳಲ್ಲಿ ಇದನ್ನು **'ನಂಬಿಕೆಯ ಮೂಲಕ ನೀತಿನಿರ್ಣಯ'** ಎಂದು ಹೆಸರಿಸಲಾಗಿದೆ. ಇದು ನಿಜವಾದ ಪ್ರತಿಪಾದನೆಯಾಗಿರದೆ ಪ್ರತಿಪಾದನೆಯೆಂದು ಎಣಿಸಲ್ಪಟ್ಟದ್ದಾಗಿದೆ. ಪಾಪ ಮತ್ತು ಮರಣದ ಈ ಆಡಳಿತ ಕಾಲದಲ್ಲಿ ಯಾರು ಆತನ ಕೃಪಾ ಸಂದೇಶವನ್ನು ಕ್ರಿಸ್ತನ ಮೂಲಕ ಕೇಳುತ್ತಾರೋ ಮತ್ತು ಮೇಲಿನಿಂದ ಬರುವ ಜ್ಞಾನಕ್ಕನುಸಾರವಾಗಿ ತಮ್ಮ ತಪ್ಪು ಪರಿಸ್ಥಿತಿಯನ್ನು ದೇವರ ಕೃಪಾಸಂದೇಶದಲ್ಲಿ ಮತ್ತು ಕ್ರಿಸ್ತನ ಕೃಪೆಯಲ್ಲಿ ನಂಬಿಕೆಯಿಟ್ಟವರಾಗಿ ಅರಿಕೆ ಮಾಡುತ್ತಾರೋ, ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತಾರೋ ಮತ್ತು ಸಾಧ್ಯವಾದಷ್ಟು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾರೊ ಅಂಥವರು ನಿಜವಾದ ಮಾನವ ಸಮರ್ಪಕತೆಗೆ ಹಿಂತಿರುಗುವ ಬದಲು ಅವರ ಅಪರಾಧಗಳು ಕ್ರಿಸ್ತನ ಅರ್ಹತೆಯಲ್ಲಿ ಮರೆಮಾಡಲ್ಪಡುತ್ತವೆ. ಅವರೊಡನೆ ವ್ಯವಹರಿಸುವಾಗ ಆತನು ಅವರನ್ನು ನ್ಯಾಯವಂತರು ಅಥವಾ ಸರಿಯಾದವರೆಂದು ಎಣಿಸಿಕೊಳ್ಳುತ್ತಾನೆ. ಇದು ಅವರನ್ನು ನಂಬಿಕೆಯ ಮೂಲಕ ಸಮರ್ಥಿಸುವುದು.

ಸಮರ್ಥರೆಂದು ಎಣಿಸುವುದು ಅಥವಾ ವಿಶ್ವಾಸದ ಮೂಲಕವಾದ ಸಮರ್ಥನೆಯು ವಿಶ್ವಾಸವು ಮುಂದುವರಿಯುವವರೆಗೆ ಇರುತ್ತದೆ ಮತ್ತು ದೇವರ ಚಿತ್ತವನ್ನು ನೆರವೇರಿಸುವ ಸಾಹಸದಲ್ಲಿ ಸಹಾಯಮಾಡುತ್ತದೆ. ( ವಿಶ್ವಾಸ ಮತ್ತು ವಿಧೇಯತೆಯು ಸ್ಥಗಿತಗೊಂಡ ಕೂಡಲೇ ಸಮರ್ಥನೆಯು ಸಹಾ ಆರೋಪಗೊಳ್ಳುವುದನ್ನು ಸ್ಥಗಿತಗೊಳಿಸುತ್ತದೆ) ಆದರೆ ವಿಶ್ವಾಸದ ಸಮರ್ಥನೆಯು ಮುಂದಿನ ಹೆಜ್ಜೆಯಾದ ಪವಿತ್ರಪಡಿಸುವಿಕೆಯನ್ನು ಕೈಗೊಂಡಾಗ ಸ್ಥಗಿತಗೊಳ್ಳುವುದಿಲ್ಲ. ಅದು ನೂತನ ಸೃಷ್ಟಿಗಳಾದ ನಮ್ಮೊಡನೆ ಮುಂದುವರೆಯುತ್ತದೆ ಮತ್ತು ನಮ್ಮನ್ನು ಆದಾಮನ ಖಂಡನೆಗಳಿಂದ ಮರೆಮಾಡುವುದಲ್ಲದೆ, ನಮ್ಮ ದೈಹಿಕ ಬಲಹೀನತೆಯಿಂದಾಗಿ, ವಂಶ ಪಾರಂಪರ್ಯವಾಗಿ (ನಮ್ಮ ಇಚ್ಛೆಯಿಲ್ಲದೆ) ನಮ್ಮದಾಗಿರುವ ನಮ್ಮೆಲ್ಲಾ ಮಾತಿನ ಆಲೋಚನೆಯ ಬಲಹೀನತೆ ಮತ್ತು ಅಸಮರ್ಪಕತೆಗಳನ್ನು ಸಹಾ ಮುಚ್ಚಿಹಾಕುತ್ತದೆ. ಅದು ದೇವರ ನೂತನ ಸೃಷ್ಟಿಗಳಾದ ದೇವಜನರೊಂದಿಗೆ ಅವರ ಯಾತ್ರೆಯ ಅಂತ್ಯದವರೆಗೂ ನೂತನ ಸೃಷ್ಟಿಯ ಉಮೇದುವಾರ ಸದಸ್ಯರಾಗಿ ಅವರು ಎದುರಿಸಬೇಕಾಗಿರುವ ಎಲ್ಲಾ ಪರೀಕ್ಷೆಗಳಲ್ಲಿಯೂ, ಎಲ್ಲಾ ಶೋಧನೆಗಳಲ್ಲಿಯೂ ಅವರೊಡನೆ ಮುಂದುವರೆಯುತ್ತದೆ. ಇದಕ್ಕೆ ಸಮನಾಗಿ ಅಪೋಸ್ತಲನು "ಕ್ರಿಸ್ತನಲ್ಲಿದ್ದು ದೇಹಕ್ಕನುಸಾರವಾಗಿ ನಡೆಯದೆ ಆತ್ಮಕ್ಕನುಸಾರವಾಗಿ ನಡೆಯುವವರಿಗೆ ಈಗ ಶಿಕ್ಷೆಗೆ ಗುರಿಪಡಿಸುವುದಿಲ್ಲ" ಎಂದು ಹೇಳುತ್ತಾನೆ – ನೂತನ ಸೃಷ್ಟಿಯ ನಿಧಿಯು ಈಗ ಮಣ್ಣಿನ ಪಾತ್ರೆಯಲ್ಲಿದೆ ಎಂಬ ಸತ್ಯವನ್ನು ವಿರೋಧಿಸದೆ ಮತ್ತು ಈ ಕಾರಣದಿಂದ ನಿರಂತರವಾದ ಕಳಂಕಗಳು ಇರುತ್ತವೆ, ಇವುಗಳಲ್ಲಿ ಕನಿಷ್ಟವಾದುದುದೆಂದರೆ, ಕ್ರಿಸ್ತನ ನೀತಿಯ ನಿಲುವಂಗಿಯಾದ ನಮ್ಮ ವಿವಾಹದ

ಉಡುಪು ಮರೆಮಾಡದ ಯಾವುದೇ ಸಮಕ್ಷೇತ್ರದಲ್ಲಿಯೂ ನಾವು ನಿತ್ಯಜೀವಕ್ಕೆ ಅನರ್ಹರೆಂದು ನಮಗೆ ಆರೋಪಿಸಲಾದ ಸಮರ್ಥನೆಯನ್ನು ಖಂಡಿಸುತ್ತದೆ. ನಮಗೆ ಈ ಸಮರ್ಥನೆಯ ಅವಶ್ಯಕತೆ ಉಂಟು. ನಾವು ಇನ್ನೂ ಈ ದೇಹದಲ್ಲಿದ್ದು ಕ್ರಿಸ್ತನಲ್ಲಿ ನೆಲೆಗೊಂಡಿರುವ ವರೆಗೂ ಇದು ನಮ್ಮ ನಿಲುವಂಗಿಯಾಗಿ ಮುಂದುವರೆಯುತ್ತದೆ ; ಆದರೆ ನಾವು ಜಯಶಾಲಿಗಳೆಂದು ಅಂಗೀಕಾರವಾಗಿ ನಮ್ಮ ಪರೀಕ್ಷೆಯು ಮುಗಿದ ಕೂಡಲೇ ಇದು ಸ್ಥಗಿತಗೊಂಡು ನಮಗೆ ಪ್ರಥಮ ಪುನರುತ್ಥಾನದಲ್ಲಿ ಸ್ಥಳದೊರೆಯುತ್ತದೆ. ಅಪೋಸ್ತಲನು ವಿವರಿಸುವಂತೆ– ಇದು ಭ್ರಷ್ಟತೆಯಲ್ಲಿ, ಅಗೌರವ ಮತ್ತು ಬಲಹೀನತೆಗಳನ್ನು ತೋರಿಬರುತ್ತದೆ ಆದರೆ ಇದು ಅಭ್ರಷ್ಟತೆಯಲ್ಲಿ, ಶಕ್ತಿ ಮತ್ತು ಮಹಿಮೆಯಲ್ಲಿ ನಮ್ಮ ಕರ್ತನ ಪೂರ್ಣ ಸ್ವರೂಪದೊಡನೆ, ತಂದೆಯ ವ್ಯಕ್ತಿತ್ವದ ಸ್ಪಷ್ಟಸ್ವರೂಪನಾದ ಸ್ಫೂರ್ತಿಯಿಂದೊಡಗೂಡಿದ ಆತ್ಮನೊಡನೆ ಎದ್ದುತೋರುತ್ತದೆ. ಆ ಸಮರ್ಪಕತೆಯನ್ನು ಹೊಂದಿಕೊಂಡಾಗ ಆರೋಪಿಸಿದ ನೈತಿಕತೆಯು ಇನ್ನು ಅವಶ್ಯವಿಲ್ಲ. ಯಾಕೆಂದರೆ, ನಾವು ಆಗ ನಿಜವಾಗಿಯೂ ನೀತಿವಂತರು ಮತ್ತು ಸಮರ್ಪಕರೂ ಆಗಿರುತ್ತೇವೆ. ನೂತನ ಸೃಷ್ಟಿಯ ಸಮರ್ಪಕತೆಯು ಈ ಪ್ರಪಂಚದವರಿಗಿಂತ ಮೇಲಾಗಿದ್ದಲ್ಲಿ ಚಿಂತಿಸ ಬೇಕಾಗಿಲ್ಲ. ಅಂದರೆ, ಅದು ಪ್ರತಿಪಾದನೆಯ ಬಗ್ಗೆ ಆದರೆ ಏನೂ ಅಲ್ಲ ; ಮಾನವ ಸ್ವಭಾವದಿಂದ ಸಮರ್ಪಕತೆಯ ಪುನಃವಶದಲ್ಲಿ ದೇವರ ಕೃಪೆಯನ್ನು ಪಡಕೊಳ್ಳುವವರು ಆ ಕಾರ್ಯ ಮುಗಿದಾಗ ನ್ಯಾಯವಂತರು ಅಥವಾ ಸಮರ್ಪಕರು ಆಗುತ್ತಾರೆ, ಆದರೆ ಇದು ಆತ್ಮನ ಸಮತಲದಿಂದ ಕೆಳಗಿನ ಮಟ್ಟದ್ದು. ಈಗ ದೈವಿಕ ಸ್ವಭಾವಕ್ಕೆ ಕರೆಯಲ್ಪಟ್ಟವರು ಮತ್ತು ವಿಶ್ವಾಸದಿಂದ ಮುಂಚಿತವಾಗಿಯೇ ಪ್ರತಿಪಾದಿಸಲ್ಪಟ್ಟವರು ಅವರ ಕರೆಯನ್ನು ಅನುಮತಿಸುವವರು ಮತ್ತು ದೇವರ ಮಕ್ಕಳೆಂಬ ಪರೀಕ್ಷೆಗೆ ಒಳಪಡುವವರು ಪ್ರಥಮ ಪುನರುತ್ಥಾನದಲ್ಲಿ ಜೀವ ಮತ್ತು ಸಮರ್ಪಕತೆಗಳನ್ನು ಪೂರ್ಣವಾಗಿ ಹೊಂದುವ ತನಕ ನಿಜವಾಗಿಯೂ ಈಗಿನ ಅಸಮರ್ಪಕತೆಯು ನಿರ್ಧಿಷ್ಟವಾಗಿರದ ಯಾವುದೇ ಸಮರ್ಥನೆ ಮತ್ತು ಸಮರ್ಪಕತೆಗಳನ್ನು ಹೊಂದಿಕೊಳ್ಳುವುದಿಲ್ಲ. ಸಮರ್ಪಕತೆಯು ಈಗತಾನೆ ಅವರಿಗೆ ಎಣಿಸಲ್ಪಟ್ಟು ಆರೋಪಿಸಲಾಗಿದೆ.

**ನಮ್ಮ ನೀತಿ ನಿರ್ಣಯಕ್ಕೆ (ಸಮರ್ಥನೆಗೆ) ಕಾರಣ ಅಥವಾ ನೆಲೆ**

ದೇವರ ವಾಕ್ಯದ ಹೇಳಿಕೆಗಳನ್ನು ಹೋಲಿಸಿನೋಡುವಲ್ಲಿ ಅಲಕ್ಷತೆ ತೋರಿದ ಕಾರಣ ಅನೇಕರ ಮನಸ್ಸಿನಲ್ಲಿ ಈ ವಿಷಯದ ಬಗ್ಗೆ ಕಳವಳ ಉಂಟಾಗಿದೆ. ಉದಾಹರಣೆಗೆ, ಕೆಲವರು " **ನಾವು ನಂಬಿಕೆಯಿಂದ ನೀತಿವಂತರಾಗಿದ್ದೇವೆ"** (ರೋಮ ೫:೧, ೩:೨೮; ಗಲಾ ೩:೨೪) ಎಂಬ ಅಪೋಸ್ತಲನ ಹೇಳಿಕೆಯನ್ನು ತೆಗೆದುಕೊಂಡು, ವಿಶ್ವಾಸವು ದೇವರ ದೃಷ್ಟಿಯಲ್ಲಿ ಮಹತ್ತರವಾದುದು ಮತ್ತು ಇದು ನಮ್ಮ ಎಲ್ಲಾ ಅಸಮರ್ಪಕತೆಗಳನ್ನು ಮುಚ್ಚಿಹಾಕುತ್ತದೆ ಎಂದು ಬಲವಾಗಿ ನಂಬುತ್ತಾರೆ. ಮತ್ತೆ ಕೆಲವರು " **ದೇವರ ಕೃಪೆಯಿಂದಲೇ ನೀತಿನಿರ್ಣಯ"**(ರೋಮ ೩:೨೪. ತೀತ ೩:೭) ಎಂಬ ಹೇಳಿಕೆಯ ಮೂಲಕ ದೇವರು ತಾನು ಇಚ್ಛಾನುಸಾರ ಬಯಸುವ ಯಾರಿಗಾದರೂ, ಅವರ ಗುಣ, ಅರ್ಹತೆ, ನಂಬಿಕೆ ಅಥವಾ ಕಾರ್ಯಗಳು ಎಂತೇ ಇರಲಿ ಅವರನ್ನು ಸಮರ್ಥಿಸುತ್ತಾನೆ ಎಂದು ನಂಬುತ್ತಾರೆ. ಮತ್ತೂ ಕೆಲವರು **"ನಾವು ಆತನ ರಕ್ತದಿಂದ ನೀತಿವಂತರಾಗಿದ್ದೇವೆ"**(ರೋಮ ೫:೯, ಇಬ್ರಿ ೯: ೧೪ ಮತ್ತು ೧ ಯೋಹಾ ೧:೭) ಎಂಬ ಮಾತುಗಳ ದೆಸೆಯಿಂದ ಕ್ರಿಸ್ತನ ಮರಣವು ಮಾನವರ ನಂಬಿಕೆ ಮತ್ತು ವಿಧೇಯತೆಗಳನ್ನು ಲಕ್ಷಿಸದೆ ಎಲ್ಲರಿಗೂ ನೀತಿವಂತರೆಂಬ ನಿರ್ಣಯ ದೊರಕುತ್ತದೆಂದು ತಿಳಿಯುತ್ತಾರೆ. ಇನ್ನೂ ಕೆಲವರು "ದೇವರು ಆತಮ್ನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು, ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ **ಜೀವದಿಂದ ಎಬ್ಬಿಸಿದನು**" (ರೋಮ ೪:೨೫) ಎಂಬ ಅಪೋಸ್ತಲನ ಮಾತುಗಳನ್ನು ತೆಗೆದುಕೊಳ್ಳುತ್ತಾರೆ ಮತ್ತು ಇದರ ಬಲದಿಂದ ಸಮರ್ಥನೆಯು ನಮಗೆ ಕ್ರಿಸ್ತನ ಪುನರುತ್ಥಾನದಲ್ಲಿ ಬಂದಿದೆ ಎನ್ನುತ್ತಾರೆ. ಬೇರೆ ಕೆಲವರು "ಮನುಷ್ಯನು ತನ್ನ **ಕ್ರೀಯೆಗಳಿಂದ** ನೀತಿವಂತರೆಂದು ನಿರ್ಣಯಿಸಲ್ಪಡುತ್ತಾನೆ" (ಯಾಕೋಬ : ೨:೨೪) ಎಂಬ ಹೇಳಿಕೆಯಿಂದಾಗಿ ಇಷ್ಟೆಲ್ಲಾ

ಹೇಳಿದ್ದರೂ ನಮ್ಮ ಕಾರ್ಯಗಳೇ ನಾವು ದೇವರ ಕೃಪೆ ಅಥವಾ ಅವಕೃಪೆಗೆ ಪಾತ್ರವಾಗಿದ್ದೇವೆಂಬುದನ್ನು ನಿರ್ಣಯಿಸುತ್ತವೆಂದು ಹಕ್ಕಿನ ಹೇಳಿಕೆ ನೀಡುತ್ತಾರೆ.

ನಿಜಸಂಗತಿ ಏನೆಂದರೆ, ಈ ಎಲ್ಲಾ ಹೇಳಿಕೆಗಳೂ ಸತ್ಯವಾದವುಗಳು. ಇವುಗಳು ಕೇವಲ ಒಂದು ಮಹಾ ಪ್ರಶ್ನೆಯ ವಿವಿಧ ಪಾರ್ಶ್ವಗಳನ್ನು ಪ್ರತಿನಿಧಿಸುತ್ತವೆ. ಯಾವರೀತಿಯಲ್ಲಿ ಒಂದು ಮಹಾ ಕಟ್ಟಡವನ್ನು ಮುಂದಿನಿಂದ, ಹಿಂದಿನಿಂದ, ಎಡ–ಬಲ ಪಾರ್ಶ್ವಗಳಿಂದ ಇನ್ನೂ .ವಿವಿಧ ಕೋನಗಳಿಂದ ನೋಡಬಹುದೋ ಹಾಗೆ. ಈ ಮೇಲಿನ ವಿವಿಧ ಹೇಳಿಕೆಗಳನ್ನು ನೀಡುವಾಗ ಅಪೋಸ್ತಲರು ವಿವಿಧ ಸಮಯಗಳಲ್ಲಿ ವಿಷಯದ ವಿವಿಧ ವಾಕ್ಯಾಂಗ ಭಾಗಗಳನ್ನು ಪ್ರತಿಪಾದಿಸುತ್ತಿದ್ದರು ಎಂದು ತಿಳಿಯಬೇಕು, ಈ ಎಲ್ಲಾ ಹೇಳಿಕೆಗಳನ್ನು ಒಂದು ಗೂಡಿಸಿ ಆ ಸಂಯೋಜನೆಯಲ್ಲಿ ನೀತಿನಿರ್ಣಯದ ಬಗ್ಗೆ ಇರುವ ಪೂರ್ಣ ಸತ್ಯವನ್ನು ಕಂಡುಹಿಡಿಯಬೇಕು.

ಮೊಟ್ಟಮೊದಲಿಗೆ **"ನಾವು ಕೃಪೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ".** ದೇವರು ನಮಗೆ ವಿಧಿಸಿದ ದಂಡನೆಯಿಂದ ನಾವು ತಪ್ಪಿಸ್ಕೊಳ್ಳುವಂತೆ ಏನನ್ನಾದರೂ ಮಾಡಬೇಕೆಂಬುದು ನಮ್ಮ ಸೃಷ್ಟಿಕರ್ತನಿಗೆ ಹಂಗು ಇದ್ದಿರಲಿಲ್ಲ. ನಾವು ಸೃಷ್ಟಿಸಲ್ಪಡುವ ಮೊದಲೇ ನಮ್ಮ ಪತನವನ್ನು ಗುರುತಿಸಿದ ಆತನು ನಮ್ಮ ಮೇಲೆ ಅನುಕಂಪಗೊಂಡು ತನ್ನ ಕೃಪೆಯ ನಿಮಿತ್ತ ತನ್ನ ಯೋಜನೆಯಲ್ಲಿ ನಮ್ಮ ವಿಮೋಚನೆಗೋಸ್ಕರ ಒಂದು ಕುರಿಮರಿಯು ವಧಿಸಲ್ಪಡಬೇಕೆಂದು ಈ ಲೋಕದ ಅಸ್ತಿವಾರವು ಹಾಕಲ್ಪಡುವ ಮೊದಲೇ ನಿರ್ಣಯಿಸಿದನು. ತಂದೆಯೊಡನೆ ನಮ್ಮ ಸಂಧಾನವು ದೇವರ ಕೃಪೆಯಿಂದಲೇ ಆತನಿಗೆ ಸಮಾಧಾನವನ್ನುಂಟುಮಾಡುವ ರೀತಿಯಲ್ಲಿ ನಡೆಯಿತು ಎಂದು ತಿಳಿದು ಈ ಪ್ರಶ್ನೆಯನ್ನು ಬಗೆಹರಿಸಿಕೊಳ್ಳೋಣ.

ಎರಡನೆಯದಾಗಿ, **" ಕ್ರಿಸ್ತನ ರಕ್ತದ ಮೂಲಕ ನೀತಿನಿರ್ಣಯ**"ವೆಂಬುದು. ಆತನ ವಿಮೋಚನಾ ಕಾರ್ಯ, ಆತನ ಮರಣ. ಇದರಲ್ಲಿ ಹೇಳುವುದೇನೆಂದರೆ, ನಮ್ಮ ಮೇಲಿನ ಸೃಷ್ಟಿಕರ್ತನ ಕೃಪೆಯು ಈ ಮುನ್ನೇರ್ಪಾಡಿನ ಮೂಲಕ ಪ್ರಕಟವಾಗುತ್ತದೆ – "ದೇವರ ಕೃಪೆಯಿಂದ ಯೇಸುಕ್ರಿಸ್ತನು ಪ್ರತಿಯೊಬ್ಬ ಮಾನವನ ಪರವಾಗಿ ಮರಣವನ್ನು ಸವಿದನು". ಈ ರೀತಿಯಾಗಿ ಆತನು ಆದಾಮನ ದಂಡವನ್ನು ತೆತ್ತನು. ಇಡೀ ಲೋಕವು ಆದಾಮನ ಪಾಪದ ಸಲುವಾಗಿ ಶಿಕ್ಷೆಗೆ ಗುರಿಯಾಗಿರುವುದರಿಂದ ಅಂತಿಮವಾದ ಸಾಧನೆಯು ಇಡಿ ಪ್ರಪಂಚದ ಪಾಪವನ್ನು ತೊಡೆದುಹಾಕುವುದು. ಮೊದಲದರಂತೆ ನಾವು ನಾವು ಈ ಅಂಶವನ್ನೂ ಖಚಿತಪಡಿಸಿಕೊಳ್ಳೋಣ. ಅದೇನೆಂದರೆ, ದೇವರ ಕೃಪೆಯು ಒಂದೇ ಒಂದು ನಾಲೆಯ ಮೂಲಕ ತನ್ನ ಕಾರ್ಯವೆಸಗುತ್ತದೆ. ಅದೇನೆಂದರೆ – **"ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ"** (೧ ಯೋಹಾನ ೫:೧೨).

ಮೂರನೆಯದಾಗಿ, **" ಕ್ರಿಸ್ತನು ನಮ್ಮ ನೀತಿನಿರ್ಣಯದ ಸಲುವಾಗಿ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು"** ಎಂಬುದು ಸಹಾ ಅಷ್ಟೇ ಸತ್ಯ. ಇದು ದೇವರ ಯೋಜನೆಯ ಭಾಗ. ಮೆಸ್ಸೀಯನು ಜನರ ವಿಮೋಚಕನಾಗುವುದು ಮಾತ್ರವಲ್ಲ, ತಂದೆ ದೇವರೊಡನೆ ಸಾಮರಸ್ಯಕ್ಕೆ ಹಿಂದಿರುಗಲು ಬಯಸುವ ಎಲ್ಲರನ್ನೂ ಆಶೀರ್ವದಿಸುವವನು ಅವರನ್ನು ಪುನಃವಶ ಗೊಳಿಸುವವನು ಆತನೇ. ಅದೇ ವೇಳೆ ಯೇಸುವಿನ ಮರಣವು ನಮ್ಮ ಸಂಧಾನಕ್ಕೆ ಪ್ರಾಥಮಿಕವಾಗಿ ಬಹಳ ಮುಖ್ಯವಾದುದು. ಆದರೆ ಆತನು ಮರಣಹೊಂದಿದ ಮೇಲೆ ಹಾಗಿಯೇ ಉಳಿದಿದ್ದರೆ ನಮ್ಮ ಆಶೀರ್ವಾದದ ಮತ್ತು ಪುನಃವಶದ ನಾಲೆಯಾಗಲು ಸಾಧ್ಯವೇ ಇದ್ದಿಲ್ಲ. ಆದುದರಿಂದ ನಮ್ಮ ವಿಮೋಚನೆಯ ಬೆಲೆಯಾಗಿ ಆತನಿಗೆ ಮರಣವನ್ನು ಒದಗಿಸಿದ ತಂದೆಯು ಆತನು ಮರಣದಿಂದ ಪುನರುತ್ಥಾನ ಹೊಂದಿಕೊಳ್ಳಲು ಸಹಾ ಸಿದ್ಧತೆಮಾಡಿದನು. ಈ ರೀತಿಯಲ್ಲಿ

ಉಚಿತ ಸಮಯದಲ್ಲಿ ಮಾನವರು ಸರಿಯಾದ ಅಥವಾ ನ್ಯಾಯವಾದ ಪರಿಸ್ಥಿತಿಗೆ, ದೇವರ ಸಾಮರಸ್ಯಕ್ಕೆ ಹಿಂದಿರುಗುವಂತೆ ಆತನನ್ನು ಸಮರ್ಥನೆಯ ನಿಯೋಗಿಯನ್ನಾಗ ಮಾಡಿದನು.

ನಾಲ್ಕನೆಯದಾಗಿ, ದೇವರ ಹಂಚಿಕೆಯು ನಿಜವಾದ ಸಮರ್ಥನೆ ಅಥವಾ ಈ ಯುಗದಲ್ಲಿ ಯಾವುದನ್ನಾಗಲೀ ಪುನಃವಶ ಪಡಿಸಿಕೊಳ್ಳುವುದಲ್ಲ ಆದರೆ ಕೇವಲ ಹಾಗೆಂದು ಎಣಿಕೆ ಅಥವ ವಿಶ್ವಾಸದ ಪುನಃವಶ ಎಂಬ ಅರ್ಥದಲ್ಲಿ ಸಭೆಯಾದ ನಾವು **"ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ"**. ಇದು ನಿಜವಾಗಿಯೂ ನಂಬಿಕೆಯನ್ನು ಕಾರ್ಯಗತಗೊಳಿಸುವವರಿಗೆ ಮಾತ್ರವೇ ಅನ್ವಯಿಸುವುದಾಗಿದೆ. ದೇವರು ತನ್ನಲ್ಲಿಯೇ ಉದ್ದೇಶಿಸಿ ಸಾಗಿಸಿಕೊಂಡು ಬರುತ್ತಾ ಉಚಿತ ಸಮಯದಲ್ಲಿ ಪೂರೈಸಲಿರುವ ದೈವಿಕ ವ್ಯವಸ್ಥೆಗಳ ಬಗ್ಗೆ ನಮ್ಮ ವಿಶ್ವಾಸವಾಗಲೀ ಅವಿಶ್ವಾಸವಾಗಲೀ ಮಾಡುವುದೇನೂ ಇಲ್ಲ ; ಆದರೆ ನಾವು ನಮಗೆ ಪ್ರಪಂಚಕ್ಕೆ ಮುನ್ನವೇ ದಯಪಾಲಿಸಲ್ಪಟ್ಟಿರುವ ಈ ಕೃಪೆಯಲ್ಲಿ ಭಾಗವಹಿಸುವುದು ನಮ್ಮ ನಂಬಿಕೆಯ ಮೇಲೆ ನಿರ್ಭರವಾಗಿದೆ. ಧರ್ಮಯುಗದಲ್ಲಿ ದೇವರ ರಕ್ಷಣಾ ಯೋಜನೆಯ ಉದ್ದಗಲಗಳು ಎಲ್ಲರಿಗೂ ಪ್ರಕಟಿಸಲಾಗುವುದು – ದೇವರ ರಾಜ್ಯವನ್ನು ಈ ಲೋಕದಲ್ಲಿ ಸ್ಥಾಪಿಸಲಾಗುವುದು, ಮತ್ತು ಮಾನವ ಕುಲವನ್ನು ವಿಮೋಚಿಸಿದಾತನು ಮತ್ತು ಎಲ್ಲರನ್ನೂ ಸತ್ಯದ ಜ್ಞಾನದಿಂದ ಆಶೀರ್ವದಿಸಲು ಅಧಿಕಾರ ಹೊಂದಿದವನು ಎಷ್ಟು ಮಂದಿ ಇಚ್ಛಾಪೂರ್ವಕವಾಗಿ ದೈವಿಕ ಕೃಪೆಯನ್ನು ದೈವಿಕ ಶರತ್ತುಗಳೊಂದಿಗೆ ಅಂಗೀಕರಿಸುತ್ತಾರೋ ಅವರನ್ನೆಲ್ಲಾ ನಿಜವಾಗಿಯೂ ಸಮರ್ಥಿಸುವನು ಅಥವಾ ಸಮರ್ಪಕತೆಗೆ ಹಿಂತಿರುಗಿಸುವನು.

**ನಿಜವಾದ ಸಮರ್ಥನೆ**ಯ ಕಡೆಗೆ ಪ್ರಗತಿಗೊಳ್ಳುವ ಪುನಃವಶವನ್ನು ಹೊಂದಲು **ನಂಬಿಕೆಯು** ಅಗತ್ಯವೆಂಬುದು ನಿಜ. ಯಕೆಂದರೆ "ನಂಬಿಕೆಯಿಲ್ಲದೆ ದೇವರನ್ನು ಸಂಪ್ರೀತಿಗೊಳಿಸಲು ಸಾಧ್ಯವಿಲ್ಲ" ಪುನಃವಶದ ಆಶೀರ್ವಾದಗಳು ಮತ್ತು ಬಹುಮಾನಗಳು ನಂಬಿಕೆಯನ್ನು ಹಕ್ಕಿನಿಂದ ಕೇಳುವ ಪಥದಲ್ಲಿ ದಯಪಾಲಿಸಲ್ಪಡುವುವು. ಆದರೆ ಆಗ ಪುನಃವಶದ ಪ್ರಗತಿಗೆ ಬೇಕಾಗುವ ವಿಶ್ವಾಸವು ಈಗ 'ಸಂತರೆಂದು', 'ಕ್ರಿಸ್ತನೊಂದಿಗೆ ಜೊತೆ ವಾರಸುದಾರರು' ಅಥವಾ 'ನೂತನ ಸೃಷ್ಟಿಗಳು' ಎಂದು ಕರೆಯಲ್ಪಡುವವರು ಕೋರುವ ವಿಶ್ವಾಸಕ್ಕಿಂಥಾ ಬಹಳಷ್ಟು ಬೇರೆಯಾಗಿದೆ. ದೇವರ ರಾಜ್ಯವು ನಿಯಂತ್ರಣದಲ್ಲಿದ್ದು, ಸೈತಾನನು ಬಂಧಿಸಲ್ಪಟ್ಟಿದ್ದು ದೇವರ ಜ್ಞಾನವು ಪ್ರಪಂಚದಲ್ಲೆಲ್ಲಾ ತುಂಬಲು ಉದ್ಧೇಶಿಸುವಾಗ ದೇವರ ವಾಗ್ಧಾನಗಳ ಈ ಪೂರೈಕೆಯು ಎಲ್ಲರಿಂದಲೂ ಮಾನ್ಯಮಾಡಲ್ಪಡುತ್ತದೆ. ಈ ರೀತಿಯಾಗಿ **ದೃಷ್ಟಿ** ಅಥವಾ **ಜ್ಞಾನವು** ಈಗ ನಂಬಿಕೆಯ ಕಣ್ಣಿನಿಂದ ಗ್ರಹಿಸಲ್ಪಡುವುದಕ್ಕಿಂಥ ಹೆಚ್ಚಾಗಿ ಗ್ರಹಿಸಲ್ಪಡುತ್ತವೆ. ಆದರೆ ನಂಬಿಕೆಯು ಅವಶ್ಯ. ಆದಾಗ್ಯೂ ಅವರುಗಳು ಸಮರ್ಪಕತೆಗೆ ಹೋಗಬಹುದು. ಈ ರೀತಿಯಲ್ಲಿ ಧರ್ಮಯುಗದ ಅಂತ್ಯದೊಳಗೆ ಹೊಂದಿಕೊಳ್ಳಬಹುದಾದ ನಿಜವಾದ ಸಮರ್ಥನೆಯು ಪಟ್ಟುಹಿಡಿದು ವಿಶ್ವಾಸ ಮತ್ತು ಕಾರ್ಯಗಳನ್ನು ಯಾರು ಅನುಷ್ಠಾನ ಗೊಳಿಸುತ್ತಾರೋ ಅವರು ಮಾತ್ರವೇ ಪಡಕೊಳ್ಳುವರು. **'ನಿಮ್ಮ ವಿಶ್ವಾಸದ ಮೂಲಕ'** ಎಂಬ ಸಭೆಯ ಈಗಿನ ನಿರ್ಣಯಕ್ಕೆ ವಿರೋಧವಾಗಿ ಆ ಕಾಲದ ಬಗ್ಗೆ "ಮರಣಹೊಂದಿರುವವರು ಪುಸ್ತಕದಲ್ಲಿರುವ **ಅವರ ಕಾರ್ಯಗಳ ನಿಮಿತ್ತ** ನಿರ್ಣಯಿಸಲ್ಪಡುವರು" ಎಂದು ಬರೆದಾಗ್ಯೂ ಅವರ ಕಾರ್ಯಗಳು ಇನ್ನೂ ವಿಶ್ವಾಸವಿಲ್ಲದೆ ಇಲ್ಲ. ನಮ್ಮ ವಿಶ್ವಾಸವು ಸಹಾ ನಮ್ಮ ಸಾಮರ್ಥ್ಯಕ್ಕೆ ತಕ್ಕ ಕಾರ್ಯಗಳಿಲ್ಲದೆ ಇರಬಾರದು.

**"ದೇವರು ಅನ್ಯಜನರನ್ನು ನಂಬಿಕೆಯ ನಿಮಿತ್ತವಾಗಿಯೇ ನೀತಿವಂತರೆಂದು ನಿರ್ಣಯಿಸುವನು"**(ಗಲಾತ್ಯ ೩:೮) ಎಂಬ ಅಪೋಸ್ತಲನ ಹೇಳಿಕೆಯು ಪುನಃವಶದಿಂದ ಸಂಧಾನವು ಧರ್ಮಶಾಸ್ತ್ರದ ಒಡಂಬಡಿಕೆಯ ಫಲವಾಗಿ ದೊರೆಯುವಂತದಲ್ಲ ಆದರೆ ಹೊಸ ಒಡಂಬಡಿಕೆಯ ಅಡಿಯಲ್ಲಿರುವ ಕೃಪೆಯಿಂದಲೇ ಮತ್ತು ಇದನ್ನು ನಂಬಬೇಕು,

ಮತ್ತು ಒಪ್ಪಿಕೊಂಡು ಅದರಿಂದ ಲಾಭಹೊಂದುವ ಎಲ್ಲರಿಂದಲೂ ನೆರವೇರಿಸತಕ್ಕದ್ದು ಎಂಬುದನ್ನು ಸೂಚಿಸುವ ಸನ್ನಿವೇಶದಲ್ಲಿ ತೋರಿಸಲಾಗಿದೆ. ಹಾಗಾದರೆ, ಪ್ರಸ್ತುತ ಮತ್ತು ಭವಿಷ್ಯದಲ್ಲಿನ ಸಮರ್ಥನೆಯ ವತ್ಯಾಸವು ಏನೇಂದರೆ ಪ್ರಸ್ತುತ ಸಮಯದ ವಿಶ್ವಾಸಿಗಳು ವಿಶ್ವಾಸದ ಸರಿಯಾದ ಅನುಷ್ಠಾನದಲ್ಲಿ ತೊಡಗಿರುತ್ತಾರೆ ಇದು ತತ್ಕ್ಷಣದಲ್ಲಿ ಹಾಗೆಂದು ಎಣಿಕೆಯಾದ ಸಮರ್ಥನೆಯ ಮೂಲಕ ತಂದೆಯೊಡನೆ ಸಾಂಗತ್ಯವನ್ನು ಒದಗಿಸುವುದು ಮತ್ತು ಧರ್ಮಯುಗದ ಅಂತ್ಯದಲ್ಲಿ ಮಾತ್ರವೇ ನಿಜವಾದ ಸಮರ್ಥನೆ ಮತ್ತು ದೇವರೊಡನೆ ಒಡನಾಟವನ್ನು ಒದಗಿಸಿಕೊಡುವುದು. ಈ ಮಧ್ಯಕಾಲದಲ್ಲಿ ಪ್ರಪಂಚವು ಮಹಾ ಮಧ್ಯಸ್ತನ ಕೈಗಳಲ್ಲಿರುವುದು. ಆತನ ಕೆಲಸಗಳು ಅವರಿಗೆ ದೇವರ ಚಿತ್ತವನ್ನು ಪ್ರತಿನಿಧಿಸುತ್ತದೆ ಮತ್ತು ಅದು ಅವರೊಡನೆ ವ್ಯವಹರಿಸಿ ಅವರು ನಿಜವಾಗಿ ಸಮರ್ಥನೆಗೊಳ್ಳುವ ತನಕ ಅವರನ್ನು ವಿಧೇಯತೆಯಲ್ಲಿ ತಿದ್ದಿದಾಗ ಅವರು ತಂದೆಯ ಮುಂದೆ ದೋಷವಿಲ್ಲದವರಾಗಿ ಕಾಣಿಸಿಕೊಳ್ಳುವರು. ಆಗ ಆತನು ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವನು (೧ ಕೊರಿ ೧೫:೨೪ ನೋಡಿರಿ).

ಈಗ ಕರ್ತನು ತನ್ನ ನೂತನ ಸೃಷ್ಟಿಯ ರಚನೆಗಾಗಿ ಒಂದು ವಿಶೇಷ ವರ್ಗವನ್ನು ಹುಡುಕುತ್ತಿರುವನು. ಕ್ರಿಸ್ತನಲ್ಲಿ ದೇವರ ಕೃಪೆಯ ಜ್ಞಾನವನ್ನು ಹೊಂದಿದ್ದು ಆ ದೈವಿಕ ವ್ಯವಸ್ಥೆಯನ್ನು ನಂಬಿಕೆಯಿಂದ ಅಂಗೀಕರಿಸಿದವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಆ ಪರಲೋಕದ ಕರೆಗೆ ಕರೆದಿರುವುದಿಲ್ಲ. ಇವರುಗಳು ದೇವರ ಯೋಜನೆಯ ಭವ್ಯವಾದ ಪರಿಣಾಮಗಳನ್ನು ಸಂಪೂರ್ಣವಾಗಿ ನಂಬಿ ಮತ್ತು ಅದರಿಂದ ಪ್ರಸ್ತುತ ಕಾಲದಲ್ಲಿ ತಮ್ಮ ಜೀವನ ಕ್ರಮವನ್ನು ರೂಪಿಸಿಕೊಳ್ಳುವ ಪ್ರಭಾವ ಪಡೆದು, ಇನ್ನೂ ಪ್ರಶಂಸನಾರ್ಹವಾದ ಶ್ರೇಷ್ಟ ಜೀವಿತವನ್ನು ಬಾಳುತ್ತಾರೆ. ಇದನ್ನು ಪ್ರಸ್ತುತ ಜೀವನಕ್ಕೆ ಮತ್ತು ಅದರ ಹಿತಾಸಕ್ತಿಗಳಿಗೆ ಹೋಲಿಸುವಾಗ ಅದು ನಷ್ಟವೂ ವ್ಯರ್ಥವೂ ಎಂದು ತೋರಿಬರುತ್ತದೆ. ಕೆಡುಕನ ಪ್ರಭುತ್ವವು ಜ್ಞಾನವನ್ನು, ಪ್ರೀತಿಯನ್ನು ಮತ್ತು ಸೃಷ್ಟಿಕರ್ತನ ಶಕ್ತಿಯನ್ನು ಪ್ರತಿಭಟಿಸುವುದೆಂದು ಕಂಡುಬರುವ ಅಂಧಕಾರದಲ್ಲಿ ವಿಶ್ವಾಸವನ್ನು ಕಾರ್ಯಗತಗೊಳಿಸುವಾಗ, ವಿಶ್ವಾಸಿಗಳನ್ನು ಅವರು ಧರ್ಮಯುಗದಲ್ಲಿ ಜೀವಿಸುತ್ತಿದ್ದರೋ ಮತ್ತು ಅದರಲ್ಲಿನ ಮಾನವ ಸಮರ್ಪಕತೆಯ ಪುನಃವಶವನ್ನು ಅನುಭವಿಸುತ್ತಿದ್ದಾರೊ ಎಂಬಂತೆ ದೇವರು ಅವರನ್ನು ಎಣಿಸುತ್ತಾನೆ ; ಈ ಎಣಿಕೆಯ ನೆಲೆಯನ್ನು ಅವರು ಸಮರ್ಪಣೆಯಲ್ಲಿ ಪ್ರಸ್ತುತಿಪಡಿಸಬೇಕೆಂಬ ಉದ್ಧೇಶದಿಂದ ಅವರಿಗೆ ದಯಪಾಲಿಸಲಾಗುತ್ತದೆ. ಇದರಿಂದ ಅವರು ಮಾನವ ಸಮರ್ಪಕತೆಯನ್ನು ಆಗಾಗ್ಗೆ ಹೊಂದಿಕೊಂಡು ಸಮರ್ಪಕವೆಂದು ಎಣಿಸಲಾಗಿರುವ ತಮ್ಮ ದೇಹವನ್ನು ಮತ್ತು ತಮ್ಮೆಲ್ಲಾ ಪುನಃವಶದ ಸೌಕರ್ಯಗಳನ್ನು , ಈ ಲೋಕದ ನಿರೀಕ್ಷೆ, ಗುರಿ ಮತ್ತು ಹಿತಾಸಕ್ತಿಗಳನ್ನು ಸಜೀವ ಯಜ್ಞವನ್ನಾಗಿ ಸಮರ್ಪಿಸಿ ಇವುಗಳನ್ನು ಪರಲೋಕದ ನಿರೀಕ್ಷೆ ಮತ್ತು ದೈವ ಸ್ವಭಾವದ ವಾಗ್ದಾನಗಳೊಂದಿಗೆ ಮತ್ತು ಕ್ರಿಸ್ತನೊಡನೆ ಜೊತೆ-ವಾರಸುದಾರಿಕೆಯೊಂದಿಗೆ ಬದಲಾಯಿಸಿಕೊಳ್ಳುತ್ತಾರೆ. ಇವುಗಳಿಗೆ ನಮ್ಮ ನಿಷ್ಟೆಯ ಸಾಕ್ಷಿಯಾಗಿ ಲೋಕದ ಹಿತಾಸಕ್ತಿಗಳ ಮತ್ತು ಮಾನವ ಗೌರವದ ನೋವುಕಷ್ಟಗಳು ಹಚ್ಚಲ್ಪಟ್ಟಿವೆ.

ಐದನೆಯದಾಗಿ, ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟ ಈ ವರ್ಗವು ಇಚ್ಚಾಪೂರ್ವಕವಾದ ತಮ್ಮ ವ್ಯತಿರಿಕ್ತ ಕಾರ್ಯಗಳಿಂದ ತನ್ನ ವಿಶ್ವಾಸವನ್ನು ಅಲ್ಲಗಳೆಯಬಾರದು. ದೇವರು ವಿಶ್ವಾಸದ ದೃಷ್ಟಿಯಿಂದ ಅವರ ಮೇಲೆ ಅಪರಾಧಗಳನ್ನು ಹೊರಿಸದೆ ಮತ್ತು ಅವರೆಲ್ಲರೂ ಕಲ್ವಾರಿಯಲ್ಲಿ ಕರ್ತನನ್ನು ಸಂಧಿಸಿದ್ದಾರೋ ಎಂಬಂತೆ ಅವರದೊಡನೆ ಕೃಪಾಪೂರ್ವಕವಾಗಿ ವರ್ತಿಸುತ್ತಾ ಅವರ ಐಹಿಕತೆ ಅಥವಾ ನಿಜವಾದ ಅವರ ಸಾಧನೆಗನುಸಾರವಾಗಿ ಅಲ್ಲದೆ ಅವರುಗಳ ಚೈತನ್ಯಗಳಿಗೆ ತಕ್ಕಂತೆ, ಚಿತ್ತ ಮತ್ತು ಉದ್ಧೇಶಗಳಿಗನುಸಾರವಾಗಿ ವ್ಯವಹರಿಸುತ್ತಿರುವನಾದಗ್ಯೂ ದೇಹವು ತಮ್ಮಲ್ಲಿ ಇರುವ ತನಕ ಸಾಧ್ಯವಾದ ಮಟ್ಟಿಗೆ ನೂತನ ಮನಸ್ಸಿನ ವಶಕ್ಕೆ ಒಳಗಾಗುವುದನ್ನು ಆತನು ಬಯಸುತ್ತಾನೆ. ಅದು ಎಲ್ಲಾ ಒಳ್ಳೆಯ ಕಾರ್ಯಗಳಿಗೆ ತನ್ನ ಅವಕಾಶ ಮತ್ತು, ಸಾಧ್ಯತೆಗಳ ವಿಶಾಲತೆಯಲ್ಲಿ ಸಹಕರಿಸಬೇಕು. ಈ ಅರ್ಥದಲ್ಲಿ ಮತ್ತು ಈ ಶ್ರೇಣಿಯಲ್ಲಿ ನಮ್ಮ ಕಾರ್ಯಗಳು ನಮ್ಮ ಸಮರ್ಥನೆಯನ್ನು ದೃಢಪಡಿಸುವ ಪುರಾವೆಯಾಗಿದ್ದು ನಮ್ಮ ಭಕ್ತಿಯ ನಿಷ್ಟೆಯನ್ನು ರುಜುವಾತು ಪಡಿಸಬೇಕು. ಪರಂತು, ಕರ್ತನಿಂದ ನಮ್ಮ ನಿರ್ಣಯವು ನಮ್ಮ ಕಾರ್ಯಗಳಿಗನುಸಾರವಾಗಿ ಅಲ್ಲ, ಆದರೆ ವಿಶ್ವಾಸಕ್ಕನುಸಾರವಾದುದು ; ನಮ್ಮ ಕಾರ್ಯಾನುಸಾರ ನಿರ್ಣಯಿಸದಲ್ಲಿ ನಾವಲ್ಲರೂ ದೇವರ ಮಹಿಮೆಯಲ್ಲಿ ಕೊರತೆಯುಳ್ಳವರಾಗಿದ್ದೇವೆ. ಆದರೆ ನಮ್ಮ ಮನಸ್ಸು ಮತ್ತು ಉದ್ಧೇಶಗಳಿಗನುಸಾರವಾಗಿ ನಿರ್ಣಯಿಸಿದ್ದೇ ಆದರೆ ನೂತನ

ಸೃಷ್ಟಿಯು ದೈವಿಕ ನಿರ್ಧಿಷ್ಟಮಾನಕ್ಕನುಸಾರವಾಗಿ ಕೃಪಾ ಒಡಂಬಡಿಕೆಯ ಶರತ್ತಿನಡಿಯಲ್ಲಿ ಅಂಗೀಕಾರಗೊಳ್ಳಬಹುದು. ಇದರಿಂದ ಕ್ರಿಸ್ತನ ಮೌಲ್ಯಗಳು ನಮ್ಮ ಇಚ್ಛಾಪೂರ್ವಕವಲ್ಲದ ಕಳಂಕಗಳನ್ನು ಮುಚ್ಚಿಹಾಕುತ್ತದೆ. ಯಾರೂ ಸಹಾ ಕರ್ತನು ನಾವು ಪ್ರಸ್ತುತ ಅಸಮರ್ಪಕ ಸ್ಥಿತಿಯಲ್ಲಿಯೂ ನಮ್ಮಿಂದ ಸಧ್ಯವಾದ ಮಟ್ಟಿಗೆ ನೀತಿಯ ಫಲಗಳನ್ನು ತರುವಂತೆ ನಿರೀಕ್ಷಿಸುವುದನ್ನು ಅಡ್ಡಿಮಾಡುವಂತಿಲ್ಲ. ಇದಕ್ಕಿಂಥ ಹೆಚ್ಚಾಗಿ ಆತನು ಮತ್ತೇನನ್ನೂ ಕೇಳುವವನಲ್ಲ, ಇದಕ್ಕಿಂತ ಕಡಿಮೆಯಾದುದನ್ನು ಆತನು ಅಂಗೀಕರಿಸುತ್ತಾನೆಂದೂ, ಬಹುಮಾನಿಸುವನೆಂದೂ ನಾವು ನಿರೀಕ್ಷಿಸಲಾಗದು.

ನೀತಿನಿರ್ಣಯವು ಕೃಪೆಯಿಂದ, ರಕ್ತದಿಂದ, ನಮ್ಮ ನಂಬಿಕೆಯ ಮೂಲಕ ಮತ್ತು ಕಾರ್ಯ ಸಂಬಧಿತವಾದುದು ಎಂಬ ಈ ಸಾಮಾನ್ಯ ಕ್ರಿಯೆಯ ಉದಾಹರಣೆಯಾಗಿ ಒಂದು ವಿದ್ಯುತ್ ಚಾಲಿತ ಕಾರನ್ನು ತೆಗೆದುಕೊಳ್ಳಬಹುದು. ಕೇಂದ್ರೀಯ ಶಕ್ತಿಕೇಂದ್ರವು ಕೆಲಮಟ್ಟಿಗೆ ನಮ್ಮ ನೀತಿನಿರ್ಣಯದ ಮೂಲವನ್ನು ಉದಹರಿಸುತ್ತದೆ – ಇದು ದೇವರ ಕೃಪೆ. ಇದರಿಂದ ವಿದ್ಯುತ್‌ಶಕ್ತಿಯನ್ನು ಪ್ರಸರಿಸುವ ತಂತಿಗಳು ನಮ್ಮ ಸಮರ್ಥನೆಯಲ್ಲಿ ದೇವರ ಕಾರ್ಯಭಾರಿಯಾದ ಕ್ರಿಸ್ತನನ್ನು ಅಸಮರ್ಪಕವಾಗಿ ಹೋಲುತ್ತವೆ ; ಕಾರುಗಳು ವಿಶ್ವಾಸಿಗಳನ್ನು ಮತ್ತು ಟ್ರಾಲಿಗಳು ಕಾರ್ಯಗತಗೊಳಿಸಬೇಕಾದ ಮತ್ತು ತಂತಿಗಳಿಗೆ ಒತ್ತಿಹಿಡಿಯಬೇಕಾಗುವ ವಿಶ್ವಾಸವನ್ನು ಪ್ರತಿನಿಧಿಸುತ್ತವೆ. (೧) ಎಲ್ಲವೂ ವಿದ್ಯುತ್ ಶಕ್ತಿಯ ಮೇಲೆ ಅವಲಂಬಿತ ವಾಗಿದೆ. (೨) ಎರಡನೆಯ ಮುಖ್ಯ ವಸ್ತುವೆಂದರೆ ಆ ವಿದ್ಯುತ್ ಶಕ್ತಿಯನ್ನು ನಮ್ಮವರೆಗೆ ಪ್ರಹರಿಸುವ ತಂತಿಗಳು (೩) ನಮ್ಮ ವಿಶ್ವಾಸದ ನಾಲೆಯಾದ ಕರ್ತನಾದ ಕ್ರಿಸ್ತನನ್ನು ಮುಟ್ಟಿ ಆತನನ್ನು ಒತ್ತಿಹಿಡಿಯುವ ವಿಶ್ವಾಸದ ತೋಳುಗಳಿಲ್ಲದೆ, ನಮಗೆ ಯಾವುದೇ ಆಶಿರ್ವಾದ ದೊರೆಯಲಾರದು (೪) ನಾವು ಕರ್ತನಾದ ಯೇಸುಕ್ರಿಸ್ತನ ಸಂಪರ್ಕದಿಂದ ಪಡಕೊಳ್ಳುವ ಆಶೀರ್ವಾದಗಳು ಕಾರು ವಿದ್ಯುತ್ ಶಕ್ತಿಯ ಮೂಲಕ ಬೆಳಗಲು ಅನುಗುಣವಾಗಿರುತ್ತದೆ ಮತ್ತು ಇದು ಶಕ್ತಿ ಇದೆ ಮತ್ತು ಇದನ್ನು ಉಪಯೋಗಿಸಬಹುದು ಎಂಬುದನ್ನು ಸೂಚಿಸುತ್ತದೆ.; ಆದರೆ (೫) ಮೋಟಾರ್‌ಮ್ಯಾನ್ (ಚಾಲಕ) ಮತ್ತು ಆತನ ಲೆವರ್ (ಸನ್ನೆಗೋಲು)ಗಳು ಮಾನವನ ಇಚ್ಛಾಶಕ್ತಿಯನ್ನು ಪ್ರತಿನಿಧಿಸುತ್ತವೆ. ಅದೇ ಸಮಯದಲ್ಲಿ (೬) ಮೋಟಾರು ನಮ್ಮ ಎಲ್ಲಾ ಚಟುವಟಿಕೆಗಳನ್ನು ಮತ್ತು ನಂಬಿಕೆಯ ಮೂಲಕ ನಮಗೆ ದೊರೆಯುವ ಚೈತನ್ಯವನ್ನು ನಿರೂಪಿಸುತ್ತದೆ. ಈ ಎಲ್ಲಾ ಶಕ್ತಿಗಳು ಒಂದುಗೂಡಿ ನಮ್ಮ ಪ್ರಗತಿಗೆ ಅವಶ್ಯಕವಾಗಿವೆ ಮತ್ತು ಇದರಿಂದ ನಾವು ಪ್ರದಕ್ಷಿಣೆಯನ್ನು ಮಾಡಿ ಅಂತಿಮವಾಗಿ ಕಾರಿನ ಉಗ್ರಾಣವನ್ನು (car barns) ತಲುಪಬಹುದು. ಇದು ಈ ಉದಾಹರಣೆಯಲ್ಲಿ ನೂತನ ಸೃಷ್ಟಿಗಳಾದ ಅನೇಕ ಬಿಡಾರಗಳಿರುವ ತಂದೆಯ ಮನೆಯಲ್ಲಿ ನಮ್ಮ ಸ್ಥಾನವನ್ನು ಅಥವಾ ಅನೇಕ ಸ್ವಭಾವಗಳುಳ್ಳ ಅನೇಕ ಮಕ್ಕಳಲ್ಲಿ ನಮ್ಮ ಪರಿಸ್ಥಿತಿಯನ್ನು ಸೂಚಿಸುತ್ತದೆ.

## ನೀತಿನಿರ್ಣಯ ಮತ್ತು ಪುರಾತನ ಯೋಗ್ಯರು

ಹಿಂದಿರುಗಿ ನೋಡುವಲ್ಲಿ, ನಾವು ಅಪೋಸ್ತಲರ ದಾಖಲೆಗಳಿಂದ ಬಹಳ ಹಿಂದೆ, ನಮ್ಮ ಸಮರ್ಥನೆಗಾಗಿ ಅಮೂಲ್ಯ ರಕ್ತವು ಸುರಿಸಲ್ಪಡುವುದಕ್ಕಿಂತಲೂ ಹಿಂದೆ ಹಾನೋಕ, ನೋಹ, ಅಬ್ರಹಾಮ, ಇಸಾಕ, ಯಾಕೋಬ, ದಾವೀದ ಮತ್ತು ಇನ್ನೂ ಅನೇಕ ಪವಿತ್ರ ಪ್ರವಾದಿಗಳು ವಿಶ್ವಾಸದ ಮೂಲಕ ನೀತಿವಂತರೆಂದು ಎಣಿಸಲ್ಪಟ್ಟಿದ್ದರು ಎಂದು ನೋಡುತ್ತೇವೆ. ಆದರೆ ಅವರುಗಳು ಅಮೂಲ್ಯ ರಕ್ತದ ಮೇಲೆ ವಿಶ್ವಾಸವಿಡಲು ಸಾಧ್ಯವಾಗದ್ದರಿಂದ ಅವರನ್ನು ನೀತಿವಂತರೆಂದು ನಿರ್ಣಯಿಸಿದ ಆ ವಿಶ್ವಾಸವು ಯಾವುದು? ಬರೆದಿರುವಂತೆ ನಾವು ಇದಕ್ಕೆ ಹೀಗೆ ಉತ್ತರಿಸುತ್ತೇವೆ – "ಅವರು ದೇವರನ್ನು ನಂಬಿದರು, ಈ ನಂಬಿಕೆಯು ಅವರು ನೀತಿವಂತರೆಂದು ನಿರ್ಣಯಿಸಲು ಎಣಿಕೆಯಾಯಿತು". ನಿಜ, ದೇವರು ನಮಗೆ ಬಯಲುಪಡಿಸಿದಂತೆ ಅವರಿಗೆ ತನ್ನ ಯೋಜನೆಯ ವೇದಾಂತವನ್ನು ಬಯಲುಪಡಿಸಲಿಲ್ಲ. ಆತನು ಎಷ್ಟರಮಟ್ಟಿಗೆ ನ್ಯಾಯವುಳ್ಳವನು ಆದಾಗ್ಯೂ ಕ್ರಿಸ್ತನಲ್ಲಿ ನಂಬಿಕೆಯುಳ್ಳವರ ಬಗ್ಗೆ ಆತನು ಹೇಗೆ ನೀತಿ ನಿರ್ಣಾಯಕನು ಎಂದು ತಿಳಿದುಕೊಳ್ಳಲು ನಮಗೆ ಸಾಧ್ಯವಾಯಿತು. ಆದುದರಿಂದ ಹಿಂದಿನವರು ತಮಗೆ ಬಯಲು ಪಡಿಸದ ಸಂಗತಿಗಳನ್ನು ನಂಬದಿರುವುದಕ್ಕೆ ಜವಾಬ್ಧಾರರೆನಿಸಿಕೊಳ್ಳುವುದಿಲ್ಲ. ಅವರು ದೇವರು ತಮಗೆ ಪ್ರಕಟಿಸಿದವುಗಳನ್ನು ಮಾತ್ರವೇ ನಂಬಿದರು.

ಈ ಪ್ರಕಟನೆಯನ್ನು ನಾವೀಗ ಸಿಂಧೂರ ವೃಕ್ಷದ ಹಣ್ಣಿನಲ್ಲಿ ಆ ವೃಕ್ಷವಿರುವಂತೆ ಬಹಳ ಸಂಕ್ಷಿಪ್ತ ರೂಪದಲ್ಲಿ ಮಾತ್ರವೇ ಕಾಣುತ್ತೇವೆ. ಹಾನೋಕನು ಮೆಸ್ಸೀಯನ ಬರುವಿಕೆ ಮತ್ತು ಅದರ ಫಲವಾಗಿ ದೊರೆಯಲಿರುವ ಆಶಿರ್ವಾದಗಳ ಬಗ್ಗೆ ಪ್ರವಾದಿಸಿದನು. ಅಬ್ರಹಾಮನು ತನ್ನ ಸಂತಾನವು ದೇವರ ಕೃಪೆಗೆ ಪಾತ್ರವಾಗುವುದು ಮತ್ತು ಇದರ ಮೂಲಕವಾಗಿ ಎಲ್ಲಾ ಜನಾಂಗಗಳೂ ಆಶಿರ್ವಾದ ಹೊಂದುವವರು ಎಂದು ನಂಬಿದ್ದನು. ಇದು ಸತ್ತವರ ಪುನರುತ್ಥಾನದ ಅಭಿಪ್ರಾಯವನ್ನು ಸೂಚಿಸುತ್ತದೆ. ಯಾಕೆಂದರೆ, ಈ ಲೋಕದ ಅನೇಕ ಜನಾಂಗಗಳು ಈಗಾಗಲೇ ಸತ್ತು ಹೋಗಿದ್ದಾರೆ. ದೇವರು ಸತ್ತವರನ್ನು ಎಬ್ಬಿಸಬಲ್ಲವನಾಗಿದ್ದಾನೆ ಎಂದು ಅಬ್ರಹಾಮನು ನಂಬಿದ್ದನು. ಆತನು ಮತ್ತು ಇತರರು ಅದೆಷ್ಟು ನಿಶ್ಚಿತವಾಗಿ ದೇವರು ಈ ಲೋಕದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುವ ನಿಖರವಾದ ಪದ್ಧತಿಗಳ ಬಗ್ಗೆ ಮತ್ತು ಮೆಸ್ಸೀಯನಿಗೆ ಎಷ್ಟು ಮಂದಿ ವಿಧೇಯರಾಗುತ್ತಾರೋ ಅವರನೆಲ್ಲಾ ಆತನು ಯಾವರೀತಿ ಸಮರ್ಥಿಸುತ್ತಾನೆಂದು ಗ್ರಹಿಸಿದ್ದರೆಂಬುದು ನಮಗೆ ನಿಶ್ಚಿತವಾಗಿ ತಿಳಿಯದು ; ಆದರೆ ನಮಗೆ ಈ ಬಗ್ಗೆ ದೇವರ ಸ್ವಂತ ಮಾತುಗಳು ಲಭ್ಯ – ಕನಿಷ್ಟ ಅಬ್ರಹಾಮನಾದರೂ ತನ್ನ ಗಣನೀಯ ಭಿನ್ನತೆಯಿಂದಾಗಿ ಬರಲಿಋುವ ಧರ್ಮಯುಗದ ದಿನದ ಬಗ್ಗೆ ಗ್ರಹಿಸುವವನಾದನು ಮತ್ತು ಬಹುಶಃ ಸ್ವಲ್ಪಮಟ್ಟಿಗೆ ಪಾಪಗಳ ಪ್ರಾಯಶ್ಚಿತ್ತ ಬಲಿಯ ಆಲೋಚನೆಯ ಬಗ್ಗೆಯೂ ಗ್ರಹಿಸಿದ್ದನು ಎಂಬುದು ನಮಗೆ **“ನಿಮ್ಮ ಮೂಲ ಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು ; ಅದನ್ನು ನೋಡಿ ಸಂತೋಷಗೊಂಡನು”** (ಯೋಹಾನ ೮:೫೬) ಎಂಬ ಕರ್ತನ ಸ್ವಂತ ಮಾತುಗಳಲ್ಲಿ ತಿಳಿದುಬರುತ್ತದೆ.

ದೇವರೊಡನೆ ಅನ್ಯೂನತೆಗೆ ಮುನ್ನ ಅಂದರೆ ಕ್ರಿಸ್ತಯೇಸುವಿನ ಸಮರ್ಪಣೆಯಲ್ಲಿ ಅನ್ಯೂನತೆಯನ್ನು ಸ್ಥಾಪಿಸಲು ದೇವರು ಸುವಾರ್ತಾ ಯುಗದಲ್ಲಿ ನಿತ್ಯಜೀವಕ್ಕಾಗಿ ಹಾಕಿದ ಅಸ್ಥಿಭಾರದ ಮೊದಲು ಇದ್ದ ಅಬ್ರಹಾಮನ ಸಮರ್ಥನೆಗೂ ಇತರರ ಸಮರ್ಥನೆಗೂ ಇರುವ ವತ್ಯಾಸವನ್ನು ಎಲ್ಲರು ಸ್ಪಷ್ಟವಾಗಿ ಕಾಣಲಾರರು. ಇವುಗಳಲ್ಲಿ ಬಹಳಷ್ಟು ವತ್ಯಾಸಗಳಿವೆ. ಹೀಗಿದ್ದಾಗ್ಯೂ ಈ ಎರಡು ಆಶೀರ್ವಾದಗಳ ನಡುವೆ ವಿಶ್ವಾಸವು ಬೇಕಾಗುತ್ತದೆ. ಎಲ್ಲರೂ ನ್ಯಾಯವಾಗಿ ಮರಣದ ಶಿಕ್ಷೆಯಲ್ಲಿದ್ದರು, “ಜೀವಕ್ಕಾಗಿ ನೀತಿ ನಿರ್ಣಯ” (ರೋಮ ೫:೧೮ ನೋಡಿರಿ), ಪಾಪಗಳಿಗಾಗಿ ಮಹಾಯಜ್ಞವು ನಮ್ಮ ವಿಮೋಚಕನ ಮೂಲಕ  ಸಮರ್ಪಿಸಲ್ಪಡುವವರೆಗೆ ಯಾರೂ ಈ ಶಿಕ್ಷೆಯಿಂದ ಹೊರತಾದವರೆಂದು ಎಣಿಸುವುದು ಸಾಧ್ಯವಿಲ್ಲ. ಅಪೋಸ್ತಲನು ಹೇಳುವಂತೆ ದೇವರು ಈ ವಿಷಯದಲ್ಲಿ ನ್ಯಾಯವಂತನಾಗಿರಲು ಸಮರ್ಪಣೆಯು ಅಗತ್ಯವಾಗಿತ್ತು (ರೋಮ ೩:೨೬ ನೋಡಿರಿ). ಆದರೆ ನ್ಯಾಯವು ವಿಮೋಚನಾ ಯೋಜನೆಯ ನಿರ್ವಹಣೆಯನ್ನು ಪೂರ್ವಭಾವಿಯಾಗಿ ಕಂಡು, ಕೇವಲ ದೇವರ ಕೃಪೆಯ ನಿದರ್ಶನ ಎಂಬುದಾಗಿ ಅವಶ್ಯ ವಿಶ್ವಾಸವನ್ನು ಹೊಂದಿದವರಿಗೆ ಅದರ ಪ್ರಕಟನೆಗೆ ಅಡ್ಡಿಪಡಿಸಲಿಲ್ಲ – ಈ ಶ್ರೇಣಿಯವರಿಗೆ ಇದು ದೇವರ ಅನ್ಯೂನತೆಗೆ ನಿದರ್ಶನವೆಂದು ನಿರ್ಣಯಿಸಿತು.

ಅಪೊಸ್ತಲನು ‘ನಿತ್ಯಜೀವಕ್ಕಾಗಿ ನೀತಿನಿರ್ಣಯ’ (ರೋಮ ೫:೧೮ ನೋಡಿರಿ) ವನ್ನು ಕ್ರಿಸ್ತನ ಮೂಲಕವಾದ ಒಂದು ವ್ಯವಸ್ಥೆ ಎಂದು ಸೂಚಿಸುತ್ತಾನೆ. ಇದು ಅಂತಿಮವಾಗಿ ಎಲ್ಲರಿಗೂ ತೆರೆಯಲ್ಪಟ್ಟಿದೆ ; ನೂತನ ಸೃಷ್ಟಿಗೆ ಕರೆಯಲ್ಪಟ್ಟವರು ಲೋಕದವರಿಗಿಂತ ಮುಂಚಿತವಾಗಿ ತಮ್ಮ ವಿಶ್ವಾಸವನ್ನು ಕಾರ್ಯಗತಗೊಳಿಸುವುದರ ಮೂಲಕ ಜೀವದ ಈ ಸಮರ್ಥನೆಯನ್ನು ಈಗಲೇ ಹೊಂದಿಕೊಳ್ಳುತ್ತಾರೆ. ಈ ಸಮರ್ಥನೆಯು ದೇವರೊಂದಿಗೆ ಹೊರಗಿನವರಾಗಿಯಾಗಲೀ ಪರಕೀಯರಾಗಿಯಾಗಲೀ, ಪರದೇಶದವರಾಗಿಯಾಗಲೀ, ಶತ್ರುಗಳಾಗಿಯಾಗಲೀ ಅಲ್ಲದೆ ಆತನ ಸ್ನೇಹಿತರಾಗಿ, ಅನ್ಯೂನತೆಯ ಶರತ್ತಿಗನುಸಾರವಾದುದು ಮಾತ್ರವಲ್ಲ , ಅಧಿಕವಾಗಿ ಇದೇ ವಿಶ್ವಾಸದ ಮೂಲಕ ವಿಂಓಚಕನ ಸಮರ್ಪಣೆಯಲ್ಲಿ ಪಡೆದುಕೊಂಡ ಜೀವದ ಹಕ್ಕಿನ ಪುನಃವಶವನ್ನು ಗ್ರಹಿಸುವುದೂ ಮತ್ತು ಈ ಲೋಕದ ಜೀವದ ಹಕ್ಕನ್ನು ಜೊತೆ ತ್ಯಾಗಿಗಳಾಗಿ ಮತ್ತು ಸಹಾಯಕ ಯಾಜಕರಾಗಿ ಈ ಉದ್ಯೋಗದ ಮಹಾ ಯಾಜಕನಾದ ಯೇಸು ಕ್ರಿಸ್ತನೊಂದಿಗೆ ಅನ್ಯೂನತೆಯಲ್ಲಿ ಸಮರ್ಪಿಸುವುದೂ ಅವರಿಗೆ ಸಾಧ್ಯ .

ಅವರಿಗೆ ಇನ್ನೂ ಪೂರ್ಣವಾಗಿ ಬಯಲುಪಡಿಸದ, ಇನ್ನೂ ಪ್ರಾರಂಭಗೊಳ್ಳದ ದೇವರ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ವಿಶ್ವಾಸವಿಟ್ಟು ಪುರಾತನ ಯೋಗ್ಯರು ದೇವರೊಡನೆ ಸಾಮರಸ್ಯಕ್ಕೆ ಬರಬಹುದಾಗಿದೆ. ಕ್ರಿಸ್ತನ ಸಮರ್ಪಣೆಯಲ್ಲಿ ಪಾಪದ ಪ್ರಾಯಶ್ಚಿತ್ತವು ನಿಜವಾಗಿ ನೆರವೇರದ ಹೊರತು ದೇವರ ನ್ಯಾಯವು ಮುಂದುವರೆಯಲು ಸಾಧ್ಯವಿಲ್ಲ ಎಂದು ತೋರಿಬರುತ್ತದೆ. ಇದು ಅಪೋಸ್ತಲನ ಹೇಳಿಕೆಗೆ ಪೂರ್ಣವಾಗಿ ಅನುಗುಣವಾಗಿದೆ "**ದೇವರು ನಮಗೋಸ್ಕರ ಶ್ರೇಷ್ಟವಾದ ಭಾಗ್ಯವನ್ನು** (.ಸುವಾರ್ತೆ, ಸಭೆ, ನೂತನ ಸೃಷ್ಟಿಗಳೆಂಬ) **ಏರ್ಪಡಿಸಿ ನಾವಿಲ್ಲದೆ ಅವರು** (ವಿನಯ ಶೀಲರೂ ಮತ್ತು ಪ್ರಾಮಾಣಿಕರೂ ಆದ ಪುರಾತನ ಯೋಗ್ಯರು) **ಸಿದ್ಧಿಗೆ ಬರಬರದೆಂದು ಸಂಕಲ್ಪಿಸಿದನು**" (ಇಬ್ರಿಯ ೧೧:೪೦). ಇದು ಸ್ನಾನಿಕನಾದ ಯೋಹಾನನ ವಿಷಯವಾಗಿ ನಮ್ಮ ಕರ್ತನು ಹೇಳಿದ ಮಾತುಗಳಿಗೆ ಹೊಂದುತ್ತದೆ – "**ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ, ಆದರೂ ಪರಲೋಕದಲ್ಲಿರುವ ಚಿಕ್ಕವನು**( ಅಂದರೆ ಪಾಪಕ್ಕಾಗಿ ಯಜ್ಞವು ಮುಗಿದ ಮೇಲೆ ನಿತ್ಯಜೀವದ ನಿರ್ಣಯ ಹೊಂದಿದ ನೂತನ ಸೃಷ್ಟಿಗಳು ಮತ್ತು ಶ್ರಮೆಹೊಂದಿದ ಮೇಲೆ ಕ್ರಿಸ್ತನೊಂದಿಗೆ ರಾಜ್ಯಭಾರ ನಡೆಸಲು ಕರೆಯಲ್ಪಟ್ಟವರು ) **ಅವನಿಗಿಂತಲೂ ದೊಡ್ಡವನೆಂದು ನಾನು ನಿಮಗೆ ಹೇಳುತ್ತೇನೆ** "(ಮತ್ತಾಯ ೧೧:೧೧).

ಧರ್ಮಯುಗದಲ್ಲಿ ಕ್ರಿಸ್ತನು ಮತ್ತು ಮಹಿಮೆಯಲ್ಲಿರುವ ಸಭೆಯು ಈ ಲೋಕದಲ್ಲಿ ಸಮರ್ಥನಾ (ಪುನಃವಶದ) ಕಾರ್ಯವನ್ನು ಮಾಡುವರೆಂಬ ಸತ್ಯವನ್ನು ನಾವೀಗಾಗಲೇ ಗಮನಿಸಿದ್ದೇವೆ. ಇದು ವಿಶ್ವಾಸದ ಮೂಲಕವಾದ ಸಮರ್ಥನೆ (ನೀತಿ ನಿರ್ಣಯವೆಂಬ ಎಣಿಕೆ) ಆಗಿರದೆ ನಿಜವಾದ ಸಮರ್ಥನೆಯಾಗಿದೆ – ಕ್ರೀಯೆಯ ಮೂಲಕವಾದ ಸಮರ್ಥನೆ ಎಂದರೆ ಅದು ವಿಶ್ವಾಸದೊಂದಿಗೆ ಮಿಶ್ರಿತವಾದಾಗ್ಯೂ ಅಂತಿಮ ಪರೀಕ್ಷೆಯು ಅವರವರ ಕೃತ್ಯಗಳ ಪ್ರಕಾರವೇ. (ಪ್ರಕಟನೆ ೨೦:೧೨ ನೋಡಿರಿ). ಈಗ ನೂತನ ಸೃಷ್ಟಿಯು ವಿಶ್ವಾಸದ ಮೂಲಕ ನಡೆಯಬೇಕೇ ಹೊರತು ದೃಷ್ಟಿಯ ಮೂಲಕವಲ್ಲ ; ಮತ್ತು ಅವರ ವಿಶ್ವಾಸವು ಪರೀಕ್ಷೆಗೊಳಪಡುತ್ತದೆ ಮತ್ತು ಅದೃಶ್ಯನಾದವನನ್ನು ಕಂಡಂತೆ ಸಹಿಸಿಕೊಳ್ಳುವಂತಾಗಬೇಕು. ಹಾಗೆ ಬಾಹ್ಯ ಸಾಕ್ಷಿಯಂತೆ ನಂಬುವುದು ಸ್ವಾಭಾವಿಕ ಮನಸ್ಸಿಗೆ ಅಸಂಭವ ಮತ್ತು ಅನುಚಿತವಾದುದು. ಈ ವಿಶ್ವಾಸವು ನಮ್ಮ ಅಸಮರ್ಪಕ ಕಾರ್ಯಗಳಿಂದ ಬೆಂಬಲಿತವಾಗಿದ್ದರೂ ನಮ್ಮ ಪರವಾಗಿ ಕರ್ತನ ಸಮರ್ಪಕ ಕಾರ್ಯಗಳಿಂದಲೂ ಬೆಂಬಲಿತವಾಗಿದ್ದು ದೇವರಿಂದ ಅಂಗೀಕರಿಸಲ್ಪಡುತ್ತದೆ. ಅಂಥಾಃ ಅಸರ್ಮಪಕ ಪರಿಸ್ಥಿತಿಯಲ್ಲಿ ನಾವು ನಮ್ಮ ಯೋಗ್ಯತಾನುಸಾರ ಹೆಣಗಿ ದೇವರ ಮೆಚ್ಚುಗೆ ಪಡೆದಲ್ಲಿ ಮತ್ತು ಆ ರೀತಿಯಲ್ಲಿ ಕ್ರಿಸ್ತನ ಆತ್ಮನೊಂದಿಗೆ ಭಾಗಿಯಾಗುವುದಾದರೆ ನಾವು ನೀತಿಗಾಗಿ ಶ್ರಮೆಪಡುತ್ತೇವೆ ಮತ್ತು ಅನುಕೂಲಕರ ಪರಿಸ್ಥಿತಿಯಲ್ಲಿ ನಾವು ಸಿದ್ಧಾಂತಗಳಿಗೆ ನಿಜವಾಗಿಯೂ ಕಡಿಮೆ ನಿಷ್ಟೆಯುಳ್ಳವರಾಗುವುದಿಲ್ಲ. ಯಾವಾಗ ಕರ್ತನ ಜ್ಞಾನವು ಇಡೀ ಪ್ರಪಂಚವನ್ನು ತುಂಬಿ ಕೊಳ್ಳುತ್ತದೆಯೋ ಮತ್ತು ಕ್ರಿಸ್ತನ ವಿಶ್ವಾಸಿಗಳ ಸುತ್ತಲೂ ಈಗ ಕವಿದಿರುವ ಅಂಧಕಾರ ಮತ್ತು ಇಬ್ಬನಿಯು ಮಾಯವಾಗುತ್ತದೆ ಮತ್ತು ನೀತಿಯೆಂಬ ಮಹಾ ಸೂರ್ಯನು ಇಡೀ ಪ್ರಪಂಚವನ್ನು ನಿರಪೇಕ್ಷವಾದ ದೈವ ಜ್ಞಾನ ದಿಂದೊಡಗೂಡಿದ ಸತ್ಯದಿಂದ ತುಂಬಿಸುತ್ತದೆ. ಅದರಲ್ಲಿ ಆತನ ಗುಣಲಕ್ಷಣಗಳು, ಆತನ ಯೋಜನೆಗಳು ಇದ್ದು ಮಾನವನು ದೇವರ ಕೃಪೆ ಮತ್ತು ಪ್ರೀತಿಯ ಹಾಗೂ ಕ್ರಿಸ್ತನ ಮೂಲಕವಾದ ಸಂಧಾನದ ನಿದರ್ಶನಗಳನ್ನು ಆತನ ಸಾಮರಸ್ಯವನ್ನು ಬಯಸುವವರ ಕ್ರಮೇಣವಾದ ಉದ್ಧಾರದಲ್ಲಿ ಕಂಡುಕೊಂಡಾಗ – ಮಾನಸಿಕ, ದೈಹಿಕ ಮತ್ತು ನೈತಿಕ ಪ್ರತಿದಾನವು ಪ್ರಕಟಗೊಂಡಾಗ ವಿಶ್ವಾಸವು ಗಣನೀಯವಾಗಿ ಈಗಿನ ಅಗತ್ಯವಾದ ಅಂಧವಿಶ್ವಾಸಕ್ಕಿಂಥಾಃ ಭಿನ್ನವಾಗಿರುತ್ತದೆ. ಅವರು ಆಗ ಗಾಜಿನ ಮೂಲಕ ಅಸ್ಪಷ್ಟವಾಗಿ ಅಥವಾ ಮಂದವಾಗಿ ಕಾಣುವುದಿಲ್ಲ ; ವಿಶ್ವಾಸದ ಕಣ್ಣುಗಳು ದೇವರನ್ನು ಪ್ರೀತಿಸುವವರಿಗೆ ಕಾದಿರಸಲಾದ ಮಹಿಮೆಯ ಸಂಗತಿಗಳನ್ನು ನೋಡುವುದರಲ್ಲಿ ದಣಿಯುವುದಿಲ್ಲ. ಯಾಕೆಂದರೆ ಆ ಮಹಿಮೆಯ ಸಂಗತಿಗಳು ಹೆಚ್ಚು ಕಡಿಮೆ ಸ್ಪಷ್ಟವಾಗಿ ಆಗ ಮಾನವರಿಗೆ ಪ್ರಕಟವಾಗುತ್ತವೆ. ಮಾನವರು ಆಗ ದೇವರನ್ನು ನಂಬಿ ಆತನಲ್ಲಿ ವಿಶ್ವಾಸವಿರಿಸುವ ವೇಳೆಗೆ ಆ ರೀತಿಯಲ್ಲಿ ಅವರ ಇಂದ್ರಿಯ ಜ್ಞಾನದ ನಿದರ್ಶನಗಳ ಮೂಲಕ ನಂಬುವವರಿಗೂ ಮತ್ತು ನೂತನ ಸೃಷ್ಟಿಯು ನಾವು ನೋಡಲಾಗದ ಸಂಗತಿಗಳ ಬಗ್ಗೆ ಕಾರ್ಯಗತಗೊಳಿಸಬೇಕಾದ

ನಂಬಿಕೆಗೂ ಅಗಾಧವಾದ ವತ್ಯಾಸವಿದೆ. ದೇವರು ಈಗ ತನ್ನ ಜನರಲ್ಲಿ ಬಯಸುವ ವಿಶ್ವಾಸವು ಆತನ ದೃಷ್ಟಿಯಲ್ಲಿ ಅಮೂಲ್ಯವಾದುದು ಮತ್ತು ಇದು ಒಂದು ಸಣ್ಣ ವಿಲಕ್ಷಣ ವರ್ಗಕ್ಕೆ ಗುರುತಿಸಲ್ಪಟ್ಟಿದೆ ; ಆದುದರಿಂದ ಆತನ ಅಂಥಾಃ ಸಂಭಾವನೆ ಅಥವಾ ಬಹುಮಾನವನ್ನು ಅದರ ಮೇಲೆ ಇಟ್ಟಿದ್ದಾನೆ. ಧರ್ಮಯುಗವು ಪೂರ್ಣವಾಗಿ ಪರಿಚಯಿಸಲ್ಪಡುವಾಗ ಸಾಮಾನ್ಯವಾದ ಸತ್ಯ ಸಂಗತಿಗಳ ಬಗ್ಗೆ ಸಂಶಯಪಡಲು ಸಾಧ್ಯವೇ ಇಲ್ಲ, ಆದುದರಿಂದ ಸಂಶಯ ಪಡದವರಿಗೆ ವಿಶೇಷ ಬಹುಮಾನ ನೀಡುವುದು ಕ್ರಮಬದ್ಧವೆನಿಸದು.

ಆದರೆ, ದೇವರ ಜ್ಞಾನವು ಇಡೀ ಲೋಕವನ್ನು ವ್ಯಾಪಿಸುವುದಾದರೂ, ನೆರೆಯವರಿಗೆ "ನಿಮ್ಮ ಕರ್ತನನ್ನು ತಿಳಿದುಕೊಳ್ಳಿರಿ! ಪರಂತು, ಮಾನವರ ಮೇಲೆ ಬೇರೆ ರೀತಿಯ ಪರೀಕ್ಷೆಯು ಒದಗಿ ಬರುವುದು, ಅದುವಿಶ್ವಾಸದ್ದಲ್ಲ ಆದರೆ ಕಾರ್ಯದ್ದು–ವಿಧೇಯತೆಯದು ; ಈ ಸಲುವಾಗಿ " **ಆ ಪ್ರವಾದಿಯ ಮಾತನ್ನು ಕೇಳದಿರುವ ಪ್ರತಿಯೊಬ್ಬನೂ ನಮ್ಮ ಜನರಿಂದ ಸಂಪೂರ್ಣವಾಗಿ ನಾಶವಾಗುವನು**"(ಅಪೋ ೩:೨೩) ಎಂದು ಹೇಳಬೇಕಾದ ಅವಶ್ಯಕತೆ ಇಲ್ಲ. ಪ್ರಸ್ತುತವಾದ ಅಂಧಕಾರದ ಕಾಲದಲ್ಲಿ ದೇವರ ಯೋಜನೆಯು ಪೂರ್ಣಗೊಳ್ಳುವ ಸಂಬಂಧದಲ್ಲಿ , ಪಾಪವು ತುಂಬಿರುವಾಗ ಮತ್ತು ಸೈತಾನನು ಇಹಲೋಕದ ಅರಸನಾಗಿರುವಾಗ ದೇವರು ವಿಶ್ವಾಸದ ಮೇಲೆ ಸಂಭಾವನೆಯನ್ನಿಡುತ್ತಾ – **"ನೀವು ನಂಬಿದಂತೆ ನಿಮಗೆ ಆಗಲಿ"** (ಮತ್ತಾಯ ೯:೨೯) ಮತ್ತು ಪುನಃ **"ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ"** (೧ ಯೋಹಾನ ೫:೪) ಎಂದು ಹೇಳುವನು. ಆದರೆ ಲೋಕದ ಶೋಧನೆಗಳ ಅಥವಾ ಧರ್ಮಯುಗದಲ್ಲಿ ಅಥವಾ ನ್ಯಾಯತೀರ್ವಿಕೆಯ ದಿನದಲ್ಲಿನ ತೀರ್ಪಿನ ಸಂಬಂಧ ಎಲ್ಲರೂ ವಿಶ್ವಾಸದ ಬೆಂಬಲ ಪಡೆದ ಅವರರವರ ಕಾರ್ಯಗಳಿಗೆ ತಕ್ಕಂತೆ ತೀರ್ಪುಹೊಂದುವರು ಎಂದು ನಾವು ಓದುತ್ತೇವೆ ; **"ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು"** (ಪ್ರಕಟನೆ ೨೦:೧೨).

ನೀತಿನಿರ್ಣಯವು ನಾವೀಗಾಗಲೇ ನೋಡಿದಂತೆ ಪಾಪಿಯನ್ನು ಆತನ ಸೃಷ್ಟಿಕರ್ತನಿಗೆ ಅನುಗುಣವಾಗಿ ಆತನ ಬಳಿಗೆ ತರುವುದಾಗಿದೆ. ಪಾಪಿಯು ಕ್ರಿಸ್ತನ ಮುಂದೆ ನೀತಿನಿರ್ಣಯ ಹೊಂದಿಕೊಳ್ಳುವ ಅಗತ್ಯತೆಯನ್ನು ನಾವೆಲ್ಲೂ ಓದುವುದಿಲ್ಲ. ಆದರೆ ಕರ್ತನ ಒಳ್ಳೆಯತನದ ಮೂಲಕ ಆತನು ತಂದೆಯ ಮುಂದೆ ನೀತಿವಂತನೆಂದು ನಿರ್ಣಯಿಸಲ್ಪಡಬೇಕು. ಇದು ನಮಗೆ ಈ ಸಮಗ್ರ ವಿಷಯವನ್ನು ಪರೀಕ್ಷಿಸಿ ಇದು ಹೇಗೆಂದು ಅರಿತುಕೊಳ್ಳಲು ಸಹಾಯಮಾಡ ಬಹುದು. ಯಾಕೆಂದರೆ, ಸೃಷ್ಟಿಕರ್ತನು ಖುದ್ದಾಗಿ ತನ್ನ ಸ್ವಂತ ನಿಯಮಗಳ ಪ್ರತಿನಿಧಿಯಾಗಿ ನಿಲ್ಲುತ್ತಾನೆ, ಯಾಕೆಂದರೆ ಆತನ ತಂದೆಯಾದ ಆದಾಮನನ್ನು ಮತ್ತು ಆತನ ಜನಾಂಗವನ್ನು ಆದಿಯಲ್ಲಿ ಆ ನಿಯಮಗಳ ಅಧೀನದಲ್ಲಿ ಇಟ್ಟವನು ಮತ್ತು ಆತನ ಕೃಪಾಶೀರ್ವಾದಗಳನ್ನು ಮತ್ತು ಶಾಶ್ವತ ಜೀವನವನ್ನು  ಅವರು ಸಂತೋಷವಾಗಿ ಅನುಭವಿಸುವುದು ಅವರು ಅದಕ್ಕೆ ವಿಧೇಯರಾಗುವುದರ ಮೇಲೆ ಅವಲಂಬಿಸಿದೆ, ಒಂದು ವೇಳೆ ಅವಿಧೇಯರಾದಲ್ಲಿ ಈ ಎಲ್ಲಾ ಸೌಕರ್ಯಗಳನ್ನು ಕಸಿದುಕೊಳ್ಳಲಾಗುವುದು. ಆ ಪರಿಸ್ಥಿತಿಯನ್ನು ಬದಿಗಿಡಲಾಗುವುದಿಲ್ಲ. ಆದುದರಿಂದ, ಮಾನವಕುಲವು ದೇವರ ಸಹವಾಸವನ್ನು ಸೇರುವ ಮೊದಲು ಮತ್ತು ನಿತ್ಯಜೀವದ ಆತನ ಆಶಿರ್ವಾದಗಳನ್ನು ಪಡಕೊಳ್ಳುವ ಮೊದಲು ಅವರು ಯಾವುದೇ ರೀತಿಯಲ್ಲಿಯಾದರೂ ಅವರ ಸೃಷ್ಟಿಕರ್ತನಿಗೆ ಪೂರ್ಣ ಅನುಗುಣವಾಗಿರುವಂತೆ ಹಿಂತಿರುಗಬೇಕು. ಈ ಕಾರಣ, ಆ ಸಮರ್ಪಕತೆಗೆ ಹಿಂದಿರುಗುವಾಗ ದೇವರ ತಪಾಸಣೆಯ ಪೂರ್ಣ ಪ್ರಕಾಶಕ್ಕೆ ಮತ್ತು ವಿಧೇಯತೆಯ ಪೂರ್ಣ ಪರೀಕ್ಷೆಯನ್ನು ಸ್ಥೈರಿಸಬೇಕಾಗುತ್ತದೆ. ಹೀಗಾಗಿ ಹೇಳಬೇಕಾದಲ್ಲಿ ಈ ಪ್ರಪಂಚದವರು ದೇವರ ನಿಲುಕುವಿಕೆಗೆ ಸಿಗದೇ ಹೋಗಿದ್ದಾರೆ – ಆತನು ಉದ್ದೇಶಪೂರ್ವಕವಾಗಿ ಅವರುಗಳು ನ್ಯಾಯಕ್ಕೆ ನಿಲುಕದಂತೆ ತನ್ನ ನಿಯಮಗಳನ್ನು ಸಜ್ಜುಗೊಳಿಸಿದ್ದಾನೆ ಮತ್ತು ಆತನ ಪ್ರಸ್ತುತ ಯೋಜನೆಯಾದ ವಿಮೋಚನಾ ಕಾರ್ಯ ಮತ್ತು ಪುನಃವಶ ಅಥವಾ ನೀತಿನಿರ್ಣಯ ಅಥವಾ ಇಚ್ಛೆಯುಳ್ಳವರನ್ನು ಮತ್ತು ವಿಧೇಯರನ್ನು ಸಮರ್ಪಕತೆಗೆ ಹಿಂದಕ್ಕೆ ತರುವುದು ಇವುಗಳು ವಿಮೋಚಕನಾದ ಒರ್ವ ಮಧ್ಯಸ್ತನ ಮೂಲಕ ಅವಶ್ಯಕವಾಗುವಂತೆ ಮಾಡಿದ್ದಾನೆ.

ಈ ಮಧ್ಯಸ್ತನು ಸಮರ್ಪಕನಾಗಿದ್ದರೂ ಯಾವುದೇ ನಿಯಮವನ್ನು ಪಾಲಿಸಬೇಕಾದ್ದಿಲ್ಲ. ಆದಾಮ ಮತ್ತು ಆತನ ಸಂತತಿಯವರ ಮೇಲೆ ಅವರನ್ನು ಮಾನ್ಯಮಾಡಲು ಮತ್ತು ಅವರ ಅಸಮರ್ಪಕತೆಗಳಿಗೆ ಕರುಣೆ ತೋರಿಸಲು ತಡೆಯುಂಟು ಮಾಡುವ ಯಾವುದೇ ದಂಡನೆಯನ್ನು ಈತನು ವಿಧಿಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಈತನು ಇಡೀ ಲೋಕವನ್ನು ಅದರ ಪಾಪಮಯ ಮತ್ತು ಅಸಮರ್ಪಕ ಸ್ಥಿತಿಯಲ್ಲಿರುವಂತೆಯೇ, ಅದರ ಹಾಳು ಪರಿಸ್ಥಿತಿ ಅರಿತೇ ಕೊಂಡುಕೊಂಡಿದ್ದಾನೆ. ಮಾನವ ಜಾತಿಯನ್ನು ಆತನು ಕಂಡುಕೊಂಡ ಸ್ಥಿತಿಯಲ್ಲಿಯೇ ಸ್ವೀಕರಿಸುತ್ತಾನೆ ಮತ್ತು ಧರ್ಮಯುಗದಲ್ಲಿ ಆತನು ಪ್ರಪಂಚದ ಪ್ರತಿಯೊರ್ವ ವ್ಯಕ್ತಿಯೊಂದಿಗೆ ಆತನ ಸ್ವಂತ ವಿಶಿಷ್ಟ ಪರಿಸ್ಥಿಚುಲ್ಲೇ ವ್ಯವಹರಿಸುತ್ತಾನೆ. ಬಲಹೀನರಿಗೆ ಕರುಣೆ ತೋರಿಸುತ್ತಾನೆ, ಬಲಿಷ ರಿಂದ ಹೆಚ್ಚಾದುದನ್ನು ಅಪೇಕ್ಷಿಸುತ್ತಾನೆ. ಈ ರೀತಿಯಲ್ಲಿ ಆತನು ತನ್ನನ್ನು ಮತ್ತು ತನ್ನ ರಾಜ್ಯದ ಕಾನೂನುಗಳನ್ನು ವಿಲಕ್ಷ್ಣವುಳ್ಳವರು, ಅಪರಾಧಿಗಳು, ಬಲಹೀನರು ಮುಂತಾದವರುಗಳಿಗೆ ಅನುಗುಣವಾಗಿ ಮಾರ್ಪಡಿಸಿ ಕೊಳ್ಳುತ್ತಾನೆ. ಯಾಕೆಂದರೆ **"ತಂದೆಯು ಯಾರಿಗೂ ತೀರ್ಪುಮಾಡುವುದೂ ಇಲ್ಲ ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ"** (ಯೋಹಾನ ೫:೨೨). ಮಗನು ಮಾನವಕುಲಕ್ಕೆ ಅವರು ಧರ್ಮಯುಗದ ಅಂತ್ಯದಲ್ಲಿ ನ್ಯಾಯವಂತರೂ ದೇವರ ದೃಷ್ಟಿಯಲ್ಲಿ ಅಂಗೀಕಾರಾರ್ಹರೂ ಆಗುವಂತೆ ಅಂತ್ಯತಃ ಸಾಧಿಸಬೇಕಾಗ ದೈವಿಕ ನಿಯಮಗಳನ್ನು ವಿಶದ ಗೊಳಿಸುತ್ತಾನೆ ; ಆದರೆ ಆತನು ಆ ಮಟ್ಟವನ್ನು ಆಗ್ರಹಪಡಿಸುವುದಿಲ್ಲ ಮತ್ತು ಯಾರಾದರೂ ಆ ಮಟ್ಟವನ್ನು ತಲುಪದೇ ಹೋದಲ್ಲಿ ಅವರು ಅದನ್ನು ಉಲ್ಲಂಘಿಸುವವರು ಮತ್ತು ಅವರ ಇಚ್ಛಾಪೂರ್ವಕವಲ್ಲ ಮತ್ತು ಉದ್ಧೇಶರಹಿತವಾದ ಪ್ರತಿಯೊಂದು ಅಪರಾಧವನ್ನು ಮರೆಮಾಡಲು ಕೃಪೆಯ ಅಗತ್ಯವಿದೆಯೆಂದು ಪಟ್ಟುಹಿಡಿಯುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ದೇವರ ಈ ಎಲ್ಲಾ ಸಮರ್ಪಕವಾದ ಮತ್ತು ಬದಲಾಗದ ನಿಯಮಗಳ ಉಲ್ಲಂಘನೆಯ ಪ್ರಾಯಶ್ಚಿತ್ತವು ಆತನ ರಾಜ್ಯಭಾರವನ್ನು ವಹಿಸುವಷ್ಟರಲ್ಲಿ ಸಮಾಪ್ತಿಗೊಳ್ಳುತ್ತವೆ.

ಕ್ರಿಸ್ತನು ಈಗಾಗಲೇ ತನ್ನನ್ನು ಅರ್ಪಿಸಿಕೊಂಡದ್ದರಲ್ಲಿ ಬೆಲೆ ತೆತ್ತಾಗಿದೆ. ಇದರ ಮೌಲ್ಯದ ಭಾಗವನ್ನು ಆತನು ಅಗಲೇ ವಿಶ್ವಾಸದ ಮನೆಯವರಿಗೆ ಅನ್ವಯಿಸಿದ್ದಾನೆ, ಮತ್ತು ಈ ಸುವಾರ್ತಾಯುಗದ ಅಂತ್ಯದಲ್ಲಿ ಆತನು ಪಾಪ ಬಲಿಯ ಮೌಲ್ಯದ ಶೇಷಭಾಗವನ್ನು ಎಲ್ಲಾ ಜನರ ಪರವಾಗಿ, ಮಾನವಕುಲದ ಇಡೀ ಪ್ರಪಂಚದವರ ಪರವಾಗಿ ಅನ್ವಯಿಸುತ್ತಾನೆ. ದೇವರ ಪ್ರಯಶ್ಚಿತ್ತ ದಿನದ ಮೂಲಕ ಅದು ಅಂಗೀಕರಿಸುವ ನಮೂನೆಯನ್ನು ತೋರಿಸಿಕೊಟ್ಟಿದ್ದಾನೆ. ಈ ಅಂಗೀಕಾರದ ಫಲವಾಗಿ ಕ್ರಿಸ್ತನು ಮತ್ತು ಆತನ ಸಭೆಯು ಈ ಲೋಕದ ರಾಜ್ಯಭಾರವನ್ನು ವಹಿಸಿಕೊಳ್ಳುವುದು. ಇದನ್ನು 'ಸೈನ್ಯಾಡಳಿತ' (martial law) ಅಥವಾ ನಿರಂಕುಶ ಪ್ರಭುತ್ವ ಎಂದು ಕರೆಯಬಹುದು. ಇದು ಪ್ರಕರಣದ ತುರ್ತು ಸ್ಥಿತಿಯ ಸಲುವಾಗಿ ಸಾಮನ್ಯ ಕಾನೂನುಗಳನ್ನು, ನಿರ್ಧಿಷ್ಟ ಮಾನದಂಡವನ್ನು ಬದಿಗಿರಿಸುತ್ತದೆ ಮತ್ತು ಕಾನೂನನ್ನು ತನಗೆ ಸೂಕ್ತವಾದ ರೀತಿಯಲ್ಲಿ ಜಾರಿಗೊಳಿಸುತ್ತದೆ. ಇದು ಸಮರ್ಪಕವಾದವರಿಗೆ ಮತ್ತು ಸರಿಯಾದ ಸ್ಥಿತಿಯಲ್ಲಿದ್ದವರಿಗೆ ಅಲ್ಲ (ಯೆಹೋವನ ರಾಜ್ಯದ ಕಾನೂನುಗಳಿಗೆ ತಕ್ಕಂತೆ), ಆದರೆ ಇದು ಪಾಪದ ಫಲವಾಗಿ ಈ ಲೋಕದಲ್ಲಿ ಉತ್ಪತ್ತಿಯಾಗುವ ದಂಗೆಯ ಅಥವಾ ಅರಾಜಕತೆಯ ಪರಿಸ್ಥಿತಿಗೆ ಸೂಕ್ತವೆನಿಸುತ್ತದೆ . ರಾಜನು ಕೇವಲ ರಾಜನಾಗಿ ಆಳದೇ ನ್ಯಾಯಧಿಪತಿಯಾಗಿಯೂ, ಮಹಾ ಯಾಜಕನಾಗಿಯೂ ಆಳುವ ಈ ತುರ್ತು ಪರಿಸ್ಥಿತಿಯ ಸಾಮ್ರಾಜ್ಯವು ನಾವೀಗಷ್ಟೇ ಲೋಕವನ್ನು ಸಮರ್ಥಿಸುವಲ್ಲಿ ವಿಶ್ವಾಸ ಬೆಂಬಲಿತವಾದ ಕ್ರಿಯೆಯು ಅಂತಿಮ ಪರೀಕ್ಷೆಯ ಮಾನವೆಂದು ಎಣಿಕೆಮಾಡದೆ ನಿಜವಾಗಿ ಕಂಡುಕೊಂಡದ್ದರಲ್ಲಿ ವಿನ್ಯಾಸಗೊಂಡಿದೆ. ಈ ನಿಜವಾದ ಸಮರ್ಥನೆಯು ಧರ್ಮಯುಗದ ರಾಜ್ಯಭಾರದ ಆರಂಭದಲ್ಲಿ ಜಾರಿಗೆ ಬಾರದೆ ಅಧಿಕಾರದ ಫಲವಾಗಿ ಅದರ ಅಂತ್ಯದಲ್ಲಿ ಜಾರಿಗೆ ಬರುತ್ತದೆ.

ಪ್ರಸ್ತುತ ಕಾಲದ 'ನಂಬಿಕೆಯ ಮೂಲಕ ನೀತಿನಿರ್ಣಯ'ವೆಂಬುದು ಅಬ್ರಹಾಮನ ಒಡಂಬಡಿಕೆಯಲ್ಲಿ ವಾಗ್ದಾನದ ಸಂತತಿಯವರಿಗಾಗಿ ಅವರು ಕ್ರಿಸ್ತನೊಡನೆ **ಜೊತೆ-ಸಮರ್ಪಕರೂ** ಮತ್ತು ಈ ಕಾರಣ ಜೊತೆ-ವಾರಸುದಾರರೂ ಆಗಿ ಭಾಗವಹಿಸುವಂತೆ ದೇವರು ತನ್ನ ವಿಶೇಷ ಸೇವೆಗೆ ಕರೆದವರಿಗಾಗಿ ರೂಪಿಸಲಾಗಿದೆ. ಇವರೊಂದಿಗೆ ಸಹಾ ದೇವರು

ನೇರವಾದ ಸಂಪರ್ಕವನ್ನು ಇಟ್ಟುಕೊಂಡಿಲ್ಲ. ಆದರೆ, ಹೇಳಬೇಕಾದರೆ, ಅವರು ನಂಬಿಕೆಯ ಮೂಲಕ ಮತ್ತು ವಿಮೋಚಕನ ಅರ್ಹತೆಯ ಮೇರೆಗೆ ನೀತಿವಂತರೆಂದು ನಿರ್ಣಯ ಹೊಂದಿದ ಮೇಲೆಯೂ ಅವರು ಅಯೋಗ್ಯರೆಂಬಂತೆ ನಡೆಸಿಕೊಳ್ಳಲಾಗುವುದು ಮತ್ತು ಅವರುಗಳು ಪ್ರೀತಿಮಯನಾದ ಕ್ರಿಸ್ತನಲ್ಲಿ ಅಂಗೀಕರಿಸಲ್ಪಡುತ್ತಾರೆ. ಅವರ ಎಲ್ಲಾ ಒಡಂಬಡಿಕೆಯ ಸಮರ್ಪಣಾ ಒಪ್ಪಂದಗಳು ಆತನಿಂದ ಧೃಢಪಡದೆ ನ್ಯಾಯಸಮ್ಮತವೆನಿಕೊಳ್ಳುವುದಿಲ್ಲ.

ಈ ಸುವಾರ್ತಾ ಯುಗದ ಏಕೈಕ ಉದ್ಧೇಶವು ಮಾನವ ಕುಲದ ಸಣ್ಣ ಹಿಂಡನ್ನು ನೂತನ ಸೃಷ್ಟಿಯನ್ನಾಗಿ ರಚಿಸಲು ಕರೆಯುವುದು ಎಂಬುದು ಎಷ್ಟೋ ಸ್ಪಷ್ಟವಾಗಿದೆ. ಇದು ವಿಶ್ವಾಸಿಗಳನ್ನು ನಂಬಿಕೆಯ ಮೂಲಕ ನಿತ್ಯಜೀವಕ್ಕೆ ಸಮರ್ಥಿಸುವ ಏರ್ಪಾಟಾಗಿದೆ. ಅವರಿಗೆ ದೇವರೊಂದಿಗೆ ನೆಲೆಯೊಂದನ್ನು ಒದಗಿಸಿಕೊಟ್ಟು ಅವರು ನೂತನ ಸೃಷ್ಟಿಗೆ ಅವಶ್ಯವಾದ ಒಡಂಬಡಿಕೆಯ ಹಂಗಿಗೆ ಒಳಗಾಗುವಂತೆ ಮಾಡುವುದು. ಈಗಾಗಲೇ ಗಮನಿಸಿರುವಂತೆ, ನೂತನ ಸೃಷ್ಟಿಗೆ ಅವರನ್ನು ಸ್ವೀಕರಿಸುವ ಕರಾರು ಸ್ವಾರ್ಥ–ತ್ಯಾಗವಾಗಿದೆ ; ದೇವರು ನ್ಯೂನತೆಯುಳ್ಳ ಯಾವುದನ್ನೂ ಬಲಿಯನ್ನಾಗಿ ಸ್ವೀಕರಿಸಲು ಇಷ್ಟಪಡುವುದಿಲ್ಲವಾದುದರಿಂದ , ಕೊರತೆ ಮತ್ತು ನಿಂದೆಗೆ ಗುರಿಯಾಗಿರುವ ಜನಾಂಗದವರಾದ ನಾವು ಎಲ್ಲಾ ಪಾಪದಿಂದ ನೀತಿನಿರ್ಣಯ ಹೊಂದಿದ್ದೇವೆಂದು ಮೊದಲಾಗಿ ನಿರ್ಣಯ ಹೊಂದುವವರೆಗೆ ಅಂಗೀಕಾರ ಹೊಂದಲಾರೆವು ; ಈ ರೀತಿ ಅಪೋಸ್ತಲನು ಹೇಳುವಂತೆ **ನಾವು ನಮ್ಮ ನಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಕೆಯಾಗಿಯೂ ಇರುವ ಪವಿತ್ರವಾದ ಸಜೀವ ಯಜ್ಞವನ್ನಾಗಿ ಸಮರ್ಪಿಸಬೇಕು, ಇದೇ ವಿವೇಕಪೂರ್ವಕದ ಆರಾಧನೆಯು.** (ರೋಮ ೧೨:೧ ನೋಡಿರಿ).

ಇದರ ದೃಷ್ಟಿಯಿಂದ, ದೇವರೆಡೆಗೆ ವಿಶ್ವಾಸದ ದೃಷ್ಟಿಕೋನದಿಂದ ಮತ್ತು ಅದರ ಪರಿಣಾಮವಾದ ನೀತಿನಿರ್ಣಯಕ್ಕೆ ಬಂದವರು ಮತ್ತು ದೇವರ ಮಾರ್ಗದಲ್ಲಿ ಮುಂದಿನ ಪ್ರಗತಿಯೆಂದರೆ ಸ್ವಾರ್ಥ ತ್ಯಾಗ, ಸ್ವಯಂ–ನಿರಾಕರಣೆ ಮುಂತಾದವುಗಳು ; ಆದಾಗ್ಯೂ ಅವರುಗಳು ಹಿಂದಕ್ಕೆ ಉಳಿದು ಪೂರ್ಣ ಸಮರ್ಪಣೆಯೆಂಬ ನೇರ ದ್ವಾರವನ್ನು ಪ್ರವೇಶಿಸಿ, ಇಕ್ಕಟ್ಟಾದ ಮಾರ್ಗದಲ್ಲಿ ನಡೆಯಲು ಮರಣದ ಪರ್ಯಂತ ನಿರಾಕರಿಸಲ್ಪಡುತ್ತಾರೆಂದು ನಾವು ಹೇಳಲಾದೀತೆ? ದೇವರು ಅವರೊಡನೆ ಕೋಪಗೊಂಡಿದ್ದಾನೆಂದು ಹೇಳಬಹುದೋ? ಇಲ್ಲ: ನಾವು ಊಹಿಸಬೇಕಾದುದೇನೆಂದರೆ, ನೀತಿಮಾರ್ಗದಲ್ಲಿ ಪ್ರಗಿತಿಹೊಂದುತ್ತಿರುವಾಗ ಕೆಲವು ಅಂಶದ ಮಟ್ಟಿಗೆ ಅವರು ದೇವರನ್ನು ಸಂಪ್ರೀತಿಗೊಳಿಸಿದ್ದಾರೆ. ಅವರುಗಳು ಸಹಾ ಆಶಿರ್ವಾದವನ್ನು ಪಡಕೊಳ್ಳುತ್ತಾರೆಂದು ಹೇಳುತ್ತಾ ಅಪೋಸ್ತಲನು " ನಂಬಿಕೆಯ ಮೂಲಕ ನೀತಿನಿರ್ಣಯ ಹೊಂದಿದ ನಾವು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಸಮಾಧಾನ ಹೊಂದಿದ್ದೇವೆ" ಎಂದು ಬರೆಯುತ್ತಾನೆ. ಈ ಸಮಾಧಾನವು ಭವಿಷ್ಯದಲ್ಲಿ ವಿಶ್ವಾಸಿಯ ಪಾಪವನ್ನು ತೊಡೆದು ಹಾಕುವ ದೈವಿಕ ಯೋಜನೆಯ ವಿವೇಚನೆಯಾಗಿದೆ ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ (ಅ.ಕೃ. ೩:೧೯ ನೋಡಿರಿ). ಇದು ನೈತಿಕತೆಯ ಸಿದ್ಧಾಂತಗಳೊಂದಿಗೆ ಉತ್ತಮ ಶ್ರೇಣಿಯ ಸಾಮರಸ್ಯವೂ ಆಗಿದೆ ಎಂಬ ಅಭಿಪ್ರಾಯವನ್ನೂ ನೀಡುತ್ತದೆ, ಯಾಕೆಂದರೆ ನಂಬಿಕೆಯನ್ನು ಸಮರ್ಥಿಸುಕೊಳ್ಳುವುದು ಸದಾ ಸುಧಾರಣೆ ಎನಿಸುತ್ತದೆ. ಈವರೆಗೆ ಬಂದವರೆಲ್ಲರ ಬಗ್ಗೆ ನಾವು ಹರ್ಷಿಸುತ್ತೇವೆ ; ದೇವರು ಕುರುಡಾಗಿರಿಸಿದ್ದು ಈಗ ಕ್ರಿಸ್ತನಲ್ಲಿ ದೇವರ ಕೃಪೆಯನ್ನು ನೋಡಲಾಗದ ಮತ್ತು ಅದನ್ನು ಮೆಚ್ಚಿಕೊಳ್ಳಲಾಗ ಜನಸಮೂಹದಲ್ಲಿ ಇವರುಗಳು ಈ ಸೌಕರ್ಯಗಳನ್ನು ಹೊಂದಿರುವುದು ನಮಗೆ ಸಂತೋಷ. ಇವರುಗಳು ದೇವರ ಸಂಪೂರ್ಣ ವಿಧೇಯತೆಗೆ ಹೋಗಿ ಆತನ ಕೃಪೆಯಲ್ಲಿ ಸದಾ ನೆಲೆಗೊಳ್ಳುವಂತೆ ನಾವು ಒತ್ತಾಯಿಸುತ್ತೇವೆ.

. . . . . . . . . . .

## ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂದಿಕೊಳ್ಳದಿರಿ

ನಾವು ಅವರೊಂದಿಗೆ ಎಷ್ಟೇ ಹೆಚ್ಚಾಗಿ ಸಂತೋಷಿಸಿದರೂ, ಅಂಥಾಃ ವಿಶ್ವಾಸಿಗಳಿಗೆ ಎಷ್ಟೇ ಸಮಾಧಾನ ಮತ್ತು ಸಂತೋಷಗಳು ಉಚಿಟಾದರೂ. ನೀತಿಯ ಮಾರ್ಗದಲ್ಲಿ ನಡೆಯಬೇಕೆಂದು ಬಯಸಿದಾಗ್ಯೂ ಸಮರ್ಪಣೆಯ ಇಕ್ಕಟ್ಟಾದ ಮಾರ್ಗವನ್ನು ತಪ್ಪಿಸಿಕೊಳ್ಳುವವರಿಗೆ ನಾವು " **ನೀವು ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳ ಬಾರದೆಂದು** " (೨ ಕೊರಿ ೬:೧) ಯಥಾರ್ಥವಾಗಿ ಸೂಚಿಸಬೇಕಾಗಿದೆ. – ಯಾಕೆಂದರೆ, ಅವರು ಸಮರ್ಥನೆಯಲ್ಲಿ ಪಡೆದ ದೇವ ಕೃಪೆಯು ಇನ್ನೂ ಹೆಚ್ಚಾದ ಸೌಕರ್ಯಗಳಿಗಳಿಗೆ ಮತ್ತು ನೂತನ ಸೃಷ್ಟಿಯ ಮಹಾಕರೆಯ ಆಶೀರ್ವಾದಗಳಿಗೆ ಮೆಟ್ಟಲಾಗುವ ಉದ್ದೇಶದಿಂದ ಕೂಡಿದೆ. ಅಂಥವರಿಗೆ ದೇವರ ಕೃಪೆಯು ವ್ಯರ್ಥವಾಗಿ ದೊರೆತಿದೆ, ಯಾಕೆಂದರೆ ಇಂಥಾಃ ಭವ್ಯವಾದ ಅವಕಾಶಗಳನ್ನು ಉಪಯೋಗಿಸಿಕೊಳ್ಳುತ್ತಿಲ್ಲ . ಇಂಥವುಗಳು ಈ ಹಿಂದೆ ಯಾರಿಗೂ ದೊರೆತ್ತದ್ದಿಲ್ಲ, ದೇವರ ವಾಕ್ಯವು ಸೂಚಿಸುವಂತೆ ಮತ್ತೊಮ್ಮೆ ಇವುಗಳನ್ನು ದಯಪಾಲಿಸುವುದಿಲ್ಲ. ಅವರುಗಳು ದೇವರ ಕೃಪೆಯನ್ನು ವ್ಯರ್ಥವಾಗಿ ಪಡೆದಿದ್ದಾರೆ, ಯಾಕೆಂದರೆ, ಮುಂಬರುವ ಕಾಲದಲ್ಲಿ ಅವರಿಗೆ ದಯಪಾಲಿಸಲಾಗುವ ಪುನಃವಶದ ಅವಕಾಶಗಳು ವಿಮೋಚನೆಗೊಂಡ ಎಲ್ಲಾ ಜನಾಂಗದವರಿಗೂ ದಯಪಾಲಿಸಲಾಗುವುದು. ಈ ಕಾಲದಲ್ಲಿ ದೇವರ ಕೃಪೆಯು ಅವರುಗಳು ಪ್ರಪಂಚದವರಿಗಿಂತ ಮುಂಚಿತವಾಗಿ ಆತನ ಒಳ್ಳೆಯತನವನ್ನು ಅರಿತುಕೊಳ್ಳುವಂತೆ ಮಾಡಿರುವುದರಲ್ಲಿ ತೋರಿಬರುತ್ತದೆ, ಮತ್ತು ಸಮರ್ಥನೆಯ ಮೂಲಕ ಅವರುಗಳು ಕರೆಯನ್ನು ಪಡೆದುಕೊಳ್ಳಲು ಮತ್ತು ದೇವರಾದುಕೊಂಡ ಕ್ರಿಸ್ತನ ರಾಜವಂಶಸ್ಥ ಯಾಜಕರಾದ ಸಭೆಯವರಿಗೆ ದೊರೆಯುವ ಬಹುಮಾನದಲ್ಲಿ ಪಾಲುದಾರರಾಗುವ ಉದ್ದೇಶದಿಂದ ಕೂಡಿದೆ.

ಹೆಸರಿಗೆ ಮಾತ್ರವೇ (ನಾಮ್‌ಕಾವಾಸ್ತೆ) ಇರುವ ಕ್ರೈಸ್ತ ಪ್ರಪಂಚವನ್ನು ನೋಡುವಲ್ಲಿ ನಿಷ್ಠಾವಂತ ವಿಶ್ವಾಸಿಗಳನ್ನೊಳಗೊಂಡ ದೊಡ್ಡ ಸಮೂಹವು ಸಹಾ ನೀತಿನಿರ್ಣಯವೆಂಬ ಈ ಪ್ರಾಥಮಿಕ ಹಂತವನ್ನು ದಾಟಿ ಮುಂದಕ್ಕೆ ಎಂದೂ ಮುಂದಕ್ಕೆ ಹೋಗಿಲ್ಲವೆಂಬುದು ಸ್ಪಷ್ಟವಾಗುತ್ತದೆ ; ಅವರುಗಳು ಕರ್ತನು ಕೃಪಾವಂತನೆಂಬುದನ್ನು ಸವಿದು ನೋಡಿದ್ದಾರೆ ಅದು ಅವರಿಗೆ ತೃಪ್ತಿಪಡಿಸಿದೆ. ಇದಕ್ಕೆ ಬದಲಾಗಿ ಅವರು ಈ ಸವಿಯಿಂದ ಅವರು ನೀತಿಯ ಬಗ್ಗೆ, ಸತ್ಯದ ಬಗ್ಗೆ, ದೇವರ ಗುಣಲಕ್ಷಣಗಳು ಮತ್ತು ಯೋಜನೆಯ ಇನ್ನೂ ಹೆಚ್ಚಾದ ತಿಳುವಳಿಕೆಯ ಬಗ್ಗೆ , ಪ್ರೀತಿ, ಕೃಪೆ ಮತ್ತು ಜ್ಞಾನದಲ್ಲಿ ಇನ್ನೂ ಹೆಚ್ಚಾಗಿ ಬೆಳಯುವ ಬಗ್ಗೆ ಇನ್ನೂ ದೊಡ್ಡದಾದ ಹಸಿವೆ ಮತ್ತು ನೀರಡಿಕೆಗೆ ಪೂರ್ಣವಾಗಿ ಎಚ್ಚೆತ್ತುಕೊಳ್ಳಬಹುದಿತ್ತು ಮತ್ತು ಅವರ ಬಗ್ಗೆ ದೇವರ ಚಿತ್ತದ ಇನ್ನೂ ಹೇಚ್ಚಾದ ಧಾರಣಶಕ್ತಿಯನ್ನು ಹೊಂದಿಕೊಳ್ಳಬಹುದಿತ್ತು. ಇದರ ಬಗ್ಗೆ ನಾವು 'ಪವಿತ್ರಪಡಿಸುವಿಕೆ' ಎಂಬ ಶಿರೋನಾಮೆಯ ಅಡಿಯಲ್ಲಿ ಪರಿಗಣಿಸುವವರಾಗಿದ್ದೇವೆ.

ನಾವು ಇದುಬ್ಬರೆಗೆ ಗ್ರಹಿಸುವಂತೆ ಸಮರ್ಥನೆಗೊಂಡ ಈ ವಿಶ್ವಾಸಿಗಳ ಸೌಕರ್ಯಗಳು, ದೇವರ ದಯಾಗುಣಗಳಿಂದ ಅವರು ಈಗ ಅನುಭವಿಸುತ್ತಿರುವ ಪರಿಹಾರವು ಮತ್ತು ಭವಿಷ್ಯದಲ್ಲಿ ಅವರೊಡನೆ ಆತನ ವ್ಯವಹಾರಗಳು ಕೇವಲ ಪ್ರಸ್ತುತ ಜೀವನಕ್ಕೆ ಮಾತ್ರವೇ ಅನ್ವಯಿಸುತ್ತವೆ. ಆದರೆ, ಈ ದೆಸೆಯಲ್ಲಿ ಅವರ ತಿಳುವಳಿಕೆಯು ಕೇವಲ ಅಲ್ಪವಾದುದು ಅದನ್ನು ಅವರು " *Oft it causes anxious thought, am I His or am I not* " ಎಂಬುದಾಗಿ ಹಾಡಬಹುದು.

ನಿಜಸಂಗತಿ ಏನೆಂದರೆ, ಅವರಿಗೆ ಒಬ್ಬ ರಕ್ಷಕನ ಅವಶ್ಯಕತೆಯನ್ನು ಮತ್ತು ಮುಂದೆ ತನ್ನಲ್ಲಿ ಒದಗುವ ರಕ್ಷಣೆಯ ಬಗ್ಗೆ ಸ್ವಲ್ಪವಾಗಿ ತೋರಿಸುವವರೆಗೆ ಕ್ರಿಸ್ತನು ಅವರ ಜ್ಞಾನವಾಗಿದ್ದರೂ, ಅವರು ತಮ್ಮ ಸಮರ್ಪಣೆ ಮತ್ತು ಭಕ್ತಿಯ ಮೂಲಕ ಆತನ ಹೆಜ್ಜೆಜಾಡಿನಲ್ಲಿ ನಡೆಯದ ಹೊರತು ಆತನೇ ಅವರ ಜ್ಞಾನದ ಮಾರ್ಗದರ್ಶಿಯಾಗಿ ಅವರನ್ನು ದೇವರ ಆಳವಾದ ಸಂಗತಿಗಳವರೆಗೆ ಕೊಂಡೊಯ್ಯುವವರೆಗೂ ಅವರ ಜ್ಞಾನವಾಗಿರಬೇಕೆಂಬುದು ದೇವರ ಯೋಜನೆಯಲ್ಲ. ಈ ಲೋಕದ ತಿಳುವಳಿಕೆಯಂತೆ ನೀತಿನಿರ್ಣಯ ಹೊಂದಿದ ವಿಶ್ವಾಸಿಯು ಒಬ್ಬ ನೂತನ ಸೃಷ್ಟಿಯಲ್ಲ. ಆತನು ದೇವರ

ಮಾರ್ಗಗಳ ಬಗ್ಗೆ ಮತ್ತು ಆತನ ಅವಶ್ಯಕತೆಗಳ ಬಗ್ಗೆ ಸ್ವಲ್ಪಮಟ್ಟಿಗೆ ಕಂಡಿದ್ದರೂ ಆತನು ಈ ಲೋಕದಲ್ಲಿ ಒಂದು ನೀತಿಯುತವಾದ, ವಿವೇಚನಾಪೂರ್ವಕವಾದ, ಗೌರವಾನ್ವಿತ ಪ್ರಾಮಾಣಿಕ ಜೀವಿತವನ್ನು ಜೀವಿಸ ಬಯಸುತ್ತಾನೆ. ಆತನು ಇನ್ನೂ ಲೋಕದವನು, ಲೌಕಿಕನು ; ಆತನ ಎಂದೂ ತನ್ನ ಮಾನವ ಹಕ್ಕುಗಳನ್ನು (ಯೇಸುವಿನ ಮೂಲಕ ಪಡಕೊಂಡ) ಕರ್ತನು ತನ್ನ ಸಮರ್ಥನೆಯ ಮೂಲಕ ದ್ವಾರಮುಕ್ತಗೊಳಿಸಿದ ಪರಲೋಕದ ಸಂಗತಿಗಳೊಂದಿಗೆ ಬದಲಾಯಿಸಿಕೊಳ್ಳಲು ಮುಂದುವರೆಯಲಿಲ್ಲ. ಲೇವಿಯರ ನಮೂನೆಯಲ್ಲಿ ಅವರಿಗೆ ದೇವದರ್ಶನ ಗುಡಾರದ ಪವಿತ್ರಸ್ಥಾನಕ್ಕೆ ಹೋಗಲು ಅಥವಾ ಅದರೊಳಗಿದ್ದ ವಸ್ತುಗಳನ್ನು ಸಹಾ ನೋಡಲು ಅನುಮತಿಯಿದ್ದಿಲ್ಲ, ಅವರಂತೆ ಅವರ ಪ್ರತಿಸಂಕೇತವಾದ ನೀತಿನಿರ್ಣಯ ಹೊಂದಿದ ವಿಶ್ವಾಸಿಗಳು ಅವರು ಮೊದಲಿಗೆ ರಾಜವಂಶದ ಯಾಜಕರ ಸದಸ್ಯತ್ವದಲ್ಲಿ ತಮ್ಮನ್ನು ಪೂರ್ಣವಾಗಿ ಪ್ರತಿಷ್ಟಿಸಿಕೊಳ್ಳುವವರೆಗೆ ಅವರಿಗೆ ಸಹಾ ದೇವರ ಆಳವಾದ ಸಂಗತಿಗಳಿಗೆ ಹೋಗಲು ಅಥವಾ ಅವುಗಳ ಭವ್ಯತೆಯನ್ನು ನೋಡಲು ಮತ್ತು ಮೆಚ್ಚಿಕೊಳ್ಳಲು ಅನುಮತಿಯಿಲ್ಲ.

ಪ್ರಸ್ತುತ ಜೀವನದಲ್ಲಿ ಆತನ ಕೃಪೆಯನ್ನು ವ್ಯರ್ಥವಾಗಿ ಪಡಕೊಂಡಿರುವ ಮತ್ತು ಹಿಂದಿನ ಆಶೀರ್ವಾದವನ್ನು ದುರುಪಯೋಗ ಪಡಿಸಿಕೊಂಡಿದ್ದು ಅದಕ್ಕೆ ಯಾವ ಬೆಲೆಯೂ ಇಲ್ಲವಾದ ಕಾರಣ ಧರ್ಮಯುಗದ ಕಾಲದಲ್ಲಿ ಆತನ ವಿಶೇಷ ಒಲವು ಮತ್ತು ಕೃಪೆಗಳನ್ನು ಅಪೇಕ್ಷಿಸುವುದು ಹಾಗೂ ವಿಶೇಷ ಆಶೀರ್ವಾದಗಳನ್ನು ನಿರೀಕ್ಷಿಸುವುದು ಒಂದು ಉತ್ತಮ ವ್ಯವಹಾರವೆಂದು ಕಂಡು ಬರುತ್ತದೆ. ದೇವರ ಹಿಂದಿನ ವ್ಯವಹಾರಗಳನ್ನು ಗಮನದಲ್ಲಿಟ್ಟುಕೊಂಡು ಸುವಾರ್ತಾಯುಗದಲ್ಲಿ ಕೃಪೆಯನ್ನು ಹೊಂದಿಕೊಳ್ಳದಿರುವ ಕೆಲವರಿಗೆ ಮುಂದಿನ ಕಾಲದಲ್ಲಿ ಮುಖ್ಯ ಕೃಪಾಶೀರ್ವಾದಗಳು ದೊರೆಯಬಹುದೆಂದು ನಾವು ಅಪೇಕ್ಷಿಸುವುದು ಸಾಮಾನ್ಯವಾದುದಲ್ಲವೆ? ಇದು **"ಕಡೆಯವರು ಮೊದಲಿಗರಾಗುವರು, ಮೊದಲಿಗರು ಕಡೆಯವರಾಗುವರು"** ಎಂಬ ನಮ್ಮ ಕರ್ತನ ಮಾತುಗಳಿಗೆ ಅನುಸಾರವಾಗಿಲ್ಲವೆ? ನಿಜವಾಗಿಯೂ, ಅಪೋಸ್ತಲನು ನಿರ್ಧಿಷ್ಟವಾಗಿ ಸೂಚಿಸುವುದೇನೆಂದರೆ ನೂತನ ಸೃಷ್ಟಿಯು ಪೂರ್ಣಗೊಂಡ ಮೇಲೆ ಮತ್ತು ಧರ್ಮಯುಗವು ಪರಿಚಯಿಸಲ್ಪಟ್ಟಾಗ ದೇವರ ವಿಶೇಷ ಆಶೀರ್ವಾದಗಳು ಸುವಾರ್ತಾಯುಗದಲ್ಲಿ ಅದನ್ನು ವಾಪಾಸ್ಸು ಪಡೆದಿದ್ದ ಸ್ವಭಾವಿಕ ಇಸ್ರಾಯೇಲ್ಯರಿಗೆ ಹಾದುಹೋಗುತ್ತದೆ (ರೋಮ ೧೧:೨೫-೩೨ ನೋಡಿರಿ).

ಈ ಯುಗಕ್ಕೂ ಪೂರ್ವದಲ್ಲಿ ದೇವರ ಸಹವಾಸಕ್ಕೆ ಸಮರ್ಥಿಸಲ್ಪಟ್ಟವರನ್ನು ಮತ್ತು ತಮ್ಮ ಈ ಸಮರ್ಥನೆಯನ್ನು ಕಾಪಾಡಿ ಕೊಂಡವರನ್ನು ಬಹುಮಾನಾರ್ಥವಾಗಿ ದೇವರರಾಜ್ಯದ ಅಡಿಯಲ್ಲಿ 'ಇಡೀ ಪ್ರಪಂಚದ ರಾಜಕುಮಾರರನ್ನಾಗಿ ಮಾಡಲಾಗುವುದು' ಮತ್ತು ಅವರು ಇದನ್ನು ಸ್ವಯಂ ನಿರಾಕರಣೆಯ ಮೂಲಕ ಕಾಪಾಡಿಕೊಳ್ಳುವರು (ಇಬ್ರಿಯ ೧೧;೩೫ ನೋಡಿರಿ) ಪ್ರಸ್ತುತ ಕಾಲದವರು ತಮ್ಮ ಸಮರ್ಥನೆಯನ್ನು ದೈಹಿಕ ಸಂಗತಿಗಳ ಬೆಲೆತೆತ್ತು ಸರಿಯಾದ ರೀತಿಯಲ್ಲಿ ಕಾಪಾಡಿಕೊಳ್ಳ ಬೇಕಾಗುವುದು. ಅಸಾಧಾರಣವಾದ ಮಟ್ಟದಲ್ಲಿ ಪ್ರಾಮಾಣಿಕರಾಗಿರುವ ಚಿಕ್ಕಹಿಂಡು ಸತ್ಯದ ಮತ್ತು ಸಹೋದರರ ಸೇವೆಗೆ ತಮ್ಮ ಜೀವವನ್ನು ಮುಡುಪಾಗಿರಿಸುವರು. ಈ ರೀತಿಯಲ್ಲಿ ಅವರು ತಮ್ಮ ರಕ್ಷಣಾ ನಾಯಕನ ಪ್ರತಿ ರೂಪದಂತಿರುವರು. ಮತ್ತೊಂದೆಡೆ 'ಮಹಾ ಸಮೂಹ'ವೆಂದು ಪರಿಗಣಿಸಲ್ಪಟ್ಟಿರುವ ಎರಡನೆಯ ವರ್ಗದವರು ಸಹಾ ತಮ್ಮ ಬಹುಮಾನವನ್ನು ದೈಹಿಕ ಸಂಗತಿಗಳ ಬೆಲೆ ತೆತ್ತು ಪಡಕೊಳ್ಳಬೇಕಾಗುವುದು. ತ್ಯಾಗಮಾಡಲು ಕಡಿಮೆ ಉತ್ಸಾಹವುಳ್ಳವರಾದ ಕಾರಣ ಅವರು ನೂತನ ಸೃಷ್ಟಿಯ ಮಹಾ ಬಹುಮಾನಗಳನ್ನು ಮತ್ತು ಅದರ ರಾಜ್ಯದ ಸೌಕರ್ಯಗಳನ್ನು ಕಳಕೊಳ್ಳುತ್ತಾರೆ. ಈ ಮೂರೂ ವರ್ಗದವರು ಮಾತ್ರವೇ ಈ ಕಾಲದ ನಂಬಿಕೆಯ ಮೂಲಕ ನೀತಿನಿರ್ಣಯ ಎಂಬ ವಿಶೇಷ ಅವಕಾಶದ ಮೂಲಕ ಪ್ರಸ್ತುತ ಜೀವನಕ್ಕೆ ಮೀರಿದ ಲಾಭವನ್ನು ಪಡೆದವರು ಎಂದು ತೋರಿಬರುತ್ತದೆ.

ಪೂರ್ಣ ಜ್ಞಾನದ ಪ್ರಕಾಶದಲ್ಲಿ ಮತ್ತು ಕಾರ್ಯದ, ಚಿತ್ತದ ಮತ್ತು ಇನ್ನೂ ಅನೇಕ ಕಾರಣಗಳಿಂದ ರಾಜ್ಯದ ಕಾರ್ಯಭಾರವು ಬಹಳ ಬಲಶಾಲಿಗಳಿಗೆ, ಮೊದಲಿಗೆ ದೈಹಿಕತೆಯನ್ನು ಅನುಸರಿಸುವ ಇಸ್ರಾಯೇಲ್ಯರಿಗೆ ಬಹಳ

ಪ್ರಭಲವಾಗಿ ಅನ್ವಯವಾಗುವುದು. ಅವರ ಅಂಧತ್ವವು ಬದಲಾದ ಮೇಲೆ ದೇವರಿಂದ ಪ್ರತಿಷ್ಠೆಗೊಂಡವರ ಮೇಲೆ ಅವರು ಅಧಿಕವಾದ ಅಸೂಯೆ ಹೊಂದುವರು ಮತ್ತು ಈ ಜನರು **''ಆಹಾ! ಈತನೇ ನಮ್ಮ ದೇವರು, ನಮ್ಮನ್ನು ರಕ್ಷಿಸಲಿ ಎಂದು ಈತನನ್ನು ನಿರೀಕ್ಷಿಸ್ಕೊಂಡಿದ್ದೇವೆ''** (ಯೆಶಾಯ ೨೫:೯) ಎಂದು ಹೇಳುವರು. ಆದರೆ, ಸ್ವಾಭಾವಿಕವಾಗಿ ಇಸ್ರಾಯೇಲ್ಯರು ನೂತನ ಕ್ರಮದಲ್ಲಿ  ಮೊದಲಿಗ್ಗರಾಗಿ ನಿಲ್ಲುವಾಗ, ದೇವರ ನಾಮಕ್ಕೆ ಸ್ತೋತ್ರವಾಗಲಿ! ಎಲ್ಲಾ ದೇಶಗಳವರೂ ಅಬ್ರಹಾಮನ ಸಂತತಿಯವರಾಗಲಿ ಆತನಿಗೆ ವಾಗ್ದಾನಮಾಡಿದ ಆಶೀರ್ವಾದಕ್ಕೆ ಪಾತ್ರರಾಗಲಿ ಎಂಬ ಉದ್ಧೇಶದಿಂದ ರಾಜ್ಯದ ಅವಕಾಶಗಳು ಮತ್ತು ಆಶೀರ್ವಾದಗಳು ತ್ವರಿತವಾಗಿ ಪ್ರಪಂಚಕ್ಕೆಲ್ಲಾ ವಿಸ್ತರಿಸಲ್ಪಡುವುದು. ಯಾಕೆಂದರೆ ದೇವರು ಅಬ್ರಹಾಮನನ್ನು '' **ನೀನು ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ ; ನಿನ್ನ ಸಂತಾನದ ಮೂಲಕ ಪ್ರಪಂಚದ ಎಲ್ಲಾ ಕುಟುಂಬಗಳೂ ಆಶೀರ್ವದ ಹೊಂದುವುವು''** ಎಂದು ಆಶಿರ್ವದಿಸಿದ್ದಾನೆ.

## ದೇವರು ನಮ್ಮನ್ನು ಪವಿತ್ರಗೊಳಿಸಿದ್ದಾನೆ

ನಮ್ಮ ಕರ್ತನಾದ ಯೇಸುವು ನಮಗಾಗಿ ಪ್ರಾಣಧಾನ ಮಾಡಿದ್ದರ ಫಲವಾಗಿ ದೇವರ ತಿಳುವಳಿಕೆಯ ಅಥವಾ ಜ್ಞಾನವು ನಮಗೆ ಒದಗಿ ಬಂತು ಮತ್ತು ನಾವು ಆತನ ಪ್ರಾಯಶ್ಚಿತ್ತ ಬಲಿಯೊನ್ನು ಒಪ್ಪಿಕೊಂಡು ನಮ್ಮ ಪಾಪಗಳಿಂದ ವಿಮುಖರಾಗಿ ನೈತಿಕತೆಯೆಡೆಗೆ ತಿರುಗಿಕೊಂಡಾಗ ನೀತಿನಿರ್ಣಯವು ಆತನ ಅರ್ಹತೆಯ ಮೂಲಕ ನಮಗೆ ಉಂಟಾಯಿತು. ಆತನ ಮೂಲಕವಾದ ನಮ್ಮ ಪವಿತ್ರಪಡಿಸುವಿಕೆಯು ಸಹಾ ಅದರಂತೆಯೇ. ಯಾರೊಬ್ಬರೂ ತನ್ನನ್ನು ತಾನೇ ಪವಿತ್ರಪಡಿಸಿ ಕೊಳ್ಳಲಾರನು. ಅಂದರೆ, ತನ್ನನ್ನು ನೂತನ ಸೃಷ್ಟಿಯಲ್ಲಿ ದೇವರ ಕುಟುಂಬಕ್ಕೆ ಅಂಗೀಕಾರಾರ್ಹರನನ್ನಾಗಿ, ಆತ್ಮನಿಂದ ಪಡಕೊಂಡವನನ್ನಾಗಿ ಮಾಡಿಕೊಳ್ಳಲಾರನು (ಯೋಹಾನ ೧:೧೩ ಮತ್ತು ಇಬ್ರಿಯ ೫:೪ ಇವುಗಳನ್ನು ನೋಡಿರಿ). ನಮ್ಮ ನೀತಿನಿರ್ಣಯಕ್ಕೆ ಕ್ರಿಸ್ತನ ಅರ್ಹತೆಯು ಅಗತ್ಯವಾಗಿರುವಂತೆ ಆತನ ದೇಹದ ಅಂಗಗಳಾಗಿ, ರಾಜವಂಶಸ್ಥ ಯಾಜಕರಾಗಿ ಅಂಗೀಕರಿಸಲ್ಪಡುವುದಕ್ಕೂ ಇದು ಅಗತ್ಯವಾಗಿದೆ ಮತ್ತು ಆತನ ನಿರಂತರವಾದ ಸಹಾಯವು ಸಹಾ ನಮ್ಮ ಕರೆಯನ್ನು ಮತ್ತು ನಮ್ಮ ಆಯ್ಕೆಯನ್ನು ಖಚಿತಪಡಿಸಲು ಕೇವಲ ಅಗತ್ಯವಾಗಿದೆ. ಅಪೋಸ್ತಲನು **''ಕೆಲವರು ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ''** (ಕೊಲಸ್ಸೆ ೨: ೧೯ ನೋಡಿರಿ) ಎಂದು ಖಂಡಿಸುತ್ತಾನೆ. ಕ್ರಿಸ್ತನನ್ನು ಪಾಪ ವಿಮೋಚಕನು ಮಾತ್ರವಲ್ಲ, ಆತನು ನಮ್ಮ ಶಿರಸ್ಸು, ದೇವರ ಪ್ರತಿನಿಧಿ, ಮಾರ್ಗದರ್ಶಿ ಬೋಧಕ ಮತ್ತು ಸಭೆಯೆಂಬ ತನ್ನ ಶರೀರವನ್ನು ಸಂರಕ್ಷಿಸುವವನು ಎಂದು ಗ್ರಹಿಸಿಕೊಳ್ಳುವುದು ಅದರ ಪ್ರತಿ ಸದಸ್ಯನಿಗೆ ಅವಶ್ಯವೆಂದು ನಾವು ತಿಳಿದಿದ್ದೇವೆ. ನಾವು ನಿರಂತರವಾಗಿ ಆತನ ಪಾಲನೆಯಲ್ಲಿರಬೇಕೆಂದು ನಮ್ಮ ಕರ್ತನು **''ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ''** (ಯೋಹಾನ ೧೫:೪) ಎಂದು ಹೇಳಿದ್ದಾನೆ. ಮತ್ತು **''ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವುದು''** (ಯೋಹಾನ ೧೫:೭) ಎಂದು ಸಹಾ ಹೇಳಿದ್ದಾನೆ. ಅಪೊಸ್ತಲನು ಸಹಾ ಕ್ರಿಸ್ತನಲ್ಲಿ ನೆಲ್ಲಗೊಳ್ಳಬೇಕಾದ ಇದೇ ಅಗತ್ಯತೆಯನ್ನು '' **ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವುದು ಭಯಂಕರವಾದದ್ದು''** (ಇಬ್ರಿಯ ೧೦:೩೧) ಎಂದು ಸೂಚಿಸುತ್ತಾನೆ. ಆತನು ತನ್ನ ಮಾತುಗಳ ಅರ್ಥವನ್ನು ತಿಳಿಸುವ ಸಲುವಾಗಿ **''ದೇವರು ಧಹಿಸುವ ಅಗ್ನಿಯಾಗಿದ್ದಾನೆ''** ಎಂಬ ಪ್ರವಾದನೆಯ ಮಾತುಗಳನ್ನು ಮುಂದೆ ಹೇಳುವವನಾಗಿದ್ದಾನೆ. ದೇವರ ಪ್ರೀತಿಯು ಆತನ ನ್ಯಾಯಕ್ಕಿಂಥ ಕಡಿಮೆಯಾದುದಲ್ಲ, ಎಲ್ಲಾ ಪಾಪದ ವಿರುದ್ದ ಅದು ಉರಿಯುವುದು ಮತ್ತು ''ಅನೀತಿಯುಳ್ಳದೆಲ್ಲವೂ ಪಾಪವೇ'' '' ಆತನು ಪಾಪವನ್ನು ನೋಡುವವನಲ್ಲ (ಗ್ರಹಿಸುವವನಲ್ಲ)''

ಆದುದರಿಂದ ಆತನು ನಮ್ಮ ಪಾಪಗಳನ್ನು ಕಾಪಾಡುವುದಕ್ಕಾಗಿ ಸಿದ್ಧತೆಮಾಡದೆ ಅದರಿಂದ ಮತ್ತು ಅದರ ದಂಡನೆಯಾದ ನಾಶನದಿಂದ ನಮ್ಮನ್ನು ಕಾಪಾಡುವ ಹಂಚಿಕೆಮಾಡಿದ್ದಾನೆ.

ದೇವರವಾಕ್ಯದ ವಿವಿಧ ಹೇಳಿಕೆಗಳ ಸಾಮರಸ್ಯದೊಡನೆ ನಮಗೆ ಪಾಪ ಮತ್ತು ಪಾಪಿಗಳು, ಪಾಪ, ನೋವು. ದುಃಖ ಮತ್ತು ಮರಣದ ಸಹವರ್ತನೆಯೊಂದಿಗೆ ತೊಡೆದುಹಾಕುವ ಕಾಲ ಬರುತ್ತದೆಂಬುವ ಭರವಸೆಯು ನಮಗೆ ದೊರೆಯುತ್ತದೆ. ದೇವರ ನಾಮಕ್ಕೆ ಸ್ತೋತ್ರವಾಗಲಿ! ಯಾಕೆಂದರೆ ದೇವರು ಧಹಿಸುವ ಅಗ್ನಿಯಾಗಿದ್ದಾನೆ, ಆತನು ನಮ್ಮ ಇಚ್ಛಾಪೂರ್ವಕವಲ್ಲದ ಅಸಮರ್ಪಕ ಕಾಲಕ್ಕೆ ನಮಗೆ ಕ್ರಿಸ್ತನಲ್ಲಿ ಆಶ್ರಯವನ್ನು ಒದಗಿಸಿಕೊಟ್ಟಿದ್ದಾನೆಂದು ನಮಗೆ ತಿಳಿದ ಮೇಲೆ ನಾವು ದೇವರ ಸ್ವಭಾವದ ಲಕ್ಷಣಗಳೊಂದಿಗೆ ಆನಂದಿಸಬಹುದು. ಆತನು ಕ್ರಿಸ್ತನಲ್ಲಿ ನಮಗೆ ಪಾಪ ಮತ್ತು ಮರಣದಿಂದ ಹಾಗೂ ನಮ್ಮ ಎಲ್ಲ ಬಲಹೀನತೆಗಳಿಂದ ಆತನ ಸ್ವಂತ ಸಮರ್ಪಕವಾದ ಸ್ವರೂಪಕ್ಕೆ – ನೂತನ ಸೃಷ್ಟಿಗೆ ದೇವರ ಸ್ವಭಾವದ ಸಮರ್ಪಕತೆಗೆ ಮತ್ತು ಸಂಪೂರ್ಣತೆಗೆ ಬಿಡುಗಡೆಗೊಳಿಸಿದ್ದಾನೆ ; ಮಹಾ ಸಮೂಹಕ್ಕೆ, ದೇವದೂತರಿಗೆ ಸಮವಾದ ಕ್ಷೇತ್ರಕ್ಕೆ, ಮಹಿಮಾ ಸಭೆಯ ಸಚಿವರುಗಳೂ, ಒಡನಾಡಿಗಳೂ ಆಗುವುದಕ್ಕೆ – ಕನ್ಯೆಯರೂ ಮತ್ತು ಆಕೆಯನ್ನು ಅನುಸರಿಸುವ ಆಕೆಯ ಸಖಿಯರೂ ಆಗುವುದಕ್ಕೆ (ಕೀರ್ತನೆ ೪೫:೧೪ ನೋಡಿರಿ). ಮುಂದೆ, ಪುರಾತನ ಯೋಗ್ಯರು ಮಾನವ ಸ್ವಭಾವದಲ್ಲಿ, ದೇಹದಲ್ಲಿ ದೇವರ ಸ್ವರೂಪಿಗಳಂತೆ ದೇವರ ರಾಜ್ಯದ ಮಹಿಮಾ ಪ್ರತಿನಿಧಿಗಳಂತೆ ಈ ಲೋಕದ ಎಲ್ಲ ಕುಟುಂಬಗಳಿಗೆ ದೇವರ ಆಶೀರ್ವಾದದ ನಾಲೆಗಳಂತೆ ಸಮರ್ಪಕರಾಗುವರು. ಅಂತಿಮವಾಗಿ, ಧರ್ಮಯುಗದ ಎಲ್ಲಾ ಶೋಧನೆಗಳು, ಅವಕಾಶಗಳು ಮತ್ತು ಪರೀಕ್ಷೆಗಳು ಎಲ್ಲಾ ಇಚ್ಛೆಯುಳ್ಳವರನ್ನೂ ಮತ್ತು ವಿಧೇಯರನ್ನೂ ಸಮರ್ಪಕತೆಗೆ ತರುವಾಗ ಮತ್ತು ಅವರು ದೇವರಿಗೆ ತಮ್ಮ ನಿಷ್ಠೆಯನ್ನು ನಿರೂಪಿಸುವಾಗ ಇವರುಗಳು ಸಹಾ ಮಾನವ ಸಮರ್ಪಕತೆಯನ್ನು, ತಮ್ಮ ದೇಹದಲ್ಲಿ ದೇವರ ಸ್ವರೂಪವನ್ನು ಪಡಕೊಂಡಿರುತ್ತಾರೆ ; ಇವರೆಲ್ಲರಲ್ಲಿಯೂ ದೇವರ ಚಿತ್ತವು ಸ್ಪಷ್ಟವಾಗಿ ಅರ್ಥವಾಗಿರುವುದು ಮತ್ತು ಹೃತ್ಪೂರ್ವಕವಾಗಿ ಅವರು ಅದಕ್ಕೆ ವಿಧೇಯ ರಾಗಿರುವರು. ಆತನು ಅವರಿಗೆ ಇನ್ನೆಂದಿಗೂ ಧಹಿಸುವ ಬೆಂಕಿಯಾಗುವುದಿಲ್ಲ . ಯಾಕೆಂದರೆ ಅವರ ಅಪರಾಧಗಳೆಲ್ಲವೂ ಮಹಾ ಮಧ್ಯಸ್ತಗಾರನ ಶಿಸ್ತಿನಡಿಯಲ್ಲಿ ಶುದ್ಧೀಕರಿಸಲ್ಪಟ್ಟಿರುತ್ತವೆ. ಆತನ ವಶಕ್ಕೆ ದೇವರ ಪ್ರೀತಿ ಮತ್ತು ಜ್ಞಾನವು ಅವರನ್ನು ಒಪ್ಪಿಸಿರುತ್ತದೆ. ಆಗ ಕ್ರಿಸ್ತನು ತಮ್ಮ ಆತ್ಮನ ಶ್ರಮೆಯನ್ನು ನೋಡಿ ಅದರ ಫಲದಿಂದಾಗಿ ತೃಪ್ತಿಹೊಂದುವನು.

ಪವಿತ್ರಪಡಿಸುವಿಕೆಯು ಪವಿತ್ರಸೇವೆಗೆ ಪ್ರತ್ಯೇಕಿಸುವುದನ್ನು ಸೂಚಿಸುತ್ತದೆ. ಪಾಪಿಗಳನ್ನು ಪವಿತ್ರಪಡಿಸುವಿಕೆಗೆ ಕರೆಯದೆ ಪಶ್ಚಾತ್ತಾಪಪಡಲು ಕರೆಯಲಾಗುವುದು. ಮತ್ತು ಪಶ್ಚಾತ್ತಾಪ ಪಟ್ಟ ಪಾಪಿಗಳನ್ನು ಸಮರ್ಪಣೆಗೆ ನಿಯೋಜಿಸದೆ ಅವರನ್ನು ಸಮರ್ಥನೆಯವರೆಗೆ ಕರ್ತನಾದ ಯೇಸುಕ್ರಿಸ್ತನನ್ನು ನಂಬುವಂತೆ ನಿಯಮಿಸಲಾಗುವುದು. ಪವಿತ್ರ ಪಡಿಸುವಿಕೆಯನ್ನು ಕೇವಲ ಸಮರ್ಥನಾ ಗುಂಪಿನವರಿಗೆ – ಕ್ರಿಸ್ತನಲ್ಲಿ ಕೇಂದ್ರಿಕೃತವಾದ ದೇವರ ವಾಗ್ದಾನಗಳನ್ನು ಮತ್ತು ಅದನ್ನು ಈಡುಬಲಿಯಲ್ಲಿ ದೃಢಪಡಿಸಿರುವುದನ್ನು ನಂಬುವವರಿಗೆ ಮಾತ್ರವೇ ಒತ್ತಾಯಿಸಲಾಗುವುದು. ಪವಿತ್ರಪಡಿಸುವಿಕೆ ಅಥವಾ ಪರಿಶುದ್ಧತೆಯು ಎಲ್ಲಾ ಮಾನವರಿಗೆ ಸರಿಯಾದುದಲ್ಲ ಎಂಬುದು ಇದರ ಅರ್ಥವಲ್ಲ : ಸರಳವಾದ ಇದರ ಅರ್ಥವೆಂದರೆ, ಮಾನವನು ಎಲ್ಲಿಯವರೆಗೆ ಪಶ್ಚಾತ್ತಾಪಪಡದ ಪಾಪಿಯಾಗಿ ಮುಂದುವರೆಯುವನೋ ಅಲ್ಲಿಯವರೆಗೆ ಆತನನ್ನು ಪವಿತ್ರ ಜೀವಿತಕ್ಕೆ ಪ್ರತ್ಯೇಕಿಸಿಕೊಳ್ಳುವಂತೆ ಕರೆಯುವುದು ವ್ಯರ್ಥವೆಂದು ದೇವರು ಮುಗಂಡಿದ್ದಾನೆ. ಆತನು ಮೊದಲು ತನ್ನ ಪಾಪಮಯ ಸ್ಥಿತಿಯನ್ನು ಗ್ರಹಿಸಿಕೊಳ್ಳಬೇಕು ಮತ್ತು ಅವುಗಳಿಗಾಗಿ ಪಶ್ಚಾತ್ತಾಪಪಡುವವನಾಗ ಬೇಕು. ಪಶ್ಚಾತ್ತಾಪಪಡುವವನು ಶುದ್ಧನಾಗಬಾರದು, ಪವಿತ್ರತೆಗೆ ತನ್ನನ್ನು ಪ್ರತ್ಯೇಕಿಸಿಕೊಳ್ಳಬಾರದು ಎಂದೇನಿಲ್ಲ. ಆದರೆ ಸಮರ್ಥನೆಯನ್ನು ಬಿಟ್ಟುಬಿಟ್ಟ ಪವಿತ್ರತೆಯು ಸಂಪೂರ್ಣವಾಗಿ ನಿಷ್ಪ್ರಯೋಜಕವಾದುದು. ದೇವರ ಕ್ರಮದಲ್ಲಿ, ನಾವು ಮೊದಲಿಗೆ ನಮ್ಮ ಪಾಪಗಳಿಗಾಗಿ ಮಾಡಲ್ಪಟ್ಟ ಪೂರ್ವ ಸಿದ್ಧತೆಗಳಲ್ಲಿ ದೇವರ ಒಳ್ಳೆಯತನವನ್ನು ಕಲಿತುಕೊಳ್ಳಬೇಕು ಮತ್ತು ನಾವು ಸಮರ್ಪಣೆಯ ಸರಿಯಾದ ಮನೋವೃತ್ತಿ ಹೊಂದುವವರೆಗೆ ಅಥವಾ ನಮ್ಮನ್ನು ಆತನ ಸೇವೆಗೆ ಪವಿತ್ರಪಡಿಸಿಕೊಳ್ಳುವವರೆಗೆ ಆತನ ಪಾಪಕ್ಷಮಾಪಣೆಯನ್ನು ಕ್ರಿಸ್ತನ ಮೂಲಕವಾದ ಉಚಿತವಾದ ದಾನವೆಂದು

ಒಪ್ಪಿಕೊಳ್ಳಬೇಕು. ಇದರ ಹೊರತಾಗಿ, ಪಶ್ಚಾತ್ತಾಪಕ್ಕೆ ಕರೆ, ಸಮರ್ಥನೆಯ ವರೆಗೆ ಸುವರ್ತಮಾನದ ಪ್ರಕಟನೆ, ಸಮರ್ಥನೆಗೊಂಡವರನ್ನು ಪವಿತ್ರಪಡಿಸುವಿಕೆಗೆ ಅಥವಾ ಅವರೇ ತಮ್ಮನ್ನು ದೇವರಿಗೆ ಸಮರ್ಪಿಸಿಕೊಳ್ಳುವಂತೆ ಆಹ್ವಾನಿಸುವುದು ಉದ್ಧೇಶವು ಸುವಾರ್ತಾ ಯುಗದ ಈ ಎಲ್ಲಾ ವ್ಯವಸ್ಥೆಗಳ ಉದ್ದೇಶಗಳಾಗಿವೆ. ಇವುಗಳೆಲ್ಲವೂ ದೇವರು ನಮಗಾಗಿ ಈಗ ಸಿದ್ಧಪಡಿಸುತ್ತಿರುವ ಯೋಜನೆ ಅಥವಾ ಅದರ ಭಾಗಗಳಾಗಿವೆ. ಇವು ನೂತನ ಸೃಷ್ಟಿಯ ಬೆಳವಣಿಗೆಗಾಗಿವೆ. ನೂತನ ಸೃಷ್ಟಿಯಲ್ಲಿರುವ ರಾಜವಂಶಸ್ಥರಾದ ಯಾಜಕರೆಲ್ಲರೂ ತ್ಯಾಗಿಗಳಾಗಿರಬೇಕೆಂದು ದೇವರು ಪೂರ್ವನಿರ್ಧಾರಮಾಡಿದ್ದಾನೆ. ನಮ್ಮ ಮಹಾಯಾಜಕನು ತನ್ನನ್ನೇ ಅರ್ಪಿಸಿಕೊಂಡಂತೆ (ಇಬ್ರಿಯ ೭:೨೭ಮತ್ತು ೯:೧೪ ಇವುಗಳನ್ನು ನೋಡಿರಿ) ಅವರೆಲ್ಲರಲ್ಲಿಯೂ ಸಮರ್ಪಿಸಲು ಏನಾದರೂ ಇರಲೇ ಬೇಕು. ಅಧೀನ ಯಾಜಕರು ತಮ್ಮನ್ನೇ ತಾವು ದೇವರಿಗೆ ಸಮರ್ಪಿಸಿಕೊಳ್ಳಬೇಕು. ಅಪೋಸ್ತಲನು ಪ್ರಬೋಧಿಸುವಂತೆ – **"ಸಹೋದರರೇ,**(ಸಹೋದರರು ಹೇಗೆಂದರೆ, ಸಮರ್ಥಿಸಲ್ಪಟ್ಟವರು ಮತ್ತು ತನ್ಮೂಲಕ ದೇವರ ಸಹವಾಸಕ್ಕೆ ತರಲ್ಪಟ್ಟವರು) **ದೇವರ ಕನಿಕರವನ್ನು** (ಪಾಪದ ಪರಿಹಾರವನ್ನು ಆಗಲೇ ಅನುಭವಿಸಿ ಆಗಿದೆ) **ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ, ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು."** (ರೋಮ ೧೨:೧) ಈಗ, ನಮ್ಮ ದೇಹವು ನಿಜವಾಗಿಯೂ 'ಪರಿಶುದ್ಧ'ವಾಗಿಲ್ಲವೆಂಬುದನ್ನು ಗುರುತಿಸಿ, ಅವರು ಹಾಗೆಂದು ಪರಿಗಣಿಸಲ್ಪಟ್ಟು ದೇವರ ಸನ್ನಿಧಾನ ಸೇರುವ ಮೊದಲು ಅವರು ಪರಿಶುದ್ಧರೆಂದುಎಣಿಕೆಯಾಗಬೇಕು. ಈ ರೀತಿಯಲ್ಲಿ ಹೇಳುವುದೇನೆಂದರೆ, .ನಾವು ದೇವರ ಬಲಿಪೀಠದಲ್ಲಿ ಏನನ್ನಾದರೂ ಪವಿತ್ರವಾದುದನ್ನು ಅರ್ಪಿಸುವ ಮತ್ತು ಅದು ಆತನಿಂದ ಸ್ವೀಕಾರಗೊಳ್ಳುವ ಮುನ್ನ .ನಾವು ಕ್ರಿಸ್ತನಲ್ಲಿ ವಿಶ್ವಾಸದ ಮೂಲಕ ನೀತಿವಂತರೆಂಬ ನಿರ್ಣಯವನ್ನು ಹೊಂದಿಕೊಳ್ಳತಕ್ಕದ್ದು. ನಂತರ ಅದು ಬಲಿಪೀಠದಲ್ಲಿ ಸಮರ್ಪಿತಗೊಂಡು ನಾವು " ರಾಜವಂಶಸ್ಥ ಯಾಜಕ"ರೆಂದು ಎಣಿಸಲ್ಪಡುವ ಮೊದಲೇ ನಮ್ಮ ಮಹಾ ಯಾಜಕನ ಕೈಯಿಂದ ಅಂಗೀಕರಿಸಲ್ಪಡುವುದು.

ಧರ್ಮಯುಗದಲ್ಲಿ ಮಹಾ ರಾಜನಿಗೆ ಅಗತ್ಯವಾದುದೆಂದರೆ ಪವಿತ್ರತೆ. ಇಡೀ ಪ್ರಪಂಚವನ್ನು ಪವಿತ್ರಗೊಳ್ಳಲು, ಆಶುದ್ಧತೆಯಿಂದ, ಎಲ್ಲಾ ವಿಧವಾದ ಪಾಪಗಳಿಂದ ತಮ್ಮನ್ನು ದೂರೀಕರಿಸಿಕೊಳ್ಳಲು ಮತ್ತು ರಾಜ್ಯದಲ್ಲಿ ಮತ್ತು ರಾಜಕುಂಆರರುಗಳಲ್ಲಿ ಪ್ರತಿನಿಧಿಸುವಂತೆ ತಮ್ಮನ್ನು ದೇವರ ಚಿತ್ತಕ್ಕೆ ವಿಧೇಯರನ್ನಾಗಿಸಿಕೊಳ್ಳಲು ಕರೆಯ ಲಾಗುವುದು. ಆಗ ಕೆಲವರು ಹೃದಯದಲ್ಲಿ ಪರಿಶುದ್ಧಗೊಳ್ಳದೆ ಕೇವಲ ಬಾಹ್ಯ ಜೀವನದಲ್ಲಿ ಮಾತ್ರವೇ ಪರಿಶುದ್ಧತೆ ಅಥವಾ ಪವಿತ್ರತೆಯನ್ನು ಹೊಂದಿಕೊಳ್ಳಬಹುದು. ; ಅವರುಗಳು ಮಾನಸಿಕವಾದ, ನೈತಿಕವಾದ ಮತ್ತು ದೈಹಿಕವಾದ ಪ್ರಗತಿಯನ್ನು ಪುನಃವಶದ ಪೂರ್ಣ ಮಿತಿಯ ಮಟ್ಟಿಗೆ ಸಂಪೂರ್ಣ ಸಮರ್ಪಕತೆಗೆ ಸಾಧಿಸಬಹುದು. ಹೀಗೆ ಮಾಡುವ ಸಮಯದಲ್ಲಿ ಅವರು ಆ ಭವ್ಯ ಸಮಯದ ಆಶೀರ್ವಾದದ ಆನಂದವನ್ನು ಅದರ ಅಂತ್ಯದವರೆಗೂ ಅನುಭವಿಸುವರು. ಆದರೆ, ಆಷ್ಟರಲ್ಲಿ ಅವರ ಪವಿತ್ರತೆಯು ಅವರ ಹೃದಯದ ಅಲೋಚನೆಗಳಿಗೂ ಉದ್ಧೇಶಗಳಿಗೂ ವಿಸ್ತರಿಸದೇ ಹೋದಲ್ಲಿ ಅವರು ಧರ್ಮಯುಗದ ನಂತರ ಕಾಲದ ಶಾಶ್ವತವಾದ ಪರಿಸ್ಥಿತಿಗೆ ಯೋಗ್ಯರಾಗುವುದಿಲ್ಲ. ಇದರೊಳಗೆ ದೇವರ ಚಿತ್ತಕ್ಕೆ ಅಲೋಚನೆ, ಮಾತು ಮತ್ತು ಕಾರ್ಯದಲ್ಲಿ ಹೊಂದಿಕೆಯಾಗದ ಯಾವುದೂ ಪ್ರವೇಶಮಾಡಲಾಗದು.

ಆದರೆ, ಹಾಗೆ ಪವಿತ್ರಪಡಿಸುವಿಕೆಯನ್ನು ಸಾಮಾನ್ಯ ಸಿದ್ಧಾಂತವನ್ನಾಗಿ ಮತ್ತು ಇನ್ನು ಮುಂದೆ ಪ್ರಪಂಚದಲ್ಲಿ ಅದರ ಕಾರ್ಯನಿರ್ವಹಣೆಯನ್ನು ಗುರುತಿಸುವಾಗ ದೇವರ ವಾಕ್ಯಗಳು ನಮ್ಮ – ನೂತನ ಸೃಷ್ಟಿಯ ಬುದ್ಧಿವಾದಕ್ಕಾಗಿಯೇ ಬರೆಯಲ್ಪಟ್ಟಿವೆ ಎಂಬ ದೃಷ್ಟಿಯನ್ನು ಕಳಕೊಳ್ಳದೇ ಇರೋಣ. ಪ್ರಪಂಚದ ಸಮಯವು ಬೋಧನೆಗಳ ಕಡೆಗೆ ಪವಿತ್ರಪಡಿಸುವಿಕೆಯ ಜಾಡಿನಲ್ಲಿ ಬರುವಾಗ ಅದಕ್ಕೆ ಒರ್ವ ಮಹಾ ಬೋಧಕನಿರುತ್ತಾನೆ ; ಆಗ ನೀತಿ ಸೂರ್ಯನು ದೇವರ ಜ್ಞಾನದೊಂದಿಗೆ ಇಡೀ ಪ್ರಪಂಚವನ್ನು ಆವರಿಸಿಕೊಂಡಿರುವುದು. ಇನ್ನು ಮುಂದೆ ಬಾಬೇಲಿನಲ್ಲಿದ್ದಂತೆ ಕಳವಳಗೊಳಿಸುವ ಸಿದ್ಧಾಂತಗಳಾಗಲೀ, ವಿಚಾರ ಸರಣಿಗಳಾಗಲೀ ಇರುವುದಿಲ್ಲ. ಯಾಕೆಂದರೆ ದೇವರು ಆ ದಿನವನ್ನು ಗೌರವಿಸಿ **" ಆಗ**

**ಎಲ್ಲರೂ ಒಂದೇ ಮನಸ್ಸಿನಿಂದ ಕರ್ತನನ್ನು ಸೇವಿಸಿ ಆತನ ಹೆಸರನ್ನೆತ್ತಿ ಪ್ರರ್ಥಿಸುವಂತೆ ಜನಾಂಗದವರ ತುಟಿಗಳನ್ನು ಮಾರ್ಪಡಿಸಿ ಶುದ್ಧಿಮಾಡುವೆನು''** (ಚೆಫನ್ಯ ೩:೯) ಎಂದಿದ್ದಾನೆ. ಅಪೊಸ್ತಲನು ದೇವರ ಕ್ರಿಸ್ತನು ನಮ್ಮ ಜ್ಞಾನಕ್ಕಾಗಿ, ಸಮರ್ಥನೆಗಾಗಿ, ಪವಿತ್ರ ಪಡಿಸುವಿಕೆ ಮತ್ತು ವಿಮೋಚನೆಗಾಗಿ ದಯಪಾಲಿಸಿದವನಾಗಿದ್ದಾನೆ ಎಂದು ಹೇಳುವಾಗ ನೂತನ ಸೃಷ್ಟಿಗಳನ್ನಷ್ಟೇ ಉದ್ಧೇಶಿಸಿ ಹೇಳುವವನಾಗಿದ್ದಾನೆ. ಆದುದರಿಂದ ನಮ್ಮ ಬೋಧನೆಯ ಸಲೂವಾಗಿಯೇ ಬರೆಯಲ್ಪಟ್ಟ ಇವುಗಳಿಗೆ ನಾವು ಅತಂತ ಹೆಚ್ಚಿನ ಮಟ್ಟಿನ ಲಕ್ಷ್ಯ ಕೊಡೋಣ. ಯಾಕೆಂದರೆ, ನಾವು ನಮ್ಮ ಕರೆ ಮತ್ತು ಆಯ್ಕೆಗಳನ್ನು ದೃಢಪಡಿಸಿಕೊಳ್ಳಬೇಕಾದಲ್ಲಿ ಇವುಗಳು ಸ್ಪಷ್ಟವಾಗಿವೆ.

ನಮೂನೆಯ ಇಸ್ರಾಯೇಲ್ಯರಿಗೆ ದೇವರು **“ ನಿಮ್ಮನ್ನು ಶುದ್ಧಮಾಡಿಕೊಳ್ಳಿರಿ''** ಮತ್ತು **“ ನಾನು ನಿಮ್ಮನ್ನು ಶುದ್ಧಿಮಾಡುವೆನು''** (ಯಾಜಕ ೨೦:೭–೮ ಮತ್ತು ವಿಮೋ ೩೧:೧೩ ನೋಡಿರಿ) ಎಂದು ಹೇಳುತ್ತಾನೆ. ಅದೇ ರೀತಿಯಲ್ಲಿ ಆತನು ಆತ್ಮೀಕರಾದ ಇಸ್ರಾಯೇಲ್ಯರನ್ನು ತಮ್ಮನ್ನು ಸಮರ್ಪಿಸಿಕೊಂಡು ಕ್ರಿಸ್ತನ ಪ್ರಾಯಶ್ಚಿತ್ತ ಸಂಧಾನದ ಅರ್ಹತೆಯ ಮೂಲಕ ತಮ್ಮ ದೇಹಗಳನ್ನು ದೇವರಿಗೆ ಸಜೀವ ಯಜ್ಞವನ್ನಾಗಿ ಸಮರ್ಪಿಸಿಕೊಳ್ಳುವಂತೆ ನಿರ್ದೇಶಿಸುತ್ತಾನೆ. ಯಾರು ಇದನ್ನು ಸಮೋಚಿತವಾದ ಸಮಯದಲ್ಲಿ ಮಾಡುತ್ತಾರೋ ಅವರನ್ನು ಮಾತ್ರವೇ ಕರ್ತನು ಕುರಿಮರಿಯ ತನ್ನ ಜೀವಭಾಧ್ಯರ ಪಟ್ಟಿಯಲ್ಲಿ ಸೇರಿಸಿಕೊಳ್ಳುವನು (ಪ್ರಕಟನೆ ೩:೫ ನೋಡಿರಿ) ಮತ್ತು ಪ್ರಭಾವ, ಮಾನ ಮತ್ತು ನಿರ್ಲಯತ್ವದ ಕಿರೀಟವನ್ನು ಹಂಚುವನು. ಅವರು ತಮ್ಮೆಲ್ಲಾ ಕಾರ್ಯಗಳನ್ನಿ ಪ್ರಾಮಾಣಿಕವಾಗಿ ಆತನವರಾಗಿ ಕಂಡು ಬಂದಲ್ಲಿ ಅದು ಅವರ ಪಾಲಾಗುವು ದು (ಪ್ರಕಟನೆ ೩:೧೧ ನೋಡಿರಿ). ಇದುವೇ ವಿವೇಕ ಪೂರ್ವಕವಾದ ಅರಾಧನೆಯು.

ನಮೂನೆಯ ಲೇವಿಯರ ಪ್ರತಿಷ್ಟೆಯು ನೈತಿಕತೆಯನ್ನು ಅನುಸರಿಸುವ ಒಂದು ಅಳೆಯಬಹುದಾದ ಪ್ರತಿಷ್ಟೆಯಾಗಿದ್ದು ಅದು ಸಮರ್ಪಣೆಯ ಪ್ರತಿಷ್ಟೆಯೆನಿಸದು. ಆದುದರಿಂದ ಈ ಪವಿತ್ರಪಡಿಸುವಿಕೆಯ ಮುಂದಿನ ಹೆಜ್ಜೆಯು ರಾಜವಂಶಸ್ಥ ಯಾಜಕವರ್ಗಕ್ಕೆ ದೇವರ ಕರೆಯನ್ನು ಅಂಗೀಕರಿಸಿದವರದ್ದಾಗಿದ್ದು ಈ ನಮೂನೆಯಲ್ಲಿ ಆರೋನ ಮತ್ತು ಆತನ ಮಕ್ಕಳ ಪ್ರತಿಷ್ಟೆಯಲ್ಲಿ ಮತ್ತು ಅವರ ಯಾಜಕೋದ್ಯೋಗದಲ್ಲಿ ಸಂಕೇತಗೊಂಡು ಸಮರ್ಪಣೆಯ ಪ್ರತಿಷ್ಟೆ ಎನಿಸಿದೆ. ಇದು ಬಿಳಿ ನಾರುಮಡಿಯಲ್ಲಿ ಸಂಕೇತಗೊಂಡಿದ್ದು ನೈತಿಕತೆ, ಸಮರ್ಥನೆಯಲ್ಲಿ ಮತ್ತು ಎಲ್ಲಾ ಯಾಜಕರು ಭಾಗವಹಿಸುವ ತೈಲಾಭಿಷೇಕ ಮತ್ತು ಸಮರ್ಪಣೆಗಳಲ್ಲಿ ಪ್ರತಿನಿಧಿಸುತ್ತದೆ (ಇಬ್ರಿಯ ೮:೩ ನೋಡಿರಿ)

ಲೇವಿಯರ ನಮೂನೆಯಲ್ಲಿ ಎರಡು ವಿಧವಾದ ಪ್ರತಿಷ್ಟೆಗಳು ಸ್ಪಷ್ಟವಾಗಿ ಕಂಡುಬರುತ್ತದೆ : (೧) ಎಲ್ಲಾ ಲೇವಿಯರ ಸರ್ವಸಾಮಾನ್ಯ ಪ್ರತಿಷ್ಟೆ (೨) ಯಜ್ಞವನ್ನರ್ಪಿಸುವವರ ಅಥವಾ ಯಾಜಕರ ವಿಶೇಷ ಪ್ರತಿಷ್ಟೆ. ಮೊದಲನೆಯದು ಪವಿತ್ರ ಜೀವಿತಕ್ಕೆ ಮತ್ತು ದೇವರ ವಿಧೇಯತ್ವಕ್ಕೆ ಎಲ್ಲಾ ವಿಶ್ವಾಸಿಗಳು ಮಾಡಿಕೊಳ್ಳುವ ಸಾಮಾನ್ಯ ಪ್ರತಿಷ್ಟೆಯನ್ನು ಪ್ರತಿನಿಧಿಸುತ್ತದೆ. ಇದು ದೇವರ ಕೃಪೆಯಿಂದ ಕ್ರಿಸ್ತನ ಮೂಲಕ ಅವರಿಗೆ 'ನಿತ್ಯಜೀವದ ಸಮರ್ಥನೆ'ಯ ಎಣಿಕೆಯನ್ನು ಮತ್ತು ದೇವರೊಂದಿಗೆ ಸಮಾಧಾನವನ್ನು ನೆರವೇರಿಸುತ್ತದೆ. ಎಲ್ಲಾ ವಿಶ್ವಾಸಿಗಳೂ ಈ ಕಾಲದಲ್ಲಿ ಅರ್ಥಮಾಡಿಕೊಳ್ಳುವುದೂ ಮತ್ತು ಅನುಭವಿಸುವುದು ಇದನ್ನೇ. ಆದರೆ, ಅಪೋಸ್ತಲನು ವಿವರಿಸುವಂತೆ **“ ಶುದ್ಧ ಹೃದಯ, ಒಳ್ಳೇ ಮನಸ್ಸಾಕ್ಷಿ, ನಿಷ್ಕಪಟವಾದ ನಂಬಿಕೆ ಎಂಬಿವುಗಳಿಂದ ಹುಟ್ಟಿದ ಪ್ರೀತಿಯೇ ದೇವ ವಾಕ್ಯೋಪದೇಶದ ಗುರಿಯಾಗಿದೆ''** (೧ ತಿಮೋಥೆ ೧:೫). ಇದು ಹೇಳುವುದೇನೆಂದರೆ, ನಮ್ಮ ಪ್ರಥಮ ಪ್ರತಿಷ್ಟೆಯ ಅನುಸರಣೆಯಲ್ಲಿ ದೇವರು ಪ್ರಸ್ತುತ ಕಾಲದಲ್ಲಿ ಶರತ್ತುಗಳೊಡನೆ ಅದರ ಅನುಸರಣೆಯು ಅದರ ಅಂತ್ಯದಲ್ಲಿ ನಮ್ಮನ್ನು ಸಮರ್ಪಣೆಯ ಯಾಜಕರಾಗುವ ಎರಡನೆಯ ಪ್ರತಿಷ್ಟೆಗೆ ಕೊಂಡೊಯ್ಯುತ್ತದೆಂದು ದೇವರು ಮುಂತಿಳಿದಿದ್ದಾನೆ.

ಇದು ಹೇಗೆ? ಹೇಗೆಂದರೆ, ಪವಿತ್ರ ಜೀವಿತ ಮತ್ತು ದೇವರಿಗೆ ವಿಧೇಯತೆ ಇವುಗಳು ನಮ್ಮ ದೇವರಿಗೆ ಮತ್ತು ನಮ್ಮ ಜೊತೆಮಾನವರಿಗೆ ತೋರಿಸುವ "ಪವಿತ್ರ ಹೃದಯದ ಅಂತರಾಳದಿಂದ ಉಕ್ಕಿ ಬಂದ ಪ್ರೀತಿ"ಯಾಗಿದೆ. ದೇವರಿಗೆ ತೊರಿಸುವ ಪ್ರೀತಿಯೆಂದರೆ " **ನಿನ್ನ ಪೂರ್ಣ ಹೃದಯದಿಂದ, ನಿನ್ನ ಪೂರ್ಣ ಪ್ರಾಣದಿಂದ, ನಿನ್ನ ಪೂರ್ಣ ಬುದ್ದಿಯಿಂದ ಮತ್ತು ನಿನ್ನ ಪೂರ್ಣ ಶಕ್ತಿಯಿಂದ ಪ್ರೀತಿಸುವುದು**" ಅಂಥಾಃ ಪ್ರೀತಿಯು ಅಪ್ಪಣೆಗಳನ್ನು ಕಾಯದೆ " ಕರ್ತನೇ, ನಾನೇನು ಮಾಡಬೇಕೆಂದು ನೀನು ಬಯಸುವಿ? " ಎಂದು ಸೇವೆಗೆ ಮೊರೆಯಿಡುತ್ತದೆ. ಪ್ರತಿಯೊಬ್ಬ ಪ್ರಾಮಾಣಿಕನಾದ 'ನಿಜ ಇಸ್ರಾಯೇಲ್ಯ'ನೂ ಪ್ರಥಮ ಆಗಮನದಲ್ಲಿ ಈ ಪ್ರಾಥಮಿಕ ಪ್ರತಿಷ್ಟೆಯನ್ನು ಹೊಂದಿದ್ದನು. – ಇದು ಲೇವಿಯರಲ್ಲಿ ಸೂಚಿತವಾಯಿತು– ಅಂಥವರಿಗೆ ದೇವರು ಮರಣಪರ್ಯಂತ ಪ್ರತಿಷ್ಟೆಗೊಳ್ಳುವಂತೆ, ಈ ಲೋಕದ ಹಿತಾಸಕ್ತಿಗಳನ್ನು ಪರಲೋಕದವುಗಳಿಗಾಗಿ ತ್ಯಾಗಮಾಡುವಂತೆ ಮತ್ತು ಮಹಿಮೆಯ, ಗೌರವದ ಮತ್ತು ನಿರ್ಲಯತ್ವದ ಇಕ್ಕಟ್ಟಾದ ಹಾದಿಯಲ್ಲಿ ನಮ್ಮ ರಕ್ಷಣೆಯ ನಾಯಕನಾದ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯಲು ಸಾಲಿನಲ್ಲಿ ನಿಲ್ಲುವಂತೆ ವಿಶೇಷ ಕರೆಯನ್ನು ಕೊಟ್ಟನು. ಈ ಕರೆಗೆ ವಿಧೇಯರಾದವರನ್ನು ಯಾಜಕರುಗಳನ್ನಗಿ, ನಮ್ಮ ಉದ್ಯೋಗದ ಮಹಾ ಯಾಜಕನ ದೇಹದ ಅಂಗಗಳಾಗಿ. "ದೇವರ ಮಕ್ಕಳಾಗಿ" (ಯೋಹಾನ ೧:೧೨) ಅಂಗೀಕರಿಸಲಾಯಿತು.

ಸುವಾರ್ತಾಯುಗದ ಸಾದ್ಯಂತವಾಗಿ ಇದೇ ಪದ್ಧತಿಯ ಯೋಜನೆಯು ಸಾಮಾನ್ಯ ಬಳಕೆಯಲ್ಲಿದೆ : (೧) ವಿಧೇಯರಿಗೆ ಮತ್ತು ನೀತಿವಂತರಿಗೆ ಪ್ರತಿಷ್ಟೆ– ಪ್ರತಿರೂಪದ ಲೇವಿಯರಾಗಿ ; ಇದರಿಂದ ನೈತಿಕತೆಯೆಂದರೆ ದೇವರಿಗೆ ತೋರುವ ಪರಮೋನ್ನತವಾದ ಪ್ರೀತಿ ಮತ್ತು ಆತನ ಚಿತ್ತವನ್ನು ಕಂಡುಕೊಳ್ಳುವುದು ಮತ್ತು ಅದರಂತೆ ನಡೆಯುವುದು ಎಂದು ತಿಳಿದುಬರುತ್ತದೆ ; ನಂತರದಲ್ಲಿ ಈಗ ಎಲ್ಲ ಸೃಷ್ಟಿಯನ್ನೂ ಬಾಗಿಸಿ ತಿರುಚಿ ಹಾಕಲಾಗಿದೆ ಮತ್ತು ಅವರು ದೇವರೊಡನೆ ಸಾಮರಸ್ಯದಲ್ಲಿಲ್ಲ . ಯಾಕೆಂದರೆ, ಆತನೊಡನೆ ಸಾಮರಸ್ಯವೆಂದರೆ ನಮ್ಮ ಸ್ವಂತ ದೇಹದಲ್ಲಿಯೂ ಇತರರಲ್ಲಿಯೂ ಇರುವ ಎಲ್ಲಾ ಅನ್ಯೆತಿಕತೆಯೊಂದಿಗೆ ಸಾಮರಸ್ಯವಿಲ್ಲದಿರುವುದು ; ನಂತರ ದೇವರು ನಮ್ಮನ್ನು ಏತಕ್ಕಾಗಿ ಕರೆದನು ಮತ್ತು ನಮ್ಮ ಪ್ರತಿಷ್ಟೆಯನ್ನು ಏತಕ್ಕಾಗಿ ಸ್ವೀಕರಿಸಿದನು ಮತ್ತು ಇನ್ನೂ ಇದನ್ನು ಸ್ವಾರ್ಥತ್ಯಾಗವಿಲ್ಲದೆ ಹೊಂದಿಕೊಳ್ಳಲು ಸಾಧವಿಲ್ಲದಂತೆ ಯಾಕೆ ಮಾಡಿದನು ಎಂದು ತಿಳಿದುಕೊಳ್ಳಲು ದೇವರಿಗೆ ಕೂಗುತ್ತಾ, ಅಳುತ್ತಾ ಮೊರೆ ಇಡುವುದು. ಈ ಮೊರೆಗೆ ಉತ್ತರವಾಗಿ ದೇವರು **"ನೀವೆಲ್ಲರೂ ಒಂದೇ ಪದವಿಯನ್ನು ಹೊಂದುವುದಕ್ಕೆ ಕರೆಯಲ್ಪಟ್ಟವರು"** (ಎಫೆಸ ೪:೪) ಎಂದು ಉಪದೇಶಿಸುತ್ತಾನೆ. ಈ ಕರೆಯು ನಮ್ಮ ಕರ್ತನೊಂದಿಗೆ ದೇವರ ರಾಜ್ಯದ ಪ್ರಭಾವ, ಮಾನ ಮತ್ತು ನಿರ್ಲಯತ್ವಗಳಲ್ಲಿ ಜೊತೆ–ವಾರಸುದಾರಿಕೆಯಾಗಿದೆ (ಲೂಕ ೧೨:೩೨ ಮತ್ತು ರೋಮ ೨:೭ ನೋಡಿರಿ), ಇದರ ಬಾಗಿಲು ಇಕ್ಕಟ್ಟು ಮಾರ್ಗ ಬಿಕ್ಕಟ್ಟು. ಯಾಕೆಂದರೆ ಈ ಶೊಧನೆಗಳನ್ನು ಫಲಪ್ರಧವಾಗಿ ಸಹಿಸಿಕೊಳ್ಳುವುದು ಆತನು ಆ ರೀತಿಯಾಗಿ ಗೌರವಿಸುವವರಿಗೆ ಅತ್ಯವಶ್ಯಕವಾಗಿದೆ (ಮತ್ತಾಯ ೭:೧೪, ರೋಮ ೮:೧೭ ನೋಡಿರಿ). ಅಪೋಸ್ತಲನ ಮೂಲಕ ನಾವು **" ಸಹೋದರೇ, ದೇವರಕನಿಕರವನ್ನು . . . . . ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಸಮರ್ಪಿಸಿರಿ ಇದೇ .ವಿವಿಕ ಪೂರ್ವಕವಾದ ಆರಾಧನೆಯು"** ಎಂಬ ದೇವರ ಕರೆಯನ್ನು ಹೊಂದಿದ್ದೇವೆ. ಮತ್ತು ಇದನ್ನು ಅಂಗೀಕರಿಸಿ ನಮ್ಮನ್ನು **ಪರಣಪರ್ಯಂತ** ಪ್ರತಿಷ್ಟಿಸಿಕೊಂಡಲ್ಲಿ .ನಾವು ರಾಜವಂಶಸ್ಥರಾದ **ಯಾಜಕ**ರೆಂದು , ನಮ್ಮ ಉದ್ಯೋಗದ ಮಹಾ ಯಾಜಕನಾದ ಯೇಸು ಕ್ರಿಸ್ತನಲ್ಲಿ ನೂತನ ಸೃಷ್ಟಿಯ ಸದಸ್ಯರು ಎಂದು ಎಣಿಸಲ್ಪಡುತ್ತೇವೆ.

ಇಂಥಾಃ ವಿಶ್ವಾಸಿಗಳು " ಎಲ್ಲಾ ಕಟ್ಟಳೆಗಳ ಅಂತ್ಯವು ಶುದ್ಧ ಹೃದಯದ ಮೂಲಕವಾದ ಪ್ರೀತಿಯೇ" ಎಂಬ ಗ್ರಹಿಕೆಗೆ ಬಂದ ಮೇಲೆ ಆ ಅಂತ್ಯಕ್ಕೆ ಹೋಗಲು, ತ್ಯಾಗದ ಕರೆಯನ್ನು ಅಂಗೀಕರಿಸಲು ನಿರಾಕರಿಸುತ್ತಾರೆ. ತನ್ಮೂಲಕ ಅವರ ಸಮರ್ಥನೆಯಲ್ಲಿ ದೇವರ ಉದ್ದೇಶವನ್ನು ಮಾನ್ಯಮಾಡಲು ಅಲ್ಲಗಳೆಯುತ್ತಾರೆ. ಈ ರೀತಿಯಾಗಿ ಅವರು ನೈತಿಕತೆಗೆ ವಿಧೇಯತೆ ತೋರುವ ಒಡಂಬಡಿಕೆಯನ್ನು ನೆರವೇರಿಸುವಲ್ಲಿ ಕೊರತೆಯುಳ್ಳವರಾಗುತ್ತಾರೆ. ಇಕ್ಕಟ್ಟಾದ ಮಾರ್ಗದ ಕಾರಣ

ಅವರು “ನಮ್ಮ ಕರೆಯ ಒಂದೇ ನಿರೀಕ್ಷೆಯನ್ನು” ತಿರಸ್ಕರಿಸುತ್ತಾರೆ. ಇಂಥವರು ದೇವರ ಕೃಪೆಯನ್ನು (ನಿತ್ಯಜೀವದ ಸಮರ್ಥನೆಯೆಂಬ ಎಣಿಕೆ) **ವ್ಯರ್ಥವಾಗಿ** ಹೊಂದಿಕೊಂಡಿದ್ದಾರಲ್ಲವೆ? . ನಾವು ಪುರಾತನ ಅರ್ಹರ ಕಡೆಗೆ ಹಿಂತಿರುಗಿ ನೋಡಿ ಅವರಿಗೆ ನಂಬಿಕೆಯ ಮೂಲಕ ಉತ್ತಮ ವರದಿಯನ್ನು ಹೊಂದಿಕೊಳ್ಳಲು ಮತ್ತು ದೇವರನ್ನು ಸಂಪ್ರಿತಿಗೊಳಿಸಲು ಮತ್ತು ಆ ಮೂಲಕ ಸಾಂಗತ್ಯದೊಡನೆ ಸಮರ್ಥನೆಯನ್ನು ಕಾಪಾಡಿಕೊಳ್ಳಲು ( ಇಬ್ರೀಯ ೧೧:೫ ಮತ್ತು ೩೨-೩೯ ನೋಡಿರಿ) ಎಷ್ಟು ಕಿಮ್ಮತ್ತಾಯಿತೆಂದು ಗಮನಿಸುವಾಗ, ನಾವು ಸುವಾರ್ತಾ ಯುಗದಲ್ಲಿ ಲೇವಿಯರ ಪ್ರತಿಸಂಕೇತದವರಿಗೆ ದಯಪಾಲಿಸಲಾಗಿರುವ **‘ನಿತ್ಯಜೀವಕ್ಕಾಗಿ ಸಮರ್ಥನೆ’**ಯನ್ನು ಕರ್ತನಿಗೆ ಮತ್ತು ನೀತಿಗೆ ಕಡಿಮೆ ಮಟ್ಟದ ನಿಷ್ಟೆ ತೋರಿಸುವುದರ ಮೂಲಕ ಕಾಪಾಡಿಕೊಳ್ಳಬಹುದು ಎಂದು ನಾವು ನಿರೀಕ್ಷಿಸಬಹುದೇ? ನಿಜವಾಗಿಯೂ ನಾವು ಯಾರು ನೀತಿನಿರ್ಣಯಪಡೆದ ವಿಶ್ವಾಸಿಗಳು (ಲೇವಿಯರ ಪ್ರತಿಸಂಕೇತಿಗಳು) ಎಂದು ಪರಿಗಣಿಸಲ್ಪಟ್ಟಿದ್ದಾರೋ ಅವರು ಇಗಾಗಲೇ ಪ್ರತಿಷ್ಟೆಗೊಂಡಿರುವ ಶಿಷ್ಯತ್ವದ ಕಿಮ್ಮತ್ತನ್ನು ಲೆಖ್ಖ ಹಾಕಿದಾಗ (ಲೂಕ ೧೪:೨೮-೩೯ ನೋಡಿರಿ) ಅವರು ದೇವರು ವಾಗ್ದಾನ ಮಾಡಿದ ಸಹಾಯಗಳನ್ನು ಕಾರ್ಯಗತಗೊಳಿಸುವುದನ್ನು ಅಲ್ಲಗಳೆಯುತ್ತಾರೆ ಮತ್ತು ತಮ್ಮ ಪ್ರತಿಷ್ಟೆಯನ್ನು ಮರಣದ ಪರ್ಯಂತ ಪೂರ್ಣಗೊಳಿಸಿ ವಿವೇಕಪೂರ್ವಕವಾದ ಆರಾಧನೆಯನ್ನು ನೆರವೇರಿಸಲು ನಿರ್ಲಕ್ಷಿಸುತ್ತಾರೆಂದು ನಾವು ತೀರ್ಮಾನಿಸಬಹುದು. ಇಂಥವರು ಕರ್ತನಿಂದ ಕೃಪೆಯನ್ನು ವ್ಯರ್ಥವಾಗಿ ಹೊಂದಿಕೊಂಡಿದ್ದಾರೆ. ಖಂಡಿತವಾಗಿಯೂ ಅಂಥವರು ನಿತ್ಯಜೀವದ ಸಮರ್ಥನೆಯನ್ನು, ದೇವರೊಂದಿಗೆ ವಿಶೇಷ ಸಹವಾಸದ ಸಮರ್ಥನೆಯನ್ನು ಸಹಾ ಕಾಪಾಡಿಕೊಳ್ಳುವರೆಂದು ಪರಿಗಣಿಸಲಾಗದು. ಆದುದರಿಂದ ಅವರಿಗೆ ದಯಪಾಲಿಸಿದ್ದ ಲೇವಿಯರ ಪ್ರತಿಸಂಕೇತವೆಂಬ ಕೃಪಾ ಸ್ಥಾನದಿಂದ ಕೈಬಿಡಲಾಗುವುದು ಮತ್ತು ಹಾಗೆಂದು ಅವರನ್ನು ಮುಂದೆಂದಿಗೂ ಪರಿಗಣಿಸಲಾಗದು.

ದೇವರ ಕೃಪೆಯನ್ನು ಮೆಚ್ಚಿಕೊಂಡವರಲ್ಲಿ ಯಾರ ಹೃದಯಗಳು ಬಹು ನಿಷ್ಟೆಯಿಂದ ಅದರ ಸೌಕರ್ಯಗಳಿಗೆ ಮತ್ತು ಪೂರ್ಣ ಪ್ರತಿಷ್ಟೆಯ ವಿವೇಕಪೂರ್ವಕವಾದ ಆರಾಧನೆಗೆ ಪ್ರತಿಸ್ಪಂದಿಸುತ್ತವೆಯೋ, ಮತ್ತು ಯಾರು ದೇವರ ವಿಧೇಯತೆ ಮತ್ತು ನೈತಿಕತೆಯ ಒಡಂಬಡಿಕೆಗೆ ಮರಣದ ಪರ್ಯಂತ ಬದ್ಧರೋ ಅಂತವರು ಕೆಳಗಿನ ಎರಡು ವರ್ಗಗಳವರು :-

(೧) ಆ ಪ್ರತಿಸಂಕೇತದ ಲೇವಿಯರು ಕರ್ತನ, ಸಹೋದರರುಗಳ ಮತ್ತು ಸತ್ಯದ ಸೇವೆಮಾಡುವ ಮಾರ್ಗ ಮತ್ತು ವಿಧಾನಗಳನ್ನು ಹುಡುಕುತ್ತಾ, ಸಂತೋಷದಿಂದ ತಮ್ಮ ಜೀವನವನ್ನು ಇಚ್ಛಾಪೂರ್ವಕವಾಗಿ ಅರ್ಪಿಸಲು ಸಿದ್ಧರಾಗಿದ್ದು ಈ ದೆಸೆಯಲ್ಲಿ ತಮ್ಮ ಪ್ರಪಂಚದ ಎಲ್ಲಾ ಸುಖ ಸಂತೋಷಗಳನ್ನು, ಸೌಕರ್ಯ, ಸಮಯ, ಪ್ರಭಾವ ಮತ್ತು ಪ್ರಸ್ತುತ ಜೀವನದ ರಚನೆಗೆ ಕಾರಣವಾದುದೆಲ್ಲವನ್ನು ಧಾರೆಯೆರೆಯುವುದು ಸಂತೋಷ ಮತ್ತು ಗೌರವದ ಕೆಲಸವೆಂದು ಎಣಿಸುತ್ತಾರೆ. ಈ ಸಂತೋಷಭರಿತ, ಇಚ್ಛಾಪೂರ್ವಕ ತ್ಯಾಗಿಗಳು ಮೊದಲು ಇದ್ದ ಈ ಪ್ರತಿಸಂಕೇತದ ಯಾಜಕರುಗಳ ಮಹಿಮೆ ಹೊಂದಿಕೊಳ್ಳುತ್ತಾರೆ ಮತ್ತು ತಮ್ಮ ಕರ್ತನೊಂದಿಗೆ ರಾಜವಂಶಸ್ಥ ಯಾಜಕರುಗಳಾಗಿ ರಚನೆಗೊಳ್ಳುತ್ತಾರೆ. ಅವರ ತ್ಯಾಗವು ಆಗ ಪೂರ್ಣಗೊಳ್ಳುತ್ತದೆ. ಅವರು ಇನ್ನು ಮುಂದೆ ಎಂದಿಗೂ ಜನರಿಗಾಗಿ ಯಜ್ಞಗಳನ್ನು ಸಮರ್ಪಿಸುತ್ತಿದ್ದ ಆರೋನ ಮತ್ತು ಅವರ ಮಕ್ಕಳ ನಮೂನೆಯಾಗುವುದಿಲ್ಲ, ಆದರೆ, ತನ್ನ ಸಿಂಹಾಸನದ ಮೇಲಿನ ಯಾಜಕನಾದ ಮೆಲ್ಕಿಚೇದಕನ ತರಹದವರಾಗಿದ್ದು ಈ ಸುವಾರ್ತಾ ಯುಗದಲ್ಲಿ ಪಾಪ ಪ್ರಾಯಶ್ಚಿತ್ತದ ದಿನ ‘ಉತ್ತಮ ಸಮರ್ಪಣೆಯ’ ಮೂಲಕ ದೊರೆತ ಆಶೀರ್ವಾದಗಳನ್ನು ಧರ್ಮಯುಗದ ಕಾಲದಲ್ಲಿ ಪ್ರಪಂಚಕ್ಕೆ ಹಂಚುವವನಾಗಿದ್ದಾನೆ.

(೨) ಮತ್ತೊಂದು ವರ್ಗದ ವಿಶ್ವಾಸಿಗಳು ತಮ್ಮ ಹೃದಯದಲ್ಲಿ ನಿಷ್ಟೆಯಿಂದ ಪ್ರತಿಸ್ಪಂದಿಸುವವರಾಗಿದ್ದು ಸಂತೋಷದಿಂದ ತಮ್ಮೆಲ್ಲವುಗಳನ್ನು ಕರ್ತನಿಗೆ ಪ್ರತಿಷ್ಟೆಪಡಿಸಿ ಆತನನ್ನು ‘ವಿವೇಕಪೂರ್ವಕವಾಗಿ ಆರಾಧಿಸಿ’ ತಮ್ಮ ಅರ್ಹತೆಯನ್ನು ತನ್ಮೂಲಕ ಪ್ರತಿಪಾದಿಸಿ ತಾವು ಪ್ರತಿಕಂಕೇತದ ಲೇವಿಯರೆಂದು ತೋರಿಸುತ್ತಾರೆ.

ಯಾಕೆಂದರೆ, ಇವರು ದೇವರ ಕೃಪೆಯನ್ನು ವ್ಯರ್ಥವಾಗಿ ಪಡಕೊಂಡವರಲ್ಲ. ಆದರೆ, ಅಯ್ಯೋ! ಅವರು ಕರೆಗೆ ಪ್ರತಿಸ್ಪಂದಿಸಿದರೂ ಮತ್ತು ಆ ಮೂಲಕ ನಮ್ಮ ಕರೆಯ ಒಂದೇ ನಿರೀಕ್ಷೆಗೆ ಮತ್ತು ಆಯ್ಕೆಗೊಂಡವರ ಎಲ್ಲಾ ಸವಲತ್ತುಗಳನ್ನು ಹೊಂದಲು ಬಂದವರಾದರೂ, ಇನ್ನೂ ಅವರ ಪ್ರೀತಿ ಮತ್ತು ಉತ್ಸಾಹಗಳು ಅವರು ಒಡಂಬಡಿಕೆಬದ್ಧವಾಗಿ ಮಾಡಬೇಕಾದ ಸಮರ್ಪಣೆಯನ್ನು ಮಾಡಲು ಪ್ರಚೋದಿಸುವುದಿಲ್ಲ. ಇವರುಗಳು, ಅವರ ಪ್ರೀತಿ ಮತ್ತು ವಿಶ್ವಾಸಗಳು ಮೇಲ್ಮಟ್ಟದ್ದಾಗದಿರುವುದರಿಂದ ತಮ್ಮ ಬಲಿಯನ್ನು ಬಲಿಪೀಠದ ಮೇಲಿಡಲು ಸೋತುಹೋಗುತ್ತಾರೆ ; ಆದುದರಿಂದ ಅವರನ್ನು ದೇವರ ಚಿತ್ತವನ್ನು ಸಂತೋಷದಿಂದ ನೆರವೇರಿಸುವ ನಮ್ಮ ಮಹಾ ಯಾಜಕನ ಪೂರ್ಣ ಪ್ರತಿಗಳೆಂದು ಲೆಕ್ಕಿಸಲಾಗದು. ಅವರು ಜಯಗಳಿಸುವುದರಲ್ಲಿ ವಿಫಲರಾಗಿರುವುದರಿಂದ ಅವರನ್ನು ರಾಜವಂಶಸ್ಥರಾದ ಯಾಜಕರಾಗಿ ಕರ್ತನೊಂದಿಗೆ ಪರಲೋಕರಾಜ್ಯದಲ್ಲಿ ಪಾಲುತೆಗೆದುಕೊಳ್ಳುವ 'ಜಯಶಾಲಿ'ಗಳೆಂದು ಎಣಿಕೆ ಮಾಡಲು ಸಾಧ್ಯವಿಲ್ಲ ; ಅವರು ತಮ್ಮ ಕರೆ ಮತ್ತು ಆಯ್ಕೆಯನ್ನು ತಮ್ಮ ಒಡಂಬಡಿಕೆಯೊಂದಿಗೆ ಪೂರ್ಣ ಅನುನಯವಾಗಿ ಖಚಿತಪಡಿಸಿಕೊಳ್ಳಲು ವಿಫಲರಾಗಿದ್ದಾರೆ.

ಆದರೆ, ಇವರುಗಳ ಬಗ್ಗೆ ಏನು? ಇವರು ವಿವೇಚನಾಪೂರ್ವಕವಾಗಿ ಬಹುಮಾನಕ್ಕಾಗಿ ಓಡುವ ಓಟವನ್ನು ಕಳಕೊಂಡಿದ್ದಾರೋ? ಮತ್ತು ಅದನ್ನು ಗೆಲ್ಲಲು ಬೇಕಾದ ಉತ್ಸಾಹ ಮತ್ತು ಪ್ರೀತಿಯನ್ನು ತಲಪುವಲ್ಲಿ ಸೋತು ಹೋಗಿದ್ದಾರೋ? ಇಲ್ಲ, ದೇವರ ನಾಮಕ್ಕೆ ಸ್ತೋತ್ರವಾಗಲಿ! ನಿರ್ಣಾಯಕ ಪರೀಕ್ಷೆಗಳಲ್ಲಿಯೂ ಸಹಾ ಅವರ ವಿಶ್ವಾಸ ಮತ್ತು ಉತ್ಸಾಹವು ಅವರನ್ನು ಯಾಜಕರೆಂದು ವರ್ಗೀಕರಿಸಲು ವಿಫಲವಾಗಿವೆ. ಆದಾಗ್ಯೂ, ಅವರಲ್ಲಿನ ಸಾಕಾಗುವಷ್ಟು ವಿಶ್ವಾಸ, ಮರಣದವರೆಗಿನ ಏಕಾಗ್ರತೆ ಅವರ ಹೃದಯದ ನಿಷ್ಠೆಯನ್ನು ಲೇವಿಯರಂತೆ ನಿರೂಪಿಸಿದೆ. ಹೀಗಿದ್ದಾಗ್ಯೂ ಅವರು ಪೂರ್ಣ ಪ್ರತಿಷ್ಠೆಗೊಳ್ಳಲು ಇವು ಸಾಕಾಗುವುದಿಲ್ಲ ; ದೇವರ ಸೇವೆಯಲ್ಲಿ ತಮ್ಮನ್ನು ಸಮರ್ಪಿಸಿಕೊಳ್ಳಲು ಸಾಕಷ್ಟು ನಿಷ್ಠೆ ಇಲ್ಲದವರಾದರೂ ಅವರು ತಮ್ಮ ಹೃದಯದಲ್ಲಿ ದೇವರನ್ನು ಪ್ರೀತಿಸುತ್ತಾರೆ ಮತ್ತು ಯಾವ ಕಾರಣಕ್ಕೂ ಆತನನ್ನು ನಿರಾಕರಿಸುವುದಿಲ್ಲವೆಂದು ನಿರೂಪಿಸಬೇಕು. ದೇವರ ರಾಜ್ಯದ ಅಧೀನದಲ್ಲಿ ಇವರನ್ನು ಲೇವಿಯರ ಭಾಗಕ್ಕೆ ಅರ್ಹರೆಂದು ದೃಢಪಡಿಸುವ ಪರೀಕ್ಷೆ ಯಾವುದು? ಇದನ್ನು ಇವರಿಗೆ ಅನ್ವಯಿಸುವುದು ಹೇಗೆ?

ನಾವೀಗಾಗಲೇ ಕರ್ತನ ನಿಜವಾದ ಪ್ರತಿಷ್ಠೆಹೊಂದಿದ ಜನರ ಬಗ್ಗೆ ಪ್ರಕಟನೆ ೭:೧೪-೧೫ ರಲ್ಲಿ ಹೇಳಿರುವಂತೆ ಗವನಿಸಿದ್ದೇವೆ. ಅದೇನೆಂದರೆ " **ಇವರು ಮಹಾ ಹಿಂಸೆಯನ್ನು ಅನುಭವಿಸಿ ಬಂದವರು ; ಯಜ್ಞದ ಕುರಿಯದಾತನ ರಕ್ತದಲ್ಲಿ ತಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ. ಈ ಕಾರಣದಿಂದ ಅವರು ದೇವರ ಸಿಂಹಾಸನದ ಮುಂದೆ ಇದ್ದುಕೊಂಡು (ಅದರಲ್ಲಿ ಅಲ್ಲ) ಆತನ ಆಲಯದಲ್ಲಿ** (ದೇವಾಲಯದಲ್ಲಿ) **ಹಗಲಿರುಳು** (ನಿರಂತರವಾಗಿ**) ಆತನ ಸೇವೆ ಮಾಡುತ್ತಾ ಇದ್ದಾರೆ ; ಸಿಂಹಾಸನದಲ್ಲಿ ಕೂತಿರುವಾತನು ಗುಡಾರದಂತೆ ಅವರನ್ನು ಆವರಿಸುವನು** (ಆತನು ತನ್ನನ್ನೂ ತನ್ನ ಮಹಿಮೆಯುಳ್ಳ ವಧುವನ್ನು ಆತ್ಮಿಕ ಪರಿಸ್ಥಿತಿ ಮತ್ತು ಸೇವೆಯಲ್ಲಿ ಅವರ ಸಹವಾಸಕ್ಕೆ ಸೇರಿಸುವನು)**". "**ಮೂರ್ಖ ಕನ್ಯೆಯರು !" ಅವರು ತಾವೂ ಮದಲಗಿತ್ತಿ ಸದಸ್ಯರಾಗುವ ಅವಕಾಶವನ್ನು ಕಳಕೊಂಡರು ; ಆದರೆ, ಹೀಗಿದ್ದಾಗ್ಯೂ ಅವರು **ಕನ್ಯೆಯರು,** ತಮ್ಮ ಹೃದಯದ ಉದ್ದೇಶಗಳಲ್ಲಿ ಅವರು ನಿಷ್ಕಳಂಕರು. ಅವರು ತಮ್ಮ **ಬಹುಮಾನ**ವನ್ನು ಕಳಕೊಂಡರು. ಆದರೆ ನಂತರದಲ್ಲಿ ಕ್ಲಿಷ್ಟಕರ ಪರೀಕ್ಷೆಗಳ ಮೂಲಕ ಮದುಮಕ್ಕಳೊಂದಿಗೆ ಮದುವೆಯ ಔತಣದಲ್ಲಿ ಭಾಗವಹಿಸುವ ಅವಕಾಶವನ್ನು ಪಡಕೊಳ್ಳುತ್ತಾರೆ – **" ಆಕೆಯು ಬೂಟೇದಾರೀ ಕಸೂತಿಕೆಲಸದ ವಸ್ತ್ರಗಳನ್ನು ಧರಿಸಿಕೊಂಡು ಸಖಿಯರಾದ ಕನ್ಯೆಯರ ಪರಿವಾರದೊಡನೆ ಅರಸನ ಬಳಿಗೆ ಬರುವಳು"** (ಕೀರ್ತನೆ ೪೫:೧೪). ಲೇವಿಯರಂತೆ ಅವರು ಸಹಾ ರಾಜವಂಶಸ್ಥರಾದ ಯಾಜಕೋದ್ಯೋಗದ ಬಹುಮಾನವನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. , ಆದರೆ ಇನ್ನೂ ಲೇವಿಯರಾಗಿ ಆತನ ಮಹಿಮಾ ಮಂದಿರದಲ್ಲಿ, ಅವರು ಅದರ ಕಂಬವಾಗಲೀ

ಜೀವವುಳ್ಳ ಕಲ್ಲುಗಳಾಗಲೀ ಅಲ್ಲವಾದರೂ ಆ ದೇವಾಲಯದಲ್ಲಿ ದೇವರ ಸೇವೆ ಮಾಡಬಹುದಾಗಿದೆ (ಪ್ರಕಟನೆ ೩ :೧೨, ೧೯:೬,೭ ಮತ್ತು ಕೀ ೪೫:೧೪,೧೫ ನೋಡಿರಿ). ಎರಡನೆಯ ಹೇಳಿಕೆಯನ್ನು ಅನುಸರಿಸುವ ವಾಕ್ಯವು ಇಸ್ರಾಯೇಲ್ಯರಿಗೆ ದೈಹಿಕ ರೀತಿಯಲ್ಲಿ ಪಿತೃಗಳು ಎಂದು ತಿಳಿದಿದ್ದ ಹಿಂದಿನ ಕಾಲದ ಲೇವಿಯ ಪ್ರತಿಸಂಕೇತದವರ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಅವರನು ಇಡೀ ಲೋಕದ ರಾಜಕುಮಾರರನ್ನಾಗಿ ಮಾಡಲಾಗುವುದು ಎಂಬ ಭರವಸವನ್ನು ಮೂಡಿಸುತ್ತದೆ.

ಅದೇ ರೀತಿಯಲ್ಲಿ, ಲೇವಿಯ ಮೂರು ಮಕ್ಕಳಾದ ಗೆರ್ಷೋನ್, ಕೆಹಾತ್ ಮತ್ತು ಮೆರಾರಿ ಇವರುಗಳು ನಾಲ್ಕು ವರ್ಗಗಳನ್ನು ಪ್ರತಿನಿಧಿಸುವಂತೆ ತೋರಿಬರುತ್ತದೆ: (೧) ಮೋಶೆ, ಆರೋನ ಮತ್ತು ಗುಡಾರದ ಮುಂದೆ ಪೂರ್ವದಿಕ್ಕಿನಲ್ಲಿ ವಾಸಿಸುತ್ತಿದ್ದ ಅಮ್ರಾಮ್‌ನ(ಕೆಹಾತ್‌ನ ಮಗ)ಎಲ್ಲಾ ಯಾಜಕ ಕುಟುಂಬಗಳು. ಇವರುಗಳ ವಶದಲ್ಲಿ ಎಲ್ಲಾ ಧಾರ್ಮಿಕ ಸಂಗತಿಗಳೂ ಇದ್ದವು – ಅವರ ಸಹೋದರರುಗಳು– ಎಲ್ಲಾ ಲೇವಿಯರೂ ಅವರ ಗೌರವ ಸಹಾಯಕರು ಅಥವಾ ಸೇವಕ ರಾಗಿದ್ದರು. (೨) ದಕ್ಷಿಣ ದಿಕ್ಕಿನಲ್ಲಿ ಕೆಹಾತ್‌ನ ಕುಟುಂಬದವರು ಮತ್ತು ಅವರ ಸಮೀಪ ಬಂಧುಗಳು ಮುಕ್ಕಾಂ ಮಾಡಿದ್ದರು. ಇವರುಗಳ ವಶದಲ್ಲಿ ಬಹಳ ಪವಿತ್ರ ವಸ್ತುಗಳಾದ ಬಲಿಪೀಠಗಳು, ದೀಪಸ್ಥಂಭಗಳು, ಮೇಜುಗಳು ಮತ್ತು ಮಂಜೂಷ (೩) ದೇವದರ್ಶನ ಗುಡಾರದ ಉತ್ತರ ದಿಕ್ಕಿನಲ್ಲಿ ಮೆರಾರಿ ಕುಟುಂಬದ ಲೇವಿಯರು ಮೊಕ್ಕಾಂ ಮಾಡಿದ್ದರು. ಅವರು ಸೇವಾ ಕಾರ್ಯದಲ್ಲಿ ಎರಡನೆಯ ಗೌರವ ಸ್ಥಾನದಲ್ಲಿದ್ದರು. ಇವರ ವಶದಲ್ಲಿ ಚಿನ್ನದ ಹೊದಿಕೆಯಿದ್ದ ಹಲಗೆಗಳು, ಗುಡಾರದ ಚೌಕಟ್ಟುಗಳು, ಅಗಳಿಗಳು ಮುಂತಾದವುಗಳು ಇರುತ್ತಿದ್ದವು (೪) ದೇವದರ್ಶನ ಗುಡಾರದ ಹಿಂಬಾಗ (ಪಶ್ಚಿಮ) ಭಾಗದಲ್ಲಿ ಗೆರ್ಷೋನ್ ಕುಟುಂಬದ ಲೇವಿಯರು ಮೊಕ್ಕಾಂ ಮಾಡಿದ್ದರು. ಅವರ ವಶದಲ್ಲಿ ಕನಿಷ್ಟ ಸೇವೆಗಳು ಅಂದರೆ ದೇವದರ್ಶನ ಗುಡಾರದ ಬಟ್ಟೆಗಳನ್ನು, ಗುಡಾರದ ಮೇಲಣ ಕಡಲು ಹಂದಿಯ ತೊಗಲಿನ ಹೊದಿಕೆ ಇತ್ಯಾದಿಗಳನ್ನು ಹೊರುವುದು.

ಈ ಭಿನ್ನವಾದ ಲೇವಿಯ ಕುಟುಂಬಗಳು ಪಾಪ ಪ್ರಾಯಶ್ಚಿತ್ತ ಸಂಧಾನವು ಮುಗಿದ ಮೇಲೆ **ಸಮರ್ಥನೆಗೊಂಡ** ಮಾನವ ಕುಲದ ನಾಲ್ಕು ವೈಶಿಷ್ಟ್ಯಪೂರ್ಣ ವರ್ಗಗಳನ್ನು ಪ್ರತಿನಿಧಿಸುತ್ತವೆ ; ಸಂತರು ಅಥವಾ ರಾಜವಂಶಸ್ಥರಾದ ಯಾಜಕರುಗಳು, ಪುರಾತನ ಯೋಗ್ಯರು, "ಮಹಾ ಸಮೂಹ"ದವರು ಮತ್ತು ಪ್ರಪಂಚದಿಂದ ಉದ್ಧಾರಗೊಂಡವರು. ನಮನೆಗಳಿಗೆ ಸಾಮಾನ್ಯವಲ್ಲದಂತೆ ಹೆಸರುಗಳು ಅರ್ಥಗರ್ಭಿತವಾಗಿರುವಂತೆ ಕಂಡುಬರುತ್ತವೆ : (೧) ಅಮ್ರಾನನ ಕುಟುಂಬವು ಯಾಜಕರಾಗಲು ನೇಮಿಸಲ್ಪಟ್ಟವರು. **ಅಮ್ರಾಮ್** ಎಂಬುದು 'ಶ್ರೇಷ್ಟ ಜನರು' ಅಥವಾ 'ಘನತೆ ಹೊಂದಿದವರು' ಎಂಬ ಅರ್ಥಕೊಡುತ್ತದೆ. ಕ್ರಿಸ್ತನೇ ಶಿರಸ್ಸಾಗಿರುವ 'ಚಿಕ್ಕಹಿಂಡಿ'ಗೆ ಇದು ಎಷ್ಟೋ ಸೂಕ್ತವಾದ ಹೆಸರು! 'ಶ್ರೇಷ್ಟಮಟ್ಟಕ್ಕೆ ಏರಿಸಲ್ಪಟ್ಟವರು'ಅಥವಾ 'ಬಹಳ ಮೇಲ್ಪಟ್ಟದವರು' ಎಂಬುದು ಈ ಯಾಜಕರುಗಳ ಬಗ್ಗೆ ದೇವರ ವಾಕ್ಯದಲ್ಲಿಮಾಡಿರುವ ಘೋಷಣೆಗಳಾಗಿವೆ. (೨) **'ಕೆಹಾತ್'** ಎಂಬುದು 'ಸಂಬಂಧ' ಅಥವಾ 'ಮೈತ್ರಿ'ಯನ್ನು ಸೂಚಿಸುತ್ತದೆ. ಈ ಕೆಹಾತ್‌ನ ಕುಟುಂಬದಿಂದಲೇ ಅಮ್ರಾಮ್‌ನ ಮಕ್ಕಳು ನೂತನ ಗೃಹ ಯಾಜಕರಾಗಿ ಆರಿಸಲ್ಪಟ್ಟಿದ್ದಾರೆ. ಲೇವಿಯರ ಕೆಹಾತ್ಯ ಕುಟುಂಬವು ಈ ಕಾರಣದಿಂದ ಯೋಗ್ಯವಾದ ರೀತಿಯಲ್ಲಿ ಪುರಾತನ ಯೋಗ್ಯರನ್ನು ಪ್ರತಿಸಿಧಿಸುತ್ತದೆ. ಅವರ ವಿಶ್ವಾಸ, ವಿಧೇಯತೆ, ದೇವರಿಗೆ ನಿಷ್ಟೆ ಮತ್ತು ನೀತಿಗಾಗಿ ಶ್ರಮಪಡುವ ಇಚ್ಛೆ ಇವುಗಳು ಸಂಪೂರ್ಣವಾಗಿ ಪ್ರಮಾಣಿಕರಿಸಲ್ಪಟ್ಟಿವೆ ಮತ್ತು ಇವರೊಡನೆ ನಾವು ನಿಕಟ ಸಂಬಂಧವನ್ನು ಅನುಭವಿಸುತ್ತೇವೆ. ಅವರು ನಿಜವಾಗಿಯೂ ನಮ್ಮ ಮತ್ತು ದೇವರ ಸಂಬಂಧಿಗಳಾಗಿದ್ದಾರೆ ; ಅವರು ಕೆಲವು ರೀತಿಯಲ್ಲಿ ಇತರರಿಗಿಂತ ಹೆಚ್ಚಾಗಿ ಕ್ರಿಸ್ತನಿಗೆ ಸಮೀಪವಾಗಿದ್ದಾರೆ. (೩) **'ಮೆರಾರಿ'** ಎಂಬುದು **'ಕಟುತ್ವ'** ಅಥವಾ **'ತೀಕ್ಷಣತೆ'** ಯನ್ನು ಸೂಚಿಸುತ್ತದೆ. ಆದುದರಿಂದ ಲೇವಿಯರ ಈ ಮೆರಾರಿ ಕುಟುಂಬವು ಆತ್ಮನು ಪಡಕೊಂಡ **'ಮಹಾ ಸಮೂಹ'** ವನ್ನು ಪ್ರತಿನಿಧಿಸುತ್ತದೆ. ಇವರು ರಾಜ ವಂಶಸ್ಥರಾದ ಯಾಜಕರ ಬಹುಮಾನವನ್ನು ಗೆದ್ದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಆದರೆ ಮಹಾ ಹಿಂಸೆಯನ್ನನುಭವಿಸಿ ಬಂದವರೂ ಮತ್ತು 'ಬೆಂಕಿಯಿಂದ ರಕ್ಷಿಸಲ್ಪಟ್ಟವರೂ' ಆಗಿದ್ದಾರೆ. ಈ ರೀತಿಯಲ್ಲಿ ಅವರು ಗೌರವದ ಮತ್ತು ಸೇವಾಸ್ಥಾನವನ್ನು ಬಹು ಶ್ರಮೆಪಡುವುದರ ಮೂಲಕ ವಹಿಸಿಕೊಂಡಿದ್ದಾರೆ. (೪) **'ಗೆರ್ಷೋಮ್''** ಎಂಬುದು '

**‘ನಿರಾಶ್ರಿತರು’** ಅಥವಾ **‘ಉದ್ಧರಿಸಲ್ಪಟ್ಟವರು’’** ಎಂಬುದನ್ನು ಸೂಚಿಸುತ್ತದೆ ; ಆದುದರಿಂದ, ಲೇವಿಯರ ಗೆರ್ಷೋಮ್ ಕುಟುಂಬದವರು ಮಾನವ ಕುಟುಂಬದ ರಕ್ಷಣೆ ಹೊಂದಿದ ಲೋಕದವರನ್ನು ಉತ್ತಮವಾಗಿ ಪ್ರತಿನಿಧಿಸುತ್ತಾರೆ. ಇವರೆಲ್ಲರೂ ಕುರುಡುತನ ಮತ್ತು ಸೈತಾನನ ದಾಸತ್ವದಿಂದ ಬಿಡಿಸಲ್ಪಟ್ಟವರು, ರಕ್ಷಿಸಲ್ಪಟ್ಟವರೂ ಆಗಿದ್ದಾರೆ.

ಆದುದರಿಂದ, ಈ ಪ್ರತಿಸಂಕೇತಿಕರಾದ ಲೇವಿಯರಲ್ಲಿ ಪ್ರಥಮ ಶ್ರೇಣಿಯಲ್ಲಿರುವವರು ‘ನೀತಿನಿರ್ಣಯ ಹೊಂದಿದವರು’ ಅಥವಾ ‘ಸಮರ್ಥನೆಗೊಂಡವರು’. ಅವರು ರಾಜವಂಶಸ್ಥ ಯಾಜಕರುಗಳೂ ಆಗಿದ್ದಾರೆ ಮತ್ತು ಧರ್ಮಯುಗದ ರಾಜ್ಯ ಮತ್ತು ಎಲ್ಲಾ ಹಿತಾಸಕ್ತಿಗಳೂ ಅವರ ಜವಾಬ್ದಾರಿಕೆಗೆ ಒಪ್ಪಿಸಲ್ಪಟ್ಟಿವೆ. ಆವರ ಬಲಗಡೆಯಲ್ಲಿ‌ಾತಿ ಸಮೀಪ ಬಂಧುಗಳಾದ ಪುರಾತನ ಯೋಗ್ಯರು ಇದ್ದು ಇವರುಗಳನ್ನು ಈ ಲೋಕದಲ್ಲೆಲ್ಲಾ ರಾಜಕುಮಾರರುಗಳನ್ನಾಗಿ ಮಾಡಲಾಗುವುದು. ಅವರ ಎಡಗಡೆಯಲ್ಲಿ ಪ್ರಮಾಣಿಕ ಸಹೋದರರ ‘ಮಹಾ ಸಮೂಹ’ವಿರುತ್ತದೆ*. ಎಲ್ಲರಿಗಿಂತ ಕಡೆಯಲ್ಲಿ ಧರ್ಮಯುಗದಲ್ಲಿ ಪಾಪ ಮತ್ತು ಮರಣಗಳಿಂದ ಬಿಡುಗಡೆಹೊಂದು ರಕ್ಷಿಸಲ್ಪಟ್ಟವರು ಇದ್ದಾರೆ. ಇವರ ನಿಷ್ಠೆಯು ಧರ್ಮಯುಗವು ಅಂತ್ಯಗೊಂಡಾಗ ನಡೆಯುವ ಮಹಾ ಪರೀಕ್ಷೆಯಲ್ಲಿ ಪ್ರಮಾಣೀಕರಿಸಲ್ಪಡುತ್ತದೆ (ಪ್ರಕಟನೆ ೭–೯ ನೋಡಿರಿ).

ಲೇವಿಯರ ಈ ಎಲ್ಲಾ ವರ್ಗದವರು ತಮ್ಮ ಎಲ್ಲಾ ಪರೀಕ್ಷೆಗೊಳಗಾಗಿದ್ದಾರೆ ಮತ್ತು **‘ಹೃದಯ ನಿಷ್ಠೆ’** ಯ ಪರೀಕ್ಷೆಯನ್ನು ಎದುರಿಸಿದ್ದಾರೆ. ನಂಬಿಕೆಯ ಮೂಲಕ ನೀತಿವಂತರೆಂದು ಲೋಕದವರಿಗಿಂತ ಮುಂಚೆಯೇ ನಿರ್ಣಯಿಸಲ್ಪಟ್ಟಿದ್ದು, ನಂತರ ಕಟ್ಟಳೆಗಳ ಅಂತ್ಯವಾದ ‘ ಪರಿಶುದ್ಧ ಹೃದಯದ ಮೂಲಕವಾದ ಪ್ರೀತಿ’ ಎಂಬುದನ್ನು ನೆರವೇರಿಸುವುದನ್ನು ನಿರ್ಲಕ್ಷಿಸುತ್ತಾರೋ ಅಥವಾ ನಿರಾಕರಿಸುತ್ತಾರೋ , ಮತ್ತು ಅ ಕಾರಣ ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂದಿಕೊಳ್ಳುತ್ತಾರೋ ಅವರಿಗೆ ಮುಂದೆ ಅವಕಾಶವಿರುವುದಿಲ್ಲ ಎಂಬ ಅಭಿಪ್ರಾಯವನ್ನು ಇದು ಹೇಗೂ ನೀಡುವುದಿಲ್ಲ. ಅವರು ಕೊಡುಗೆಯನ್ನು ನಿರಾಕರಿಸಿದ್ದ ಸಮರ್ಪಣೆಯೆಂಬ ಯಾಜಕ ಸೇವೆಯ ಕಿಮ್ಮತ್ತನ್ನು ಲೆಕ್ಕಕ್ಕೆ ಹಿಡಿದು, ದೇವರಿಗೆ ಅವರ ‘ವಿವೇಕಪೂರ್ವಕವಾದ ಆರಾಧನೆಯ’ ಅಂದಾಜು ಖಂಡಿತವಾಗಿಯೂ ಮೆಚ್ಚತಕ್ಕದ್ದಲ್ಲ ಮತ್ತು ಬಹುಮಾನ ಪಡೆದುಕೊಳ್ಳತಕ್ಕದ್ದಲ್ಲ, ಅವರ ಬುದ್ಧಿಹೀನತೆಯು ನ್ಯಾಯವಾದ ಶಿಕ್ಷೆಗೆ ಅರ್ಹವಾಗುವುದಿಲ್ಲ ; ಇಲ್ಲವಾದಲ್ಲಿ ಮಹಿಮೆ, ಗೌರವಕ್ಕೆ ಮತ್ತು ನಿರ್ಲಯತ್ವಕ್ಕೆ ನೀಡಿದ ಕರೆಯು ಕೃಪೆಯದಲ್ಲ, ಆದರೆ ಅವಶ್ಯಕತೆಯದು – ಅಹ್ವಾನವಲ್ಲ ಆದರೆ ಅಪ್ಪಣೆ – ತ್ಯಾಗವಲ್ಲ ಹಂಗು. ಅವರ ಸಮರ್ಥನೆಯ ತೀರುವಿಕೆ ಅಥವಾ ವರ್ಜನೆಯು ಅವರನ್ನು ಇನ್ನೂ ವಿಮೋಚನೆಗೊಂಡ ಪ್ರಪಂಚದವರನ್ನಾಗಿ, ಅವರನ್ನು ಸರಿಯಾದುದನ್ನು ಮಾಡುವ ಜವಾಬ್ದಾರಿಯ ಹೆಚ್ಚಳದ ಹೊರತಾಗಿ ಕ್ರಿಸ್ತನನ್ನು ವಿಶ್ವಾಸದ ಮೂಲಕ ಅಂಗೀಕರಿಸುವ ಮುನ್ನ ಇದ್ದಂತೆಯೇ ಇಡುತ್ತದೆ. ಬೇರೆ ಮಾತುಗಳಲ್ಲಿ, ಈಗಿನ ಕಾಲದ ನಿತ್ಯಜೀವ ಅಥವಾ ನಿತ್ಯಮರಣದ ಪರೀಕ್ಷೆಯು ತಮ್ಮನ್ನು ಮರಣದ ಪರ್ಯಂತ ಇಚ್ಛಾಪೂರ್ವಕವಾಗಿ ಕರ್ತನಿಗೆ ಪೂರ್ಣಪ್ರತಿಷ್ಠೆ ಮಾಡಿಕೊಳ್ಳುವವರನ್ನು ಮಾತ್ರವೇ ಒಳಗೊಂಡಿದೆ. ಜನಾಂಗದ ಶೇಷ ಭಾಗದವರು ಇನ್ನೂ ನಿತ್ಯಜೀವ ಅಥವಾ ನಿತ್ಯಮರಣದ ತೀರ್ಪಿಗಾಗಿ ಇಲ್ಲ ಮತ್ತು ಧರ್ಮಯುಗವು ಸ್ಥಪಿತವಾಗುವರೆಗೂ ಅವರು ಅದರಲ್ಲಿ ಇರುವುದಿಲ್ಲ. ಅದೇ ವೇಳೆಯಲ್ಲಿ, ಹೇಗೂ ಪ್ರಪಂಚದ ಪ್ರತಿಯೊಬ್ಬನು ಆತನ ಬೆಳಕಿನ ಅನುಪಾತಕ್ಕನುಗುಣವಾಗಿ, ಗುಣ–ನಡತೆಯನ್ನು ಹಾಳುಮಾಡಿಕೊಳ್ಳುವ ಅಥವಾ ಬೆಳಿಸಿಕೊಳ್ಳುವಲ್ಲಿ ಮತ್ತು ಆ ರೀತಿಯಲ್ಲಿ ತನ್ನ ಧರ್ಮಯುಗದ ಸ್ಥಿತಿಯನ್ನು ಮತ್ತು ನಿತ್ಯ ಜೀವದ ಪ್ರತೀಕ್ಷೆಯನ್ನು ಕೆಟ್ಟದ್ದಾಗಿಸುವ ಅಥವಾ ಉತ್ತಮಗೊಳಿಸುವಲ್ಲಿ ಆತನು ತನ್ನ ಜ್ಞಾನ ಮತ್ತು ಮನಸ್ಸಾಕ್ಷಿಗೆ ವಿಧೇಯನಾಗುತ್ತಾನೆ ಇಲ್ಲವೇ ತಾತ್ಸಾರ ಮಾಡುವವನಾಗಿದ್ದಾನೆ.

---

* ಧರ್ಮಯುಗದಲ್ಲಿ ಪುರಾತನ ಯೋಗ್ಯರು ಮಹಾ ಸಮೂಹದವರಿಗಿಂತ ಮುಂಚಿನವರಾಗದೆ ಅವರಿಗಿಂತ ಕೇಳಗಿನವರಾಗುತ್ತಾರೆ ಆದರೆ ಅದರ ಅಂತ್ಯದಲ್ಲಿ ಅವರನ್ನು ಆತ್ಮಿಕ ಸ್ವಭಾವಕ್ಕೆ ಮತ್ತು ಹೆಚ್ಚಿನ ಗೌರವಕ್ಕೆ ಸ್ವೀಕರಿಸಲಾಗುವುದೆಂದು ದೇವರ ವಾಕ್ಯಗಳಲ್ಲಿ ಕಂಡು ಬರುತ್ತದೆಂಬುದು ಲೇಖಕನ ನಂತರದ ಆಲೋಚನೆಯಾಗಿದೆ.

ಆದಾಗ್ಯೂ. ಪೂರ್ಣ ಪ್ರತಿಷ್ಠೆ ಹೊಂದಿದವರ ಬಗ್ಗೆ ವಿಷಯವು ಬೇರೆಯಾಗಿದೆ. ಪರಾಣದ ಪರ್ಯಂತದ ಅವರ ಪೂರ್ಣವಾದ ಪ್ರತಿಷ್ಠೆಯಿಂದಾಗಿ ಅವರು ಲೌಕಿಕ ಜೀವನವನ್ನು ಸಂಪೂರ್ಣವಾಗಿ ನಿರಾಕರಿಸುತ್ತಾರೆ ಮತ್ತು ಅದನ್ನು ಅತ್ಮೀಕ ಸಂಗತಿಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾರೆ ಮತ್ತು ಅವರು ಮರಣಪರ್ಯಂತ ಪ್ರಾಮಾಣಿಕರಾಗಿದ್ದಲ್ಲಿ ಅದು ಅವರದ್ದಾಗುವುದು ಇಲ್ಲವಾದಲ್ಲಿ ಇಲ್ಲ. ಆದುದರಿಂದ, ಅವರಿಗೆ ನಿಷ್ಟೆಯಿಲ್ಲದಿರುವಿಕೆ ಎಂದರೆ ಶಾಶ್ವತವಾದ ಮರಣವು ; ಇದು ಧರ್ಮಯುಗದ ಅಂತ್ಯದಲ್ಲಿ ಅಪ್ರಮಾಣಿಕರಿಗಾಗುವಂತೆ.

ಲೇವಿಯರಲ್ಲಿ ಯರೊಬ್ಬರಿಗೂ ಕಾನಾನಿನಲ್ಲಿ ಪಿತ್ರಾರ್ಜಿತ ಬಾಧ್ಯತೆಗಾಳ್ಯಾವುದೂ ಇರಲಿಲ್ಲ. ಕರ್ತನಿಗೆ ಎಲ್ಲವನ್ನು ಸಮರ್ಪಿಸಿದ ಮೇಲೆ, ಹೃದಯದಲ್ಲಿ ನೈತಿಕತೆಯ ಅನುಸಾರವಗಿದ್ದಲ್ಲಿ ಈಗಿನ ಕಾಲದ ಅಸಮರ್ಪಕ ಸಂಗತಿಗಳಿಗೆ ಅವರು **ಬಾಧ್ಯರಾಗುವುದಿಲ್ಲ** ಎಂಬ ಸತ್ಯವನ್ನು ಇದು ವ್ಯಕ್ತಪಡಿಸುತ್ತದೆ. **ಕಾನಾನ್** ದೇಶವು ಒಂದು ತಾಪತ್ರಯ ದೇಶದ ಘರ್ಷಣೆಯ ಪರಿಸ್ಥಿತಿಯನ್ನು ಪ್ರತಿನಿಧಿಸುತ್ತದೆ ; ಶತ್ರುಗಳನ್ನು ಜಯಿಸುವುದು, ಕೆಡಕರನ್ನು ಸೋಲಿಸುವುದು ಇತ್ಯಾದಿ. ಆದರೆ ದೇವರು ಉತ್ತಮವಾದ, ಆತನು ಲೇವಿಯರ ಪ್ರತಿಸಂಕೇತವೆಂದು ಸಮರ್ಥಿಸಿದ ಎಲ್ಲರಿಗೂ ಪಾಪರಹಿತವಾದ ಬಾಧ್ಯತೆಯನ್ನು ನೀಡುವವನಾಗಿದ್ದಾನೆ. ಈ ಉತ್ತಮವಾದ ಬಾಧ್ಯತೆಯನ್ನು ಮೊದಲಿಗೆ ಪ್ರವೇಶಿಸುವವರು ಯಾಜಕರುಗಳು. ಇವರು ಪ್ರಥಮ ಪುನರುತ್ಥಾನವದ ಆಂಶವಾಗಿರುತ್ತಾರೆ ಮತ್ತು ದೈವಿಕ ಸ್ವಭಾವಕ್ಕೆ ಪರಿಪೂರ್ಣರಾಗುತ್ತಾರೆ ; "ಪುರಾತನ ಯೋಗ್ಯರು" ನಂತರದಲ್ಲಿ ಬರುತ್ತಾರೆ ಮತ್ತು ಪುನರುತ್ಥಾನದಲ್ಲಿ ಪರಿಪೂರ್ಣ ಮಾನವ ವ್ಯಕ್ತಿಗಳಂತೆ ಸಮರ್ಪಕ ಬಾಧ್ಯತೆಗೆ ಪ್ರವೇಶಿಸುತ್ತಾರೆ. (ಹಿಂದಿನ ಪುಟದ ಅಡಿ ಬರಹವನ್ನು ನೋಡಿ). 'ಮಹಾ ಸಮೂಹವು' ನಂತರದ ಕ್ರಮದಲ್ಲಿದೆ ಮತ್ತು ಆತ್ಮೀಕ ಸಮತಲದಲ್ಲಿ ಪರಿಪೂರ್ಣಗೊಳ್ಳುತ್ತದೆ ; ಎಲ್ಲಾದರಲ್ಲಿ ಕಡೆಯವರು ಗೆರ್ಶೋಮ್ ವರ್ಗದವರು. ಇವರು ಧರ್ಮಯುಗದಲ್ಲಿ ಬೋಧನೆ ಪಡೆದವರು, ಉದ್ಧರಿಸಲ್ಪಟ್ಟವರು ಮತ್ತು ಪರೀಕ್ಷೆಗೊಳಪಟ್ಟವರು. ಇವರು ಅ ಕ್ರಮೇಣವಾದ ಪುನರುತ್ಥಾನದ ಮೂಲಕ ಅಥವಾ ಸತ್ತವರನ್ನು ಎಬ್ಬಿಸುವುದರಲ್ಲಿ ಬಾಧ್ಯತೆಯನ್ನು ಪ್ರವೇಶಿಸುವರು ಮತ್ತು ಧರ್ಮಯುಗದ ಅಂತ್ಯದಲ್ಲಿ ಇದನ್ನು ಪೂರ್ಣವಾಗಿ ಗಳಿಸಿಕೊಳ್ಳುವರು.

'ಮರಣ ಪರ್ಯಂತ' ಪ್ರತಿಶ್ಃತಿಸಿಕೊಳ್ಳುವ ವಿಶ್ವಾಸಿಗಳು ಮಾತ್ರವೇ ಪವಿತ್ರಾತ್ಮನಿಂದ ಉತ್ಪತ್ತಿಯದವರು (ಪಡೆದುಕೊಂಡವರು) ಮತ್ತು ಮಹಾ ಯಾಜಕನ ಕುಟುಂಬ ಸದಸ್ಯರು ಎಂದು ಎಣಿಸಲ್ಪಟ್ಟಿರುವವರು ಆಗಿರುವುದರಿಂದ ಅದರಂತೆ ನಮೂನೆಗಳು ನಿರೂಪಗೊಂಡಿವೆ ; ಸಾಮಾನ್ಯವಾಗಿ ಲೇವಿಯರು ಪವಿತ್ರಾತ್ಮ ಸಂಕೇತವಾದ ಅಭಿಷೇಕ ತೈಲವನ್ನು ಪಡಕೊಳ್ಳುವುದಿಲ್ಲ, ಬದಲಾಗಿ ಯಾಜಕರುಗಳು ಪಡಕೊಳ್ಳುತ್ತಾರೆ. ಇವರೆಲ್ಲರೂ ರಕ್ತ ಮಿಶ್ರಿತ ತೈಲದ ಮೂಲಕ ಪ್ರೋಕ್ಷಿಸಲ್ಪಡುತ್ತಾರೆ. ಇದು ಕ್ರಿಸ್ತನ ಸದಸ್ಯರಿಗೆ ದಯಪಾಲಿಸಲಾಗಿರುವ ಪವಿತ್ರಾತ್ಮವು ರಕ್ತಧಾರೆಯ ಪಾವಿತ್ರ್ಯತೆಯಿಂದ ಮಾತ್ರವೇ ಎಂದು ತೋರಿಸುತ್ತದೆ : (೧) ಅವರ ಪರವಾಗಿ ಮತ್ತು ಅವರ ನೀತಿನಿರ್ಣಯಕ್ಕಾಗಿ ಕ್ರಿಸ್ತನ ಸಮರ್ಪಣೆಯು (೨) ಕ್ರಿಸ್ತನೊಂದಿಗೆ ಸಹ–ಸಮರ್ಪಣೆ ಮಾಡಿಕೊಳ್ಳುವ ಅಂದರೆ ಆತನ ಸೇವೆಯಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸುವ ಅವರಪ್ರತಿಜ್ಞೆ. (ವಿಮೋ ೨೯:೨೧ ನೋಡಿರಿ)

**ಯಾಜಕನ ಪ್ರತಿಷ್ಠೆಯು ಇನ್ನೂ ಬೇರೆಯದಾದ** ಸಂಗತಿಯಾಗಿದೆ. ಇದು ಅಯ್ಕೆಗೊಂಡ ಸಭೆಯ ಏಕತೆ ಅಥವಾ ಐಕ್ಯಮತ್ಯವನ್ನು ಪ್ರತಿನಿಧಿಸುತ್ತದೆ. ; ಇದಕ್ಕೋಸ್ಕರವಾಗಿ ಅಭಿಷೇಕವು ಮಹಾಜಕನಾಗಿ ಕಾರ್ಯ ನಿರ್ವಹಿಸುವವನ ಮೇಲೆಯಷ್ಟೇ ಬರುತ್ತದೆ.– ಮೊಟ್ಟಮೊದಲಲ್ಲಿ ಆರೋನನ ಮೇಲೆ ಮಾತ್ರ ; ನಂತರದಲ್ಲಿ ಮಹಾಯಾಜಕನ ಸ್ಥಾನಕ್ಕೆ ಉತ್ತರಾಧಿಕಾರಿಗಳಾದ ಆತನ ಪ್ರತಿಯೊಬ್ಬ ಮಕ್ಕಳ ಮೇಲೆ – "***ಆಗ ಅವರು ನನ್ನ ಯಾಜಕರಾಗಿರುವರು***" (ವಿಮೋ ೨೮:೪೧ ಮತ್ತು ೪೦ : ೧೩,೧೫ ನೋಡಿರಿ). ನಮ್ಮ ಕರ್ತನಾದ ಕ್ರಿಸ್ತ ಯೇಸುವು ಆತನ ದೇಹವಾದ ಸಭೆಯ ಶಿರಸ್ಸಾಗಿದ್ದು ಪರಮಾನಂದ ತೈಲ (ಪವಿತ್ರಾತ್ಮ) ದಿಂದ ತನ್ನ ಸಂಗಡಿಗರ ಅಂದರೆ ಜೊತೆವಾರಸುದಾರರು ಅಥವಾ ರಾಜ

ಯಾಜಕತ್ವದ ಅಧೀನ ಸದಸ್ಯರುಗಳ ಮೇಲೆ ಅಭಿಷೇಕ ಹೊಂದಿದನು. ಇದೆಲ್ಲವೂ ಆತನ ಮೇಲೆ ಸುರಿಸಲ್ಪಟ್ಟಿತು ಮತ್ತು ಆತನ ಸಂಪೂರ್ಣತೆ (ಸಮೃದ್ಧಿ) ಯನ್ನು ಅಂದರೆ ಕೃಪೆಯ ಮೇಲೆ ಕೃಪೆಯನ್ನು ನಾವು ಹೊಂದಿದೆವು. ನಾವು ಕ್ಷಮಾಪಣೆ ಹೊಂದಿ ಆತನ ಸಮರ್ಪಣೆಯ ಅರ್ಹತೆಯ ಮೇರೆಗೆ ಸಮರ್ಥನೆ ಪಡಕೊಂಡದ್ದು 'ಹೇಳಲಾಗದ ವರ'ವಾಗಿದೆ. ಈಗ ನಾವು ಆತನ ರಾಜ್ಯದಲ್ಲಿ ಜೊತೆವಾರಸುದಾರರಾಗಿ ಕರೆಯಲ್ಪಟ್ಟದ್ದು ಮತ್ತು ನಮ್ಮ ದೀಕ್ಷೆಯು ಆತನ ರಕ್ತದ ಮತ್ತು ತೈಲದ ಪ್ರೋಕ್ಷಣೆಯಮೂಲಕವಾಗಿ ಮುದ್ರಿಸಲ್ಪಟ್ಟು ನಾವು ನಮ್ಮ ಶಿರಸ್ಸಿನಡಿಯಲ್ಲಿ ಅಭಿಷೇಕಿಸಲ್ಪಟ್ಟಿರುವುದು ನಮ್ಮ ನಂಬಿಕೆಗೂ ಮೀರಿದ ಸಂಗತಿಯಾಗಿದೆ.

ಪ್ರವಾದಿಯಾದ ದಾವೀದನು ಈ ಅಭಿಷೇಕದ ಬಗ್ಗೆ ಮತ್ತು ಯಾವ ರೀತಿಯಲ್ಲಿ ಇವೆಲ್ಲವೂ ನಮ್ಮ ತಲೆಯ ಮೇಲೆ ಸುರಿಯಲ್ಪಟ್ಟು ಹರಿಯುತ್ತದೆಂದು ನಮಗೆ ಬರಹ ಚಿತ್ರಣವೊಂದನ್ನು ಒದಗಿಸುವಂತೆ ಪವಿತ್ರಾತ್ಮನೇ ಆತನಿಗೆ ಮಾರ್ಗದರ್ಶನ ಮಾಡಿದ್ದಾನೆ. (ಕೀರ್ತನೆ ೧೩೩ : ೧–೩, ೪೫:೭ ಮತ್ತು ಲೂಕ ೪:೧೮ ಇವುಗಳನ್ನು ನೋಡಿರಿ). ಸಭೆಯ ಸದಸ್ಯರುಗಳು ಸಹೋದರರಾಗಿದ್ದು ಅವರ ಆತ್ಮಗಳು ಅವರನ್ನು ಅನ್ಯೂನತೆಯಲ್ಲಿ ನೆಲೆಗೊಂಡಿರುವಂತೆ ಪ್ರಚೋದಿಸುತ್ತದೆ. ಶಿರಸ್ಸಿನೊಂದಿಗೆ ಒಂದಾಗಿರುವವರೆಲ್ಲರೂ ಆತನ ದೇಹದ ಸಂಗಾತಿಗಳೊಂದಿಗೆ ಸಹಾನುಭೂತಿಯುಳ್ಳವರಾಗಿರಬೇಕು. ಆಗ ಮಾತ್ರವೇ ಅವರು ಪವಿತ್ರಾತ್ಮನ ಅಭಿಷೇಕವನ್ನು ಸಮಪ್ರಮಾಣದಲ್ಲಿ ಪಡಕೊಳ್ಳುವರು. ಈ ಪವಿತ್ರವಾದ ಅಭಿಷೇಕ ತೈಲವು ಪವಿತ್ರಾತ್ಮನನ್ನು ಮತ್ತು ದೇವರು ರಾಜ ಯಾಜಕತ್ವದ ಅಥವಾ ನೂತ ಸೃಷ್ಟಿಯ ಉಮೇದುವಾರರಿಗೆ ಒದಗಿಸುವ ಜ್ಞಾನದ ಪ್ರಕಾಶವನ್ನು ಪ್ರತಿನಿಧಿಸುತ್ತದೆ. ಇವರೆಲ್ಲರೂ ಇಗಾಗಲೇ ತೋರಿಸಿರುವಂತೆ ಪವಿತ್ರಾತ್ಮನಿಂದ ಮುದ್ರಿಸಲ್ಪಟ್ಟಿದ್ದಾರೆ ಅಥವಾ ಗುರುತಿಸಲ್ಪಟ್ಟಿದ್ದಾರೆ.

ಈ ರೀತಿಯಾಗಿ ನೂತನ ಸೃಷ್ಟಿಯ ಭಾವೀ ಸದಸ್ಯರುಗಳಾಗಿ ಗುರುತಿಸಲ್ಪಟ್ಟಿರುವವರೆಲ್ಲರೂ ದೇವರಿಂದ ***"ನಾನು ಈ ಲೋಕದಲ್ಲದವನಾಗಿರುವ ಪ್ರಕಾರ ಇವರು ಈ ಲೋಕದವರಲ್ಲ"*** (ಯೋಹಾನ ೧೭ :೧೬), ***" ನಾನು ನಿಮ್ಮನ್ನು*** (ಈ ಲೋಕದೊಳಗಿಂದ) ***ಆರಿಸಿ ತೆಗೆದುಕೊಂಡಿದ್ದೇನೆ ಮತ್ತು ಅಭಿಷೇಕಿಸಿದ್ದೇನೆ, ನೀವು ಹೊರಟುಹೋಗಿ ಫಲ ಕೊಡುವವರಾಗಬೇಕೆಂತಲೂ, ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ "*** (ಯೋಹಾನ ೧೫ : ೧೬) ಮತ್ತು ***"ನೀವು ಲೋಕದ ಕಡೆಯವರಲ್ಲದೆ ಇರುವುದರಿಂದಲೂ ನಾನು ನಿಮ್ಮನ್ನು ಲೋಕದೊಳಗಿಂದ ಆರಿಸಿ ತೆಗೆದುಕೊಂಡಿರುವುದರಿಂದಲೂ ಲೋಕವು ನಿಮ್ಮ ಮೇಲೆ ದ್ವೇಷ ಮಾಡುತ್ತದೆ "*** (ಯೋಹಾನ ೧೫: ೧೯) ಎಂಬ ಭರವಸೆಯ ಮಾತುಗಳನ್ನು ಹೊಂದುವವನಾಗಿದ್ದಾನೆ. ಪವಿತ್ರಪಡಿಸುವಿಕೆಯ ಈ ಗುರುತನ್ನು ಈ ಲೋಕದವರು ಸ್ವಲ್ಪಮಟ್ಟಿಗೆ ಗ್ರಹಿಸುವರಾದರೂ ನಾವು ಈ ಲೋಕದ ಮೆಚ್ಚುಗೆ ಅಥವಾ ಒಪ್ಪಿಗೆಯನ್ನು ಇದರಿಂದ ನಿರೀಕ್ಷಿಸಲಾಗದು. ಆದರೆ, ನಿಜವಾಗಿ ಹೇಳುವುದಾದರೆ, ನೂತನ ಸೃಷ್ಟಿಯ ಮೇಲೆ ಪವಿತ್ರಾತ್ಮನ ಈ ಕುರುಹು ಗಳನ್ನು ಅವರು ಪರಿಗಣಿಸುವರಾದರೂ ಅದನ್ನು ಬಲಹೀನತೆಯ, ಪೌರುಷವಿಲ್ಲದ ನಿದರ್ಶನವೆಂದುಕೊಳ್ಳುವರು. ಈ ಪ್ರಪಂಚವು ಅದು ಹೆಸರಿಸುವ ಸದೃಢ ಮತ್ತು ಪರಿಶ್ರಮದ ಜೀವಿತವನ್ನು ಮೆಚ್ಚಿಕೊಳ್ಳುತ್ತದೆ ಮತ್ತು ಒಪ್ಪಿಕೊಳ್ಳುತ್ತದೆಯೇ ಹೊರತು ಹೆಚ್ಚು ನೀತಿಯುತವಾದುದನ್ನಲ್ಲ. ಈ ಲೋಕವು ಆತನ ಅನುಯಾಯಿಗಳನ್ನು ಯಾಕೆ ಮೆಚ್ಚಿಕೊಳ್ಳುವುದಿಲ್ಲವೆಂದು ಕರ್ತನು ತಾನೇ ವಿವರಿಸುವವನಾಗಿದ್ದಾನೆ ; ಅರ್ಥಾತ್, ಅಂಧಕಾರವು ಬೆಳಕನ್ನು ದ್ವೇಷಿಸುವಂತೆ – ರಾಜ ಯಾಜಕತ್ವದ ಆಲೋಚನೆ, ಮಾತು ಮತ್ತು ಕ್ರೀಯೆಗಳಲ್ಲಿನ ಮಟ್ಟವು ಮಾನವ ಜಾತಿಯ ಸಾಮಾನ್ಯ ಮಟ್ಟಕ್ಕಿಂಥ ಮೇಲಿನದಾಗಿದ್ದು, ಹೆಚ್ಚು ಕಡಿಮೆ ಅವರ ಮಾರ್ಗವನ್ನು ಖಂಡಿಸುವುದಾಗಿದೆ. ಪ್ರಪಂಚವು ಸುಮಾರಾಗಿ ಒಪ್ಪಿಗೆ ಪಡಕೊಳ್ಳುವುದಕ್ಕಿಂಥಃ ಹೆಚ್ಚಾಗಿ ಮುಖಸ್ತುತಿ ಹೊಂದಲು ಇಷ್ಟಪಡುತ್ತದೆ ; ಯಾವುದಾದರೂ ಯಾವುದೇ ಶ್ರೇಣಿಯಲ್ಲಿ ಅದರ ಮೇಲೆ ಪ್ರತಿಕ್ಷೇಪವನ್ನು ಚೆಲ್ಲುತ್ತದೋ ಆ ಮಟ್ಟಿಗೆ ಅದನ್ನು ವಿರೋಧಿಸದಿದ್ದರೂ ತಪ್ಪಿಸಿಕೊಳ್ಳುತ್ತದೆ. ಪ್ರಾಪಂಚಿಕ ರೀತಿಯಲ್ಲಿನ ಕ್ರೈಸ್ತರಾಜ್ಯದ ಈ ಅಸಮ್ಮತಿಯು ರಾಜ ಯಾಜಕತ್ವದ ಪರೀಕ್ಷೆಯ ಆಂಶವಾಗಿದೆ ; ಅವರ ಪ್ರತಿಷ್ಟೆಯು ಹೆಚ್ಚಾಗಿ ಹೃದಯದಲ್ಲವಾದಲ್ಲಿ ಅವರು ಅದೇ ರೀತಿಯಲ್ಲಿ ಲೋಕದ ಸಾಂಗತ್ಯವನ್ನು ತಪ್ಪಿಸಿಕೊಳ್ಳುತ್ತಾರೆ. ಅವರು ವಹಿಸಿಕೊಂಡ

ತಮ್ಮ ಈ ಲೋಕದ ಹಿತಾಸಕ್ತಿಗಳನ್ನು ತ್ಯಜಿಸುವ ಸಮಂಜಸವಾದ ಮನಸ್ಸನ್ನು ಸರಿಯಾದ ಮಾರ್ಗದಲ್ಲಿ ನಡೆಸಲು – ಯಾಜಕರಾಗಲು ವಿಫಲರಾಗುತ್ತಾರೆ ; ಹೀಗಾಗಿ ನೂತನ ಸೃಷ್ಟಿಗಳಾಗಲೂ ಸೋತುಹೋಗುತ್ತಾರೆ. ಹೇಗಿದ್ದರೂ, ಅವರ ಒಳ್ಳೆಯ ಉದ್ದೇಶಗಳ ಕಾರಣ ದೇವರು ಅವರನ್ನು ತೀಕ್ಷ್ಣವಾದ ಶೋಧನೆಗಳ ಮೂಲಕ ಅವರು ತ್ಯಾಗಮಾಡಲು ಉತ್ಸಾಹ ತೊರದ ಪ್ರಾಪಂಚಿಕ ಹಿತಾಸಕ್ತಿಗಳನ್ನು ತ್ಯಜಿಸುವಂತೆ ಮಾಡುತ್ತಾನೆ ; ಈ ರೀತಿಯಾಗಿ ಅವರು ಮಹಾ ಸಂಕಟದ ಸಮಯದಲ್ಲಿ ಹೊರಹೊಮ್ಮಿ ಆತನ ಸಿಂಹಾಸನದ ಮುಂದೆ ಸೇವೆಮಾಡುವ ಮಹಾಸಮೂಹವು ಹೊಂದಲಿರುವ ಆಶೀರ್ವಾದ ಮತ್ತು ಬಹುಮಾನಗಳ ಪಾಲುದಾರರಾಗಿ ಯೊಗ್ಯರೆನ್ನಿಸಿಕೊಳ್ಳ ಬಹುದು. ಆಗ ಚಿಕ್ಕ ಹಿಂಡು ಕರ್ತನೊಂದಿಗೆ ಕುಳಿತುಕೊಳ್ಳುವುದು.

ಪವಿತ್ರಪಡಿಸುವಿಕೆಯಲ್ಲಿ ಮಾನವನ ಪಾತ್ರವಾದ ಸಮಗ್ರವಾದ ಪ್ರತಿಷ್ಟೆ ಮತ್ತು ದೇವರ ಪಾತ್ರವಾದ ಅಂಗೀಕಾರ ಈ ಎರಡು ಸಂಗತಿಗಳು ಮಾತ್ರವಲ್ಲ ಅದರಲ್ಲಿ ಪುರೋಗಮನವೆಂಬ ಅಧಿಕವಾದ ಅಂಶವು ಸಹಾ ಅಡಗಿದೆ. ಕರ್ತನಿಗೆ ನಮ್ಮ ಪ್ರತಿಷ್ಟೆಯು ಪ್ರಾಮಾಣಿಕವಾದುದೂ, ಸಂಪೂರ್ಣವಾದುದೂ ಅಗುವುದರೊಂದಿಗೆ, ಆತನಿಂದ ಅಂಗೀಕಾರವಾಗ ಬೇಕಾದಲ್ಲಿ ಅದು ತುಲನಾತ್ಮಕವಾಗಿ ಅಲ್ಪ ಜ್ಞಾನ ಮತ್ತು ಅನುಭವಗಳ ಸಂಗಡವಿರುತ್ತದೆ – ಆದುದರಿಂದ ನಾವು ಜ್ಞಾನದಲ್ಲಿ ಬೆಳೆಯುವದರೊಂದಿಗೆ ಪ್ರತಿನಿತ್ಯವೂ ಪವಿತ್ರಪಡಿಸುವಿಕೆಯಲ್ಲಿ ಬೆಳೆಯಬೇಕು. ಮೊದಲಿಗೆ ಎಲ್ಲಾ ಸ್ವಯಿಚ್ಛೆಯನ್ನು ನಮ್ಮ ಹೃದಯವು ಹೊರಹಾಕಿ ಜ್ಞಾನನದಿಂದ ತುಂಬಿಹೋಗಿತ್ತು. ಆದರೆ ನಮ್ಮ ಹೃದಯವು ಸಣ್ಣದು. ಆದು ಬೆಳಯುವಾಗ ಮತ್ತು ವಿಶಾಲಗೊಳ್ಳುವಾಗ ಪವಿತ್ರಪಡಿಸುವಿಕೆಯು ನಿಧಾನವಾಗಿ ನಡೆಯ ಬೇಕಾಗುತ್ತದೆ ಮತ್ತು ಎಲ್ಲಾ ಭಾಗವನ್ನು ತುಂಬಿಕೊಳ್ಳ ಬೇಕಾಗುತ್ತದೆ ; **"ದೇವರ ಪ್ರೀತಿಯು ನಿಮ್ಮ ಹೃದಯಗಳಲ್ಲಿ ಬಿದ್ದು ಹೆಚ್ಚು ಹೆಚ್ಚಾಗಿ ತುಂಬಿಕೊಳ್ಳಲಿ"** ಎಂದು ಅಪೋಸ್ತಲನು ಬೋಧಿಸುತ್ತಾನೆ. ನಮ್ಮ ಹೃದಯ ವಿಕಾಸಗೊಳ್ಳುವಂತೆ ಮಾಡಿರುವ ಅವಕಾಶವನ್ನು ಹೀಗೆ ವಿಮೋಚಕನ ಪ್ರಾರ್ಥನೆಯಲ್ಲಿ ನೋಡುತ್ತೇವೆ – ***" ಇವರನ್ನು ಸತ್ಯದಲ್ಲಿ ಸೇರಿ ಪ್ರತಿಷ್ಟೆ ಪಡಿಸು ; ನಿನ್ನ ವಾಕ್ಯವೇ ಸತ್ಯವು"***(ಯೋಹಾನ ೧೭:೧೭).

ಅದು ದೇವರ ವಾಕ್ಯ ಅಥವಾ ಸಂದೇಶ, ಕ್ರಿಸ್ತನ ಮೂಲಕವಾದ ದೇವರ **ಜ್ಞಾನ**ವು ನಮ್ಮೆಡೆಗೆ ದೇವರ ಕೃಪೆಯನ್ನು ಪ್ರಕಟಿಸಿ ಹಂತ ಹಂತವಾಗಿ ನಮ್ಮನ್ನು ಪ್ರತಿಷ್ಟೆಯ ಅಂಶದ ಕಡೆಗೆ ನಡೆಸುತ್ತದೆ ; ಈಗ ಇದೇ ವಾಕ್ಯವು ಅಥವಾ ಕ್ರಿಸ್ತನ ಮೂಲಕ ದೇವರ ಸಂಧೇಶವು ನಮ್ಮ ಹೃದಯವನ್ನು ವಿಶಾಲಗೊಳಿಸಿ ಅದನ್ನು ತುಂಬ ಬೇಕು. ಆದರೆ ದೇವರು ಸತ್ಯವನ್ನು ಒದಗಿಸಿ ನಮ್ಮನ್ನು ಪವಿತ್ರಗೊಳಿಸುವಾಗ ನಾವೇ ನಮ್ಮ ಹೃದಯದ ಆ ಪ್ರತಿಷ್ಟೆಯ ಸ್ಥಿತಿಯನ್ನು ಸ್ಪಷ್ಟಪಡಿಸಿಕೊಂಡು ಆ ಪವಿತ್ರಪಡಿಸುವಿಕೆಯ ಸತ್ಯದ ಬಗ್ಗೆ ಹಸಿವೆಯುಳ್ಳವರೂ, ಬಾಯಾರಿದವರೂ ಆಗಿರಬೇಕು. ಅದನ್ನು ಪ್ರತಿನಿತ್ಯ ಸೇವಿಸಬೇಕು ಮತ್ತು ಅದರಿಂದ ಕರ್ತನಲ್ಲಿ ಮತ್ತು ಆತನ ಸಾಮರ್ಥ್ಯದ ಶಕ್ತಿಯಲ್ಲಿ ಬಲಯುತವಾಗಿ ಬೆಳೆಯಬೇಕು. ನಾವು ಕರ್ತನಿಗೆ ಪ್ರತಿಷ್ಟೆ ಪಡಿಸಿಕೊಂಡರಷ್ಟೇ ಸಾಲದು. ಆತನು ತನ್ನ ನೂತನ ಸೃಷ್ಟಿಗೆ ಕೇವಲ ಅಭ್ಯರ್ಥಿಗಳನ್ನಷ್ಟೇ ಅಪೇಕ್ಷಿಸುವುದಿಲ್ಲ. ಅವರುಗಳ ತಾಲೀಮು ನಡೆಯಬೇಕು, ಶಿಸ್ತುಗೊಳ್ಳಬೇಕು, ವಿವಿಧ ಲಕ್ಷಣಗಳನ್ನು ಮುಂದೆ ತಂದು ಅದರಲ್ಲಿ ಬೆಳೆಯಬೇಕು. ಪ್ರತಿಯೊಂದು ಲಕ್ಷಣವೂ ಸಾದ್ಯಂತವಾಗಿ ದೇವರ ಬಗ್ಗೆ ಇರುವ ನಿಷ್ಟೆಯನ್ನು ಸಾಬೀತು ಪಡಿಸಬೇಕು. ಈ ರೀತಿಯಲ್ಲಿ ಎಲ್ಲಾ ಹಂತಗಳಲ್ಲಿ ಪರೀಕ್ಷೆಗೊಂಡ ಮೇಲೆ ಈ ನೂತನ ಸೃಷ್ಟಿಗಳು ಕರೆದಾತನಿಗೆ ಪ್ರಾಮಾಣಿಕವಾಗಿ ಕಂಡು ಬರಬೇಕು ಮತ್ತು ಪ್ರಥಮ ಪುನರುತ್ಥಾನದಲ್ಲಿ ಅವರ ಕರ್ತನ ವೈಭವಯುತ ಆನಂದವನ್ನು ಪ್ರವೇಶಿಸಲು ಯೋಗ್ಯರಾಗಿ ಕಂಡುಬರಬೇಕು.

ಸಮರ್ಥನೆಯು ದೇವರಲ್ಲಿ ಶಾಂತಿಯ ಮಹಾ ಆಶೀರ್ವಾದವನ್ನು ತರುವಂತೆ ಅದರ ಮುಂದಿನ ಹೆಜ್ಜೆಯಾದ ಕರ್ತನಿಗೆ ಪೂರ್ಣ ಪ್ರತಿಷ್ಟೆಯು ಸಹಾ ಜೀವನದಲ್ಲಿ ಎಲ್ಲಾ ಹುರುಪನ್ನು, ಎಲ್ಲಾ ನಿರೀಕ್ಷೆ ಮತ್ತು ಹಂಬಲಗಳನ್ನು ತರುವ ವಿಚಾರವಾಗಿದೆ. ಇದು ಭೂಲೋಕದ ನಿರೀಕ್ಷೆ, ಹಂಬಲಗಳು ಮತ್ತು ಆಶೀರ್ವಾದಗಳನ್ನು ನೂತನ ಸೃಷ್ಟಿಗಳಿಗೆ

ಕಾಣಿಕೆಯಾಗಿ ನೀಡಲ್ಪಟ್ಟ ಪರಲೋಕದ ಆಶೀರ್ವಾದಗಳೊಂದಿಗೆ ಬದಲಾಯಿಸುವುದಾಗಿದೆ. ದೇವರು ತನ್ನ ನೂತನ ಸೃಷ್ಟಿಗೆ ನೀಡಲಿರುವ ಹೆಚ್ಚಾದ ಮತ್ತು ಅಮೂಲ್ಯವಾದ ಆಶೀರ್ವಾದಗಳನ್ನು ನಾವು ಹೆಚ್ಚು ಹೆಚ್ಚಾಗಿ ಗ್ರಹಿಸಿದಂತೆಲ್ಲಾ ಇದು ನಮಗೆ ದೊಡ್ಡ ಹಾಗೂ ಭವ್ಯವಾದ ಪರಿಹಾರವನ್ನು, ಹೃದಯಕ್ಕೆ ಸಮಾಧಾನವನ್ನು ನೀಡುವುದಾಗಿದೆ. ***"ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳೂ ಅನುಕೂಲವಾಗುತ್ತವೆ"*** (ರೋಮ ೮:೨೮). ಎಂಬ ಒಂದೇ ವಾಕ್ಯದಲ್ಲಿ ಈ ಎಲ್ಲಾ ಆಶೀರ್ವಾದಗಳನ್ನು ಸಂಕ್ಷಿಪ್ತವಾಗಿ ಕ್ರೃಡೀಕರಿಸಲಾಗಿದೆ. ಆ ಹೇಳಿಕೆಯ ನಿಜವಾದ ಅರ್ಥದಲ್ಲಿ ಇದು ಎರಡನೆಯ ಆಶೀರ್ವಾದ. ಹೀಗಿದ್ದರೂ ಇದು ಐಹಿಕತೆಯ ಬಾಹ್ಯ ಪ್ರದರ್ಶನವನ್ನೊಳಗೊಂಡಿದೆ. ಆದರೆ ಇದು ನಮ್ಮ ಹೃದಯಗಳನ್ನು ಆಳವಾದ ವಿಶ್ರಾಂತಿಗೆ ಮುನ್ನಡಿಸಿ ದೇವರಲ್ಲಿ ಸಂಪೂರ್ಣವದ ಭರವಸೆಯನ್ನು ಇಡುವಂತೆ ಮಾಡುತ್ತದೆ ಮತ್ತು ನಮ್ಮನ್ನು ದೇವರ ವಾಕ್ಯದಲ್ಲಿನ ಹೆಚ್ಚಾದ ಮತ್ತು ಅಮೂಲ್ಯವಾದ ವಾಗ್ದಾನಗಳನ್ನು ಅನ್ವಯಿಸಿಕೊಳ್ಳುವಂತೆ ಮಾಡುತ್ತದೆ.

ವತ್ಯಾಸವುಳ್ಳ ಪ್ರಕೃತಿಸ್ವಭಾವದ ಸಲುವಾಗಿ, ಈ ಪೂರ್ಣ ಪ್ರತಿಷ್ಠೆಯ ಸಂಬಂಧದಲ್ಲಿ ವಿವಿಧ ರೀತಿಯ ಅನುಭವಗಳು ಅವಶ್ಯಕವಾಗಿ ಇರುತ್ತವೆ. ಕೆಲವರಿಗೆ ಕರ್ತನಿಗೆ ಸಂಪೂರ್ಣವಾಗಿ ಶರಣಾಗುವುದು, ಪ್ರತೀಕ್ಷೆಯುಳ್ಳ ಆಯ್ದ ಸಭೆಯ ಸದಸ್ಯರಾಗಿ ಆತನ ವಿಶೇಷ ಪಾಲನೆಯ ಅನುಭವವನ್ನು ಗ್ರಹಿಸುವುದು ಇವುಗಳು ಕೇವಲ ತೃಪ್ತಿಕರ ಸಮಾಧಾನ ವನ್ನು, ಹೃದಯ ವಿಶ್ರಾಂತಿಯನ್ನು ಒದಗಿಸುತ್ತದೆ ; ಆದರೆ ವಿಫುಲವಾದ ಸ್ವಭಾವವುಳ್ಳವರಿಗೆ ಇವು ಉಕ್ಕೇರುವ ಸಂತೋಷ ಮೆಚ್ಚುಗೆ ಮತ್ತು ನಲಿವನ್ನುಂಟುಮಾಡುತ್ತದೆ. ನಾವು ಈ ವತ್ಯಾಸವುಳ್ಳ ಪ್ರಕೃತಿ ಸ್ವಭಾವಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ನಮ್ಮ ಅನುಭವಕ್ಕಿಂಥ ಬೇರೆಯಾದ ಅನುಭವವುಳ್ಳವರ ಬಗ್ಗೆ ಸಹಾನುಭೂತಿಯುಳ್ಳವರಾಗಿರಬೇಕು. ಇಂಥಾಃ ವತ್ಯಾಸಗಳು ಅಪೋಸ್ತಲರಲ್ಲಿಯೂ ಇದ್ದುವೆಂದು ನೆನಪುಮಾಡಿಕೊಳ್ಳಬೇಕು ; ಅವರಲ್ಲಿ ಕೆಲವರು ವಿಶೇಷವಾಗಿ ಪೇತ್ರ, ಯಾಕೋಬ ಮತ್ತು ಯೋಹಾನರು ಪಂಚಾಶತ್ತಮದ ಅನುಭವಗಳನ್ನೊಳಗೊಂಡಂತೆ ತಮ್ಮ ಇತರ ಎಲ್ಲಾ ಅನುಭವಗಳಲ್ಲಿ ಇತರರಿಗಿಂತ ಹೆಚ್ಚಾಗಿ ಸಿದ್ಧಾಂತ ಪಡಿಸುವರಾಗಿದ್ದರು. ಸಮೃದ್ಧಿ ಮತ್ತು ಉಕ್ಕೇರುವ ಪ್ರವೃತ್ತಿಯುಳ್ಳ ಸಹೋದರರು ಅಪೊಸ್ತಲರು ತಮ್ಮ ಅಧೀನದಲ್ಲಿರಿಸಿಕೊಂಡಂಥಾಃ ಸಂಯಮವನ್ನು ಕಲಿತುಕೊಳ್ಳಲಿ ; ನಿಜವಾಗಿ ಹೆಚ್ಚಿನ ಮಟ್ಟಿಗೆ ನಿರುತ್ಸಾಹ ಮತ್ತು ನೀರಸ ಸ್ವಭಾವದ ಸಹೋದರರು ತಮ್ಮನ್ನು ಅಂಧಕಾರದೊಳಗಿಂದ ಈ ಭವ್ಯವಾದ ಬೆಳಕಿಗೆ ಕರೆದಾತನ ಹೆಚ್ಚಾದ ಮೆಚ್ಚುಗೆಗೆ ಪಾತ್ರರಾಗುವಂತೆ ಬಯಸಿ ಪ್ರಾರ್ಥಿಸಲಿ. ಕರ್ತನ ಅತ್ಯಂತ ಪ್ರೀಯರಾಗಿದ್ದ ಯಾಕೋಬ ಯೋಹಾನರನ್ನು ಅವರ ಉತ್ಸಾಹ ಮತ್ತು ಹುರುಪಿನ ಕಾರಣ 'ಗುಡುಗಿನ ಮರಿಗಳು' ಎಂದು ಕರೆದಿರುವುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕನಿಷ್ಟ ಒಂದು ಸಂಧರ್ಭದಲ್ಲಿಯಾದರೂ ಇದು ನಮ್ಮ ತಿದ್ದುವಿಕೆ ನಮ್ಮ ಎಚ್ಚರಿಕೆಗೆ ಅವಶ್ಯವಾಗಿದ್ದು ಅವರು ಎಂಥಾಃ ಆತ್ಮವನ್ನು ಹೊಂದಿದ್ದರೆಂದು ನೆನಪುಮಾಡತಕ್ಕದ್ದು (ಲೂಕ ೯ : ೫೪,೫೫ ನೋಡಿರಿ). ಮತ್ತೊಂದೆಡೆ, ಇನ್ನೊಬ್ಬ ಉತ್ಸಾಹಿತನೂ ಕರ್ತನ ಅತ್ಯಂತ ಪ್ರೀತಿಪಾತ್ರ ಶಿಷ್ಯನೂ ಆದ ಅಪೊಸ್ತಲ ಪೇತ್ರನು ಮೆಸ್ಸೀಯನ ಬಗ್ಗೆ ಮಾಡಿದ ತಡವಿಲ್ಲದ ಅರಿಕೆಯ ಸಲುವಾಗಿ ಆಶೀರ್ವದಿಸಲ್ಪಟ್ಟನು (ಯೋಹಾನ ೨೧ : ೧೫-೧೯ ನೋಡಿರಿ. ಆದರೆ ಮತ್ತೊಂದು ಸಂಧರ್ಭದಲ್ಲಿ ಉತ್ಸಾಹದ ತಪ್ಪಾದ ಮಾರ್ಗದರ್ಶನದ ನಿಮಿತ್ತ ಎದುರಾಳಿಯೆಂದು ದೂಷಿಸಲ್ಪಟ್ಟನು. ಪರಂತು, ಕರ್ತನು ಈ ಮೂರು ಮಂದಿಯ ಉತ್ಸಾಹ, ಭಾವೋದ್ಧೀಪಕತನದ ಸ್ವಭಾವಗಳಿಗೆ ವಿಶಿಷ್ಟವಾದ ರೀತಿಯ ತನ್ನ ಮೆಚ್ಚುಗೆಯನ್ನು ತೋರಿಸಿದ್ದಾನೆ, ಅವರನ್ನು ತನ್ನ ಪರಮಾಪ್ತರುಗಳನ್ನಾಗಿ ಆಯ್ದುಕೊಂಡಿದ್ದಾನೆ. ಇವರುಗಳನ್ನು ಮಾತ್ರ ತನ್ನ ಪ್ರಕಾಶವುಳ್ಳ ರೂಪವನ್ನು ತೋರಿಸಿದ ಬೆಟ್ಟಕ್ಕೆ ಹಾಗೂ ಯಾಯೀರನೆಂಬ ಸಭಾ ಮಂದಿರದ ಅಧಿಕಾರಿಯ ಮಗಳನ್ನು ಸತ್ತವರೊಳಗಿಂದ ಎಬ್ಬಿಸಲು ಆಕೆ ಸತ್ತು ಮಲಗಿದ್ದ ಕೋಣೆಯೊಳಕ್ಕೆ ಕೊಂಡೊಯ್ಯುತ್ತಾನೆ. ಈ ಮೂವರೂ ಆ ಕಡೇ ರಾತ್ರಿಯಲ್ಲಿ ಗೆತ್ಸೆಮನೆ ತೋಟದಲ್ಲಿ ಉಳಿದವರಿಗಿಂತ ಯೇಸುವಿನ ಹೆಚ್ಚು ಸಮೀಪದಲ್ಲಿದ್ದರು. ಇವುಗಳಿಂದ ನಮಗೆ ದೊರೆಯುವ ಪಾಠವೇನೆಂದರೆ, ಉತ್ಸಾಹವು ಕರ್ತನಿಗೆ ಪ್ರೀಯವಾಗಿದೆ, ಅಂದರೆ ಅದು ಆತನ ಸಮೀಪವಾಗಿರುವುದು ; ಆದರೆ ಅದು ಸದಾ ಶಿರಸ್ಸಾದಾತನಿಗೆ ಪೂಜ್ಯಭಾವನೆಯುಳ್ಳದ್ದಾಗಿರಬೇಕು ಮತ್ತು ಆತನ ಮಾತು ಮತ್ತು ಆತ್ಮನ ಮಾರ್ಗದರ್ಶನ ಹೊಂದಿರಬೇಕು.

ಕೆಲವರು ತಪ್ಪಾಗಿ ಅರ್ಥಮಾಡಿಕೊಂಡಿರುವಂತೆ ಪವಿತ್ರಪಡಿಸುವಿಕೆಯು ಮಾನವ ಸಮರ್ಪಕತೆಯಲ್ಲ ; ಅದು ನಮ್ಮ ಮಿದುಳಿನ ಗುಣಮಟ್ಟವನ್ನಾಗಲೀ, ಕ್ರಮನ್ನಾಗಲೀ ಬದಲಾಯಿಸುವುದಿಲ್ಲ, ಹಾಗೂ ನಮ್ಮ ದೇಹದ ಕಳಂಕಗಳನ್ನು ಆಶ್ಚರ್ಯಕರವಾಗಿ ತೆಗೆದುಹಾಕುವುದಿಲ್ಲ. ಇದು ಕ್ರಿಸ್ತನ ಮೂಲಕ ದೇವರಿಂದ ಸಮರ್ಪಕವೆಂದು ಅಂಗೀಕರಿಸಲ್ಪಡುವ ಇಚ್ಛಾಶಕ್ತಿಯ ದೀಕ್ಷೆ, ಮರಣದ ಪರ್ಯಂತ ದೇಹವನ್ನು ಸಮರ್ಪಿಸುವ ದೀಕ್ಷೆ. ನಾವು ಕಂಡುಕೊಂಡಂತೆ ದೇಹವು ನಂಬಿಕೆಯ ಸಮರ್ಥನೆಯ ಮೂಲಕ ಸಮರ್ಪಕಗೊಳ್ಳುವುದಿಲ್ಲ. ಆದರೆ ನಮ್ಮ ಇಚ್ಛಾನುಸಾರ, ಹೃದಯಾನುಸಾರ, ಮತ್ತು ಉದ್ದೇಶಗಳಿಗನುಸಾರ ಸಮರ್ಪಕವೆಂದು ಎಣಿಸಲ್ಪಡುತ್ತದೆ. ಅಪೊಸ್ತಲು ಬೋಧಿಸುವಂತೆ ನೂತನ ಇಚ್ಛೆಯು ಪ್ರಿತಿಯೊಂದು ಶಕ್ತಿಯನ್ನು, ತಲಾಂತುಗಳನ್ನು ಮತ್ತು ದೇವರ ಪೂರ್ಣ ಅನುಗ್ರಹಕ್ಕನುಸಾರ ದೇಹದ ಎಲ್ಲಾ ಅವಕಾಶಗಳನ್ನು ತರಲು ಬಯಸಬೇಕು ಮತ್ತು ಅದು ಸಂಪರ್ಕತೆಗೆ ಬರುವ ಎಲ್ಲಾ ಜನರ ಮೇಲೆ ಅದೇ ದೆಸೆಯಲ್ಲಿ ತನ್ನ ಪ್ರಭಾವವನ್ನು ಬೀರಲು ಬಯಸಬೇಕು. ಪ್ರಸ್ತುತ ಜೀವಿತದ ಕೇವಲ ಐದು, ಹತ್ತು, ಇಪ್ಪತ್ತು ಅಥವಾ ಐವತ್ತು ವರ್ಷಗಳಲ್ಲಿ ಅದು ಅಸಮರ್ಪಕವಾದ ಬಡ ದೇಹವನ್ನು ಅಥವಾ ಮನುಷ್ಯರನ್ನು ಇದು ಸಮರ್ಪಕತೆಗೆ ತರುವುದೆಂಬ ಅರ್ಥವಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಪೊಸ್ತಲನು ಸಭೆಯ ಬಗ್ಗೆ ಮರಣದಲ್ಲಿ ಅದು ಭ್ರಷ್ಟತೆಯಲ್ಲಿ, ಬಲಹೀನತೆಯಲ್ಲಿ, ಅಗೌರವದಲ್ಲಿ, ಅಸಮರ್ಪಕವಾದ ಸ್ವಾಭಾವಿಕ ದೇಹದಲ್ಲಿ ಕಂಡುಬರುತ್ತದೆ ಎಂಬ ಭರವಸೆಯನ್ನು ನೀಡುವವನಾಗಿದ್ದಾನೆ. ಇಂದಿನ ಬಲಹೀನತೆಯ ಸಮಯದಲ್ಲಿ ನಾವು ನಮ್ಮ ಹೃದಯ ನಿಷ್ಠೆಯನ್ನು ಆತನಿಗೆ ಪ್ರಕಟಿಸದೇ ಹೋದಲ್ಲಿ ಪುನರುತ್ಥಾನದ ವರೆಗೆ ನಾವು ಬಯಸುವ ಮತ್ತು ಕರ್ತನು ಅಂತ್ಯತಃ ನಮಗೆ ಕೊಡಲು ವಾಗ್ದಾನಮಾಡಿರುವ ಬಲವುಳ್ಳ, ಸಮರ್ಪಕವಾದ, ಮಹಿಮೆಯುಳ್ಳ, ನಿರ್ಲಯತ್ವದ, ಗೌರವವುಳ್ಳ ನೂತನ ದೇಹವನ್ನು ನಮಗೆ ನೀಡಲಾಗುವುದಿಲ್ಲ.

ಹೇಗಿದ್ದರೂ, ಕರ್ತನಿಗೆ ತೋರಿಸುವ ಹೃದಯ ನಿಷ್ಠೆಯೆಂದರೆ, ನಮ್ಮ ಜೀವಿತದ ಎಲ್ಲಾ ಗುಣ ನಡತೆಗಳನ್ನೂ, ನಮ್ಮ ಹೃದಯದ ಅತ್ಯಂತವಾದ ಆಲೋಚನೆ ಮತ್ತು ಉದ್ದೇಶಗಳನ್ನು ದೇವರ ಚಿತ್ತಕ್ಕೆ ತರುವುದು (ಇಬ್ರಿಯ ೪:೧೨ ನೋಡಿರಿ). ಇದು ನಮ್ಮ ಮೊದಲ ಕರ್ತವ್ಯ, ನಿರಂತರವಾದ ಕರ್ತವ್ಯ ಮತ್ತು ನಮ್ಮ ಕರ್ತವ್ಯದ ಅಂತ್ಯವೂ ಸಹಾ ಆಗಿದೆ. ಯಾಕೆಂದರೆ, ಇದು ದೇವರ ಚಿತ್ತವಾಗಿದೆ, ನಮ್ಮ ಪವಿತ್ರಪಡಿಸುವಿಕೆಯು ಸಹಾ. ***"ನಾನು (ಕರ್ತನು) ಪರಿಶುದ್ಧನಾಗಿರುವುದರಿಂದ ನೀವೂ ಪರಿಶುದ್ಧರಾಗಿರ ಬೇಕು"*** (೧ ಪೇತ್ರ ೧ : ೧೬ , ೧ ಥೆಸ ೪:೩ ನ್ನೂ ನೋಡಿರಿ). ಪೂರ್ಣವಾದ ಪವಿತ್ರತೆಯು ನಿರ್ಧಿಷ್ಟಮಾನದ್ದಾಗಿರಬೇಕು ಮತ್ತು ಇದನ್ನು ನಮ್ಮ ಮನಸ್ಸು ಸಂತೋಷಪೂರ್ವಕವಾಗಿಯೂ ಸಂಪೂರ್ಣವಾಗಿಯೂ ದೃಢಪಡಿಸಬೇಕು ಮತ್ತು ಆ ಮಟ್ಟಕ್ಕೆ ನಾವು ಜೀವಿಸಬೇಕು. ಆದರೆ ನಮ್ಮ ಪತನಗೊಂಡ ಸ್ವಭಾವಗಳ ಅಸ್ಥಿರತೆಗಳಿಗೆ ಅಂಟಿಕೊಂಡಿರುವವರೆಗೂ ಮತ್ತು ಪ್ರಾಪಂಚಿಕ ಆಕ್ರಮಣಗಳಿಂದ ಮತ್ತು ಭಿನ್ನಮತಗಳಿಂದ ಆವರಿಸಿಕೊಂಡಿರುವ ವರೆಗೂ ನಾವು ಇದನ್ನು ನಿಜವಾಗಿಯೂ ಮತ್ತು ದೈಹಿಕವಾಗಿಯೂ ಹೊಂದಿಕೊಳ್ಳಲು ಸಾಧ್ಯವಿಲ್ಲ. ಆದರೆ, ದಿನಂದಿಂದ ದಿನಕ್ಕೆ ನಾವು ದೇವರ ಬಗ್ಗೆ ಕಲಿತುಕೊಳ್ಳುವಾಗ, ಆತನ ಮಹಿಮಾ ಲಕ್ಷಣಗಳ ಪೂರ್ಣ ತಿಳುವಳಿಕೆಗೆ ಬರುವಾಗ ಮತ್ತು ಇದರ ಮೆಚ್ಚುಗೆಯು ಹೆಚ್ಚೆಚ್ಚಾಗಿ ನಮ್ಮ ಹೃದಯವನ್ನು ತುಂಬುವಾಗ, ನೂತನ ಮನಸ್ಸು ಐಹಿಕ ಬಲಹೀನತೆಗಳು ಏನೇ ಇರಲಿ ಅವುಗಳ ಮೇಲೆ ಇನ್ನೂ ಹೆಚ್ಚಾದ ಪ್ರಭಾವ, ಬಲ ಶಕ್ತಿಗಳನ್ನು ಹೊಂದಿಕೊಳ್ಳುತ್ತದೆ. ಈ ಬಲಹೀನತೆಗಳು ದೇಹದ ವಿವಿಧ ಸದಸ್ಯರುಗಳಲ್ಲಿ ಬದಲಾಗುತ್ತವೆ.

ಕರ್ತನಿಗೆ ನಿಜವಾದ ಹೃದಯ ಪವಿತ್ರಪಡುವಿಕೆ ಎಂದರೆ ಸೇವಾ ಶ್ರದ್ಧೆ ; ಇತರರಿಗೆ ಶುಭಸಮಾಚಾರವನ್ನು ಪ್ರಕಟಗೊಳಿಸುವುದು ; ಒಬ್ಬರನ್ನೊಬ್ಬರು ಪವಿತ್ರವಾದ ವಿಶ್ವಾಸದಲ್ಲಿ ಕಟ್ಟುವುದು. ನಾವು ವಿಶೇಷವಾಗಿ ನಮ್ಮ ವಿಶ್ವಾಸದ ಮನವಾರ್ತೆಯವರಿಗೆ ಒಳ್ಳೇದನ್ನು ಮಾಡುವ ಅವಕಾಶವಿರುವುದರಿಂದ ಎಲ್ಲರಿಗೂ ಒಳ್ಳೇದನ್ನೇ ಮಾಡುವುದು, ಈ ವಿವಿಧ ಮಾರ್ಗಗಳಲ್ಲಿ ಕರ್ತನಿಗೆ ಸಮರ್ಪಿಸಿರುವ ನಮ್ಮ ಜೀವಿತವು ದಿನಂಪ್ರತಿ ನಮಗೆ ಅವಕಾಶ ದೊರೆತಾಗಲೆಲ್ಲಾ ಇತರ ಸಹೋದರರಿಗೆ ಸಮರ್ಪಿತವಾಗಬೇಕೆಂಬುದೇ ಇದರ ಅರ್ಥ ( ೧ ಯೋಹಾನ ೩:೧೬ ನೋಡಿರಿ). ನಾವು ಕೃಪೆಯಲ್ಲಿ,

ಜ್ಞಾನದಲ್ಲಿ ಮತ್ತು ವಿಧೇಯತೆಯಲ್ಲಿ ಬೆಳೆದಂತೆಲ್ಲಾ ದೇವರ ಬಗ್ಗೆ, ನಮ್ಮ ಸಹೋದರರ ಬಗ್ಗೆ, ನಮ್ಮ ಕುಟುಂಬ ಮತ್ತು ಸಹಾನುಭೂತಿಯಿಂದ ಇಡೀ ಮಾನವ ಕುಲದ ಪ್ರಪಂಚದ ಬಗ್ಗೆ ನಮಗಿರುವ ಪ್ರೀತಿಯು ನಮ್ಮ ಹೃದಯಗಳನ್ನು ಹೆಚ್ಚಾಗಿ ತುಂಬಿಸುತ್ತದೆ. ಪರಂತು, ಇತರರ ಬಗ್ಗೆ ನಮ್ಮ ಸಾಮರ್ಥ್ಯದ ಈ ಎಲ್ಲಾ ಅಭ್ಯಾಸಗಳು ಕೇವಲ ವಿವಿಧ ಮಾರ್ಗಗಳಾಗಿದ್ದು ಇವುಗಳಲ್ಲಿ ದೇವರ ಒದಗಿಸುವಿಕೆಯು, ನಮ್ಮ ಸ್ವಂತ ಪವಿತ್ರಪಡಿಸಿಕೊಳ್ಳುವಿಕೆಯು ನೆರವೇರುತ್ತದೆ. ಕಬ್ಬಿಣವು ಕಬ್ಬಿಣವನ್ನು ಹರಿತಗೊಳಿಸುವಂತೆ ಇತರರ ಸಲುವಾಗಿರುವ ನಮ್ಮ ಸಾಮರ್ಥ್ಯವು ನಮಗೆ ಆಶೀರ್ವಾದಗಳನ್ನು ತರುತ್ತದೆ. ಇನ್ನೂ ಹೆಚ್ಚಾಗಿ ನಾವು ನಮ್ಮ ನೆರೆಯವರನ್ನು ವಿಶೇಷವಾಗಿ ವಿಶ್ವಾಸದ ನಮ್ಮ ಮನೆವಾರ್ತೆಯವರನ್ನು ನಮ್ಮಂತೆಯೇ ಪ್ರೀತಿಸುವ ಒಂದು ಭವ್ಯವಾದ ಸ್ಥಿತಿಗೆ ಬರುವ ಸಮಯದಲ್ಲಿ ಇವುಗಳೆಲ್ಲದರ ಹಿಂದಿರುವ ಮುಖ್ಯ ಕೊನರು ನಮ್ಮ ಸೃಷ್ಟಿಕರ್ತನ, ವಿಮೋಚಕನ ಮೇಲಿರುವ ಉತ್ಕೃಷ್ಟವಾದ ಪ್ರೀತಿ ಮತ್ತು ಆತನಿಗೆ ಇಷ್ಟವಾದುದನ್ನು ಮಾಡುವುದು ಇವುಗಳಾಗಿರತಕ್ಕದ್ದು. ಆದುದರಿಂದ ನಮ್ಮ ಪವಿತ್ರಪಡಿಸುವಿಕೆಯು ಮೊದಲಿಗೆ ಪ್ರಾಥಮಿಕವಾಗಿ ದೇವರ ಕಡೆಗೆ ಇರತಕ್ಕದ್ದು ಮತ್ತು ಇದು ಮೊದಲಿಗೆ ನಮ್ಮ ಸ್ವಂತ ಹೃದಯ ಮತ್ತು ಚಿತ್ತದ ಮೇಲೆ ಪರಿಣಾಮವನ್ನುಂಟುಮಾಡುತ್ತದೆ. ದೇವರಿಗೆ ಇಂಥಾಃ ಭಕ್ತಿಯ ಫಲವಾಗಿ ಅದರ ಬಳಕೆ ಮತ್ತು ಆಸಕ್ತಿಯು ಸಹೋದರರ ಮತ್ತು ಎಲ್ಲಾ ಜನರ ಹಿತಾಸಕ್ತಿಯಲ್ಲಿ ಕಂಡುಬರುತ್ತದೆ.

## ಸತ್ಯದ ಮೂಲಕವಾಗಿ ಪವಿತ್ರತೆ ಹೊಂದಿರುವುದು

ಮೇಲಿನವುಗಳಿಂದ ಸ್ಪಷ್ಟವಾಗುವುದೇನೆಂದರೆ, ದೇವರು ಬಯಸುವ ಪವಿತ್ರ ಪಡಿಸುವಿಕೆಯು – ನೂತನ ಸೃಷ್ಟಿಯಲ್ಲಿ ಸ್ಥಾನಗಳಿಸಲು ಬೇಕಾಗಿರುವ ಪವಿತ್ರ ಪಡಿಸುವಿಕೆಯು ಕ್ರಿಸ್ತನ ಶಾಲೆಯಲ್ಲಿರುವವರಿಗಲ್ಲದೆ ಬೇರೆ ಯಾರಿಗೂ ಸಾಧ್ಯವಿಲ್ಲ. ಯಾಕೆಂದರೆ ಅವರುಗಳು ಆತನ ಬಗ್ಗೆ ಕಲಿತಿರುತ್ತಾರೆ ಮತ್ತು ಈ ಸತ್ಯದ ಮೂಲಕ ಪವಿತ್ರಗೊಂಡಿರುತ್ತಾರೆ. ತಪ್ಪಾಗಲೀ, ತಿಳಿಗೇಡಿತನವಾಗಲೀ ಪವಿತ್ರಗೊಳಿಸುವುದಿಲ್ಲ. ಮೇಲಾಗಿ ನಾವು ಎಲ್ಲಾ ಸತ್ಯಗಳೂ ಪವಿತ್ರ ಪಡಿಸಲು ಹವಣಿಸುತ್ತವೆಂದು ತಿಳಿಯುವ ತಪ್ಪನ್ನು ಮಾಡಲೇ ಬಾರದು. ಇದಕ್ಕೆ ವ್ಯತಿರಿಕ್ತವಾಗಿ, ಸಾಮಾನ್ಯವಾಗಿ ಸತ್ಯವು ಅದನ್ನು ಪ್ರೀತಿಸಿ ಅದಕ್ಕೆ ಅನುರೂಪವಾಗಿ ಸುಳ್ಳನ್ನು ದ್ವೇಷಿಸುವವರೆಲ್ಲರಿಗೂ ಮೆಚ್ಚಿಗೆಯಾಗಿದೆ. ಇದಕ್ಕೆ ನಮ್ಮ ಕರ್ತನ ಮಾತೇನೆಂದರೆ 'ನಿನ್ನ ಸತ್ಯವು' (Thy Truth) ಮಾತ್ರವೇ ಪವಿತ್ರತೆಯನ್ನುಂಟುಮಾಡುತ್ತದೆ. ಇಡೀ ನಾಗರಿಕ ಪ್ರಪಂಚವು ವಯ್ಯಾರವಾಗಿ ಓಡುತ್ತಾ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಸತ್ಯಕ್ಕಾಗಿ ಕಾದಾಡುತ್ತಿದೆ. ಭೂವಿಜ್ಞಾನಿಗಳು ಕ್ಷೇತ್ರದ ಒಂದೆಡೆ ಇದ್ದರೆ, ಖಗೋಳ ಶಾಸ್ತ್ರಜ್ಞರು ಮತ್ತೊಂದೆಡೆ, ರಸಾಯನ ಶಾಸ್ತ್ರಜ್ಞರು ಒಂದೆಡೆಯಾದರೆ ವೈದ್ಯರುಗಳು ಮತ್ತೊಂದೆಡೆ. ರಾಜಕಾರಣಿಗಳು ಇನ್ನೊಂದೆಡೆ ಇವೇ ಮುಂತಾಗಿ ' ಆದರೆ ಈ ಎಲ್ಲಾ ಸತ್ಯಾನ್ವೇಷಣೆಯ ವಿವಿಧ ಶಾಖೆಗಳು ಪವಿತ್ರ ಪಡಿಸುವಿಕೆಗೆ ನಡೆಸುತ್ತವೆಂದು ನಾವು ಕಂಡುಕೊಳ್ಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಾವು ನಿಯಮಾನುಸಾರ ಅವರುಗಳು ವಿರುದ್ಧ ದಿಕ್ಕಿನತ್ತ ನಮ್ಮನ್ನು ಕೊಂಡೊಯ್ಯುವುದನ್ನು ನಾವು ಕಾಣುತ್ತೇವೆ. ಇದು ಅಪೋಸ್ತಲನ ಹೇಳಿಕೆಯಾದ – ***ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೇ*** (೧ ಕೊರಿ ೧:೨೧) ಎಂಬುದಕ್ಕೆ ಸಮವಾಗಿದೆ. ನಿಜ ಸಂಗತಿಯೆಂದರೆ, ಪ್ರಸ್ತುತ ಜೀವನದ ಸ್ವಲ್ಪ ವರ್ಷಗಳಲ್ಲಿಯೇ ಮತ್ತು ನಮ್ಮ ಇಂದಿನ ಪತನಗೊಂಡ, ಅಸಮರ್ಪಕವಾದ ಮತ್ತು ನೀತಿಭ್ರಷ್ಟವಾದ ಸ್ಥಿತಿಯಲ್ಲಿ ಸತ್ಯದ ಸಮಗ್ರ ಕ್ಷೇತ್ರದಲ್ಲಿ ನಮ್ಮ ಪ್ರಯತ್ನವು ಬಹಳ ಅಲ್ಪವಾಗಿದೆ ; ಆದುದರಿಂದ ನಾವು ವಿಶೇಷ ಜನರು ಮಾತ್ರವೇ ಇದರಲ್ಲಿ ಜಯಶಾಲಿಗಳಾಗುತ್ತಾರೆಂದು ನಾವು ನೋಡುತ್ತೇವೆ. ಖಗೋಳ ಶಾಸ್ತ್ರಕ್ಕೆ ತನ್ನ ಗಮನವನ್ನು ಕಳೆಯುವ ವ್ಯಕ್ತಿಯು ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಸಾಕಷ್ಟು ಸಂಗತಿಗಳನ್ನು ಹೊಂದಿರುತ್ತಾನೆ – ಭೂಗೋಳ ಶಾಸ್ತ್ರಕ್ಕೆ, ರಸಾಯನ ಮತ್ತು ಸಸ್ಯ ಶಾಸ್ತ್ರಕ್ಕೆ ಅಥವಾ ಈ ಎಲ್ಲಾ ಶಾಸ್ತ್ರಗಳಿಗೂ ಮಿಗಿಲಾದ ಕಾಲಮಾನದ ದೇವರಯೋಜನೆಯೆಂಬ 'ನಿನ್ನ ಸತ್ಯ'ಕ್ಕೆ ಆತನಲ್ಲಿ ಸಮಯವಿಲ್ಲ. ಈ ದೃಷ್ಟಿಕೋನದಿಂದ ಆಕಾಲದಲ್ಲಿ ಸ್ವಯಂ ವಿದ್ಯಾವಂತನಾಗಿದ್ದ ಅಪೋಸ್ತಲನು ತಿಮೋಥೆಗೆ "ಸಿದ್ಧಾಂತಗಳು ಮತ್ತು ವಿಜ್ಞಾನವನ್ನೊಳಗೊಂಡು ಮಾನವ ತತ್ವಶಾಸ್ತ್ರವೆಂದು ತಪ್ಪಾಗಿ ಕರೆಯಲ್ಪಡೆಯುವುದರ ಬಗ್ಗೆ ಎಚ್ಚರಿಕೆಯಿಂದಿರು" ಎಂಬ ಬುದ್ಧಿ ಮಾತುಗಳನ್ನು ಹೇಳುತ್ತಾನೆ. ವಿಜ್ಞಾನ ಎಂಬ ಪದವು ಸತ್ಯವನ್ನು ಸೂಚಿಸುತ್ತದೆ. ಅಪೊಸ್ತಲನು ಖಂಡಿತವಾಗಿಯೂ ಆತನ ಕಾಲದ ವಿಜ್ಞಾನಿಗಳ

ಪ್ರಾಮಾಣಿಕತೆಯನ್ನು ಆಕ್ಷೇಪಿಸುವುದಿಲ್ಲ ಅಥವಾ ಅವರೆಲ್ಲರೂ ಉದ್ಧೇಶಪೂರ್ವಕವಾದ ಸುಳ್ಳುಗಾರರು ಎಂಬ ಅರ್ಥವನ್ನು ಸಹಾ ನೀಡುವುದಿಲ್ಲ ; ಆದರೆ ಈ ಎಲ್ಲಾ ವಿಜ್ಞಾನಗಳಲ್ಲಿ ಸ್ವಲ್ಪಮಟ್ಟಿನ ಸತ್ಯದ ಸಂಬಂಧ ಇರುವುದಾದರೂ ವಿಜ್ಞಾನಗಳೆಂದು ಕರೆಯಲ್ಪಡುವ ಮಾನವ ಸಿದ್ಧಾಂತಗಳೆಲ್ಲವೂ ಸತ್ಯವಲ್ಲ – ಸಂಪೂರ್ಣವಾಗಿ ಸರಿಯಾದುದೂ ಅಲ್ಲ ವೆಂದು ನಮಗೆ ವಿಜ್ಞಾನದ ಪಥವು ಧೃಡಪಡಿಸಿತ್ತದೆಂಬ ಅಲೋಚನೆಯನ್ನು ಈ ಮಾತುಗಳು ನಮಗೆ ನೀಡುತ್ತವೆ. ಅವುಗಳು ಕೇವಲ ಉತ್ತಮವಾದ ಊಹೆಗಳಾಗಿದ್ದು ಈ ಅಧ್ಯಯನಾ ಇಲಾಖೆಗಳಲ್ಲಿ ಅತ್ಯುತ್ತಮ ತತ್ಪರರಾದ ವಿದ್ಯಾರ್ಥಿಗಳು ಇವನ್ನು ಮುಂದುವರೆಸಬಹುದು ; ಇವುಗಳು ಸಮಯದಿಂದ ಸಮಯಕ್ಕೆ ಬದಲಾಗುವುದೆಂದು ಇತಿಹಾಸವು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. ಐವತ್ತು ವರ್ಷಗಳ ಹಿಂದಿನ ವಿಜ್ಞಾನಿಗಳು ತಮ್ಮ ಹಿಂದಿನ ಕಾಲದ ವಿಜ್ಞಾನವನ್ನು ತೊರೆದುಬಿಡುವಂತೆ ಇಂದಿನ ವಿಜ್ಞಾನಿಗಳು ಸಹಾ ಹಿಂದಿನವುಗಳನ್ನು ತೊರೆದುಬಿಡುತ್ತಾರೆ.

ಅಪೋಸ್ತಲನಾದ ಪೌಲನು ಒಬ್ಬ ಬುದ್ದಿಜೀವಿಯೂ, ಅಭಿಷಕ್ತನೂ, ರಾಜ ಯಾಜಕತ್ವದ ಸದಸ್ಯನು, ಮಹಾ ಯಾಜಕನ ಹೆಜ್ಜೆಜಾಡಿನಲ್ಲಿ ನಡೆಯಲು ಆತನ ಅನೇಕ ಸಂಗಡಿಗರಿಗಿಂತ ಹೆಚ್ಚಾದ ಸ್ವಾಭಾವಿಕ ಅರ್ಹತೆ ಹೊಂದಿದವನು ಮಾತ್ರನಾಗಿರದೆ, ಇದರೊಂದಿಗೆ ೧೨ ಮಂದಿ ಅಪೋಸ್ತಲರಲ್ಲಿ ಒಬ್ಬನಾಗಿ ಆರಿಸಲ್ಪಟ್ಟು ಯೂದನ ಸ್ಥಾನವನ್ನಲಂಕರಿಸಿದ ಇವನು ವಿಶೇಷವಾಗಿ ಕರ್ತನ ಬಗ್ಗೆ ವಿನ್ಯಾಸಗೊಂಡ ಆತನ ಬೋಧನೆಗಳಲ್ಲಿದೇವ ಮಾರ್ಗದರ್ಶನದ ಅಧೀನದಲ್ಲಿದ್ದು ಪೂರ್ಣವಾಗಿ ಸುವಾರ್ತಾಯುಗದಲ್ಲಿ ವಿಶ್ವಾಸದ ಮನೆವಾರ್ತೆಯವರಿಗೆ ಉತ್ತಮ ಶಿಕ್ಷಕನಾಗಿದ್ದನು. ಆತನ ದೀಕ್ಷೆಯ ಉದಾಹರಣೆಗೆ ಕಡಿಮೆ ಇಲ್ಲದಂತೆ ಪ್ರತಿಷ್ಠೆ ಹೊಂದಿದವರೂ ರಾಜ ಯಾಜಕತ್ವದ ಸದಸ್ಯರಾಗಲು ಅಂಗೀಕಾರ ಹೊಂದಿದವರೂ ಆದ ನಮಗೆ ನಾವು ಪ್ರವೇಶಮಾಡಿರುವ ಪಥದ ಅಧ್ಯಯನದಲ್ಲಿ ಅಂಥಾಃ ಕುಲೀನ, ವಿಶ್ವಾಸದ ಆದರ್ಶ ವ್ಯಕ್ತಿಯ ಮಾತುಗಳು ಬಹಳ ತೂಕವುಳ್ಳವುಗಳಾಗಿರ ತಕ್ಕದ್ದು. ನಾವು ಎಲ್ಲಾ ಭಾರವನ್ನೂ, ಕೆಟ್ಟದಕ್ಕೆ ಸಜ್ಜುಗೊಳಿಸುವ ಸಂಗತಿಗಳನ್ನು ಬದಿಗಿಟ್ಟು, ನಮಗೆ ನೇಮಕವಾದ ಓಟವನ್ನು ನಮ್ಮ ವಿಶ್ವಾಸದ ಕರ್ತೃವಾದ ಕ್ರಿಸ್ತನಮೇಲೆ ದೃಷ್ಟಿಯನ್ನಿಟ್ಟು ಆತನೇ ಅದನ್ನು ಮುಗಿಸುವವನಾಗುವವರೆಗೆ ಸ್ಥಿರಚಿತ್ತದಿಂದ ಓಡಬೇಕೆಂದು ಆತನು ಉಪದೇಶಿಸುತ್ತಾನೆ. (ಇಬ್ರಿಯ ೧೨:೨ ನೋಡಿರಿ). ಎಚ್ಚರಿಕೆಯಾಗಿ, ಆತನು ನಮಗೆ ತನ್ನ ಸ್ವಂತ ಅನುಭವವನ್ನು ಎತ್ತಿ ತೋರಿಸುತ್ತಾ ***"ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವುದಿಲ್ಲ ; ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು*** (ವಿದ್ಯಾರ್ಥಿಯಾಗಿದ್ದಾಗಿನ ಆಕಾಂಕ್ಷೆಗಳು, ರೋಮಾಯ ಪ್ರಜೆಯಾಗಿ ನನ್ನ ಹಿಂದಿನ ನಿರೀಕ್ಷೆಗಳು, ಒರ್ವ ಸುಮಾರಾದ ವಿದ್ಯಾಭ್ಯಾಸಕ್ಕಿಂತಲೂ ಹೆಚ್ಚಿನ ವಿದ್ಯಾಭ್ಯಾಸ ಮಾಡಿದವನು ಎಂಬುದನ್ನು) ***ಮರೆತುಬಿಟ್ಟು ಮುಂದಿನವುಗಳನ್ನು (ನನ್ನ ನಂಬಿಕೆ, ನಿರೀಕ್ಷೆ, ಪ್ರೀತಿ ಮತ್ತು ಭಕ್ತಿ ಇವುಗಳ ದೃಷ್ಟಿಯಿಂದ ದೇವರ ಸ್ವಭಾವದಲ್ಲಿ ದೊರೆಯಲಿರುವ ಕರ್ತನೊಂದಿಗಿನ ಜೊತೆ ವಾರಸುದಾರಿಕೆಯ ಮೇಲೆ ಮತ್ತು ಈ ಲೋಕದ ಆಶೀರ್ವಾದಕ್ಕಾಗಿ ರಾಜ್ಯದ ಮಹತ್ಕಾರ್ಯಗಳ ಮೇಲೆ ಕಣ್ಣಿಟ್ಟು) ಹಿಡಿಯುವುದಕ್ಕೆ ಎದೆಬೊಗ್ಗಿದವನಾಗಿ ದೇವರು ಕ್ರಿಸ್ತನ ಮೂಲಕವಾಗಿ ನಮ್ಮನ್ನು ಮೇಲಕ್ಕೆ ಕರೆದು ನಮ್ಮ ಮುಂದೆ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇದ್ದೇನೆ"*** (ಫಿಲಿ ೩ : ೧೩–೧೪).

## ಉದ್ರೇಕವು ಪವಿತ್ರಪಡಿಸುವಿಕೆ ಅಲ್ಲ

ಈ ಕಾಲದ ಪ್ರಾಮಾಣಿಕ ತ್ಯಾಗಿಗಳಿಗೆ ಕರ್ತನು ಅಂಗೀಕಾರ ದಯಪಾಲಿಸಿರುವ ಬಗ್ಗೆ ಇರುವ ಸಾಕ್ಷಾಧಾರಗಳ ವಿಷಯದಲ್ಲಿ ಕ್ರೈಸ್ತ ಜನರಲ್ಲಿ ಬಹಳಷ್ಟು ಅಲೋಚನಾ ಗೊಂದಲಗಳಿವೆ. ಕೆಲವರು ಪ್ರಾರಂಭದಲ್ಲಿ ಪಂಚಾಶತ್ತಮ ದಿನದ ಆಶೀರ್ವಾದಲ್ಲಿ ಲಭಿಸಿದಂತೆ ಬಾಹ್ಯ ಪ್ರಕಟನೆಯನ್ನು ತಪ್ಪಾಗಿ ನಿರೀಕ್ಷಿಸುತ್ತಾರೆ. ಮತ್ತೆ ಕೆಲವರು ಆಂತರಿಕವಾದ ಆನಂದಮಯ ಭಾವೋಧ್ರೇಕವನ್ನು ಬಯಸುತ್ತಾರೆ. ಇಂಥಾಃ ನಿರೀಕ್ಷೆಗಳು ನೆರವೇರದೇ ಹೋದಲ್ಲಿ ನಿಜವಾಗದಿದ್ದಲ್ಲಿ ನಿರಾಸಯನ್ನುಂಟುಮಾಡುವುದಲ್ಲದೆ ಅವರು ಕರ್ತನ ಅಂಗೀಕಾರ ಪಡೆದಿರುವ ಬಗ್ಗೆ ಜೀವನ ಪರ್ಯಂತ ಅನುಮಾನ

ಉಂಟಾಗುತ್ತದೆ. ಅವರ ನಿರೀಕ್ಷೆಗಳು ಹೆಚ್ಚಾಗಿ ಇತರ ಸಹೋದರರುಗಳು ಅವನ್ನು ಸಮೃದ್ಧಿಯಾಗಿ ಅನುಭವಿಸಿ ನುಡಿಯುವ ಸಾಕ್ಷಿಗಳ ಮೇಲೆ ಕಟ್ಟಿದವುಗಳಾಗಿವೆ. ಆದುದರಿಂದ, ದೇವರ ವಾಕ್ಯದಲ್ಲಿ ಎಲ್ಲಿಯೂ ಇಂಥಾಃ ನಿರೀಕ್ಷೆಗಳ ಭರವಸೆ ನೀಡುವುದಿಲ್ಲ ಎಂಬುದನ್ನು ಎಲ್ಲರೂ ಕಲಿತುಕೊಳ್ಳುವುದು ಮುಖ್ಯವಾಗಿದೆ. ನಾವೆಲ್ಲರೂ ಒಂದೇ ನಿರೀಕ್ಷೆಯುಳ್ಳ ಕರೆಯಿಂದ ಕರೆಯಲ್ಪಟ್ಟಿದ್ದೇವೆ. ಇದು ನಮ್ಮ ಹಿಂದಿನ ಪಾಪಗಳನ್ನೆಲ್ಲಾ ಕ್ಷಮಾಪಣೆ, ದೇವರ ಹಸನ್ಮುಖ ಚಹರೆ, ನಾವು ಓಡಿ ನಮಗಾಗಿ ನೀಡಲು ಇತ್ತಿರುವ ಬಹುಮಾನವನ್ನು ಪಡಕೊಳ್ಳಲು ಆತನ ಕೃಪಾ ಸಹಾಯ – ಎಲ್ಲಾ ಅಗತ್ಯತೆಗಳ ಸಮಯಕ್ಕೆ ಅಗತ್ಯವಾದ ಕೃಪೆ, ಕರೆಯ ಅಡಿಯಲ್ಲಿ ಬರುವವರೆಲ್ಲರೊಡನೆ ಸಂಬಂಧ ಇವುಗಳ ವಾಗ್ದಾನವನ್ನು ನೀಡುವುದಾಗಿದೆ. ದೇವಜನರು ತಾವು ಮನುಷ್ಯರಿಂದ ಅಥವಾ ದೇವರಿಂದ ಪಡೆದುಕೊಳ್ಳುವ ಐಹಿಕ ಅಥವಾ ಆತ್ಮಿಕವಾದ ಯಾವುದೇ ವಾಗ್ದಾನಗಳಲ್ಲಿ ಬಹಳವಾದ ವತ್ಯಾಸವುಳ್ಳವರಾಗಿರುತ್ತಾರೆ. ಕೆಲವರು ಹೆಚ್ಚು ಚಂಚಲರೂ, ಉದ್ರೇಕಿಗಳೂ ಆಗಿರುತ್ತಾರೆ. ಒಂದೇ ಅನುಭವವನ್ನು ಹಂಚಿಕೊಳ್ಳುವ ರೀತಿಯಲ್ಲಿ, ಮಾತುಗಳಲ್ಲಿ ಇತರರಿಗಿಂತ ಹೆಚ್ಚಾದ ನಿರೂಪಣೆ ಮಾಡುವವರಾಗಿರುತ್ತಾರೆ. ಇದರೊಂದಿಗೆ ತನ್ನ ಮಕ್ಕಳೊಂದಿಗೆ ದೇವರ ನಡುವಳಿಕೆಯೂ ಸ್ವಲ್ಪಮಟ್ಟಿನ ಸ್ಪಷ್ಟವಾದ ವತ್ಯಾಸ ವುಳ್ಳದ್ದಾಗಿರುತ್ತದೆ. ಸಭೆಯ ಮಹಾ ಶಿರಸ್ಸಾಗಿರುವ ನಮ್ಮ ಕರ್ತನಾದ ಯೇಸು ಕ್ರಿಸ್ತನು ಮೂವತ್ತು ವರ್ಷದವನಾಗಿದ್ದಾಗ ದೇವರ ಚಿತ್ತಕ್ಕೆ ಮರಣ ಪರ್ಯಂತ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡನು, ಆಗ ಆತನು ಪವಿತ್ರಾತ್ಮನಿಂದ ಮೇರೆ ಇಲ್ಲದಂತೆ ಅಭಿಷೇಕ ಹೊಂದಿಕೊಂಡರೂ ಯಾವುದೇ ಅಮಿತವಾದ ಅನುಭವವನ್ನು ಪ್ರಕಟಿಸಿದನೆಂದು ಈ ವರೆಗೆ ನಮಗೆ ಎಲ್ಲೂ ತಿಳಿಸಲ್ಪಟ್ಟಿಲ್ಲ. ಹೇಗಾದರೂ ಆತನ ಮಾರ್ಗವು ಸರಿಯಾದುದು, ತಂದೆಯು ತನ್ನನ್ನು ಅಂಗೀಕರಿಸಿದ್ದಾನೆ ಎಂಬ ಪ್ರತ್ಯಕ್ಷೀಕರಣದಿಂದ ಆತನು ತುಂಬಲ್ಪಟ್ಟನು. ಅನುಭವಗಳೇನೇ ಇರಲಿ ಇವುಗಳೆಲ್ಲವೂ ದೇವರ ಆಶೀರ್ವಾದಗಳಾಗಿದ್ದವು. ಆದಾಗ್ಯೂ, ಆನಂದ ಗಿರಿಯ ಬೆಟ್ಟದ ತುದಿಗೆ ಆತನನ್ನು ಕೊಂಡೊಯ್ಯದೆ, ಶೋಧನೆಗೊಳಪಡಿಸುವುದಕ್ಕಾಗಿ ಪವಿತ್ರಾತ್ಮನು ಆತನನ್ನು ಅಡವಿಗೆ ಕೊಂಡೊಯ್ದನು. ಆತ್ಮನಿಂದ ಪಡಕೊಂಡವನಾಗಿ, ಒರ್ವ ನೂತನ ಸೃಷ್ಟಿಯಾಗಿ ಆ ರೀತಿಯ ತೀವ್ರತರ ಶೋಧನೆಗೊಳಗಾಗುವುದು ಆತನ ಪ್ರಥಮ ಅನುಭವವಾಗಿತ್ತು. ವಿರೋಧಿಗೆ ಆತನನ್ನು ದಾಳಿಮಾಡುವ ಅನುಮತಿಯನ್ನು ನೀಡಲಾಯಿತು. ಆತನು ತಂದೆಯ ಚಿತ್ತಕ್ಕೆ ವಿರೋಧವಾಗಿ ನಡೆಯುವಂತೆ, ತಾನು ಬಂದ ಕಾರ್ಯವನ್ನು ನೆರವೇರಿಸಲು ಅನೇಕ ಇತರ ಉಪಾಯಗಳನ್ನು, ಅನುಭವಗಳನ್ನು ಆತನಿಗೆ ಸೂಚಿಸಲಾಗುತ್ತದೆ. ಈ ಉಪಾಯಗಳಲ್ಲಿ ತನ್ನನ್ನು ಮರಣಕ್ಕೆ ಸಮರ್ಪಿಸುವುದು ಇತ್ತಿಲ್ಲ. ಕರ್ತನ ಕೆಲವು ಅನುಯಾಯಿಗಳ ಅಭಿಷೇಕದ ಸಮಯದಲ್ಲಿಯೂ, ನಂತರದಲ್ಲಿಯೂ ಅದೇ ರೀತಿ ಆಗುವುದೆಂದು ನಾವು ನಂಬುತ್ತೇವೆ. ಅವರು ಅನುಮಾನಗಳ, ಅಂಜಿಕೆಗಳ, ವಿರೋಧಿಯ ಸಲಹೆಗಳ ದಾಳಿಗೆ ತುತ್ತಾಗುತ್ತಾರೆ, ಲೌಕಿಕ ಸಂಗತಿಗಳನ್ನು ನಿರಾಕರಿಸಲು ಅಗತ್ಯವಾದ ದೇವರ ಜ್ಞಾನ ಮತ್ತು ಪ್ರೀತಿಯನ್ನು ಆಕ್ಷೇಪಿಸುತ್ತಾರೆ. ಇಂಥಾಃ ವಿಷಯಗಳಲ್ಲಿ ನಾವು ಒಬ್ಬರನ್ನೊಬ್ಬರು ನಿರ್ಣಯಿಸುವುದು ಬೇಡ. ಆದರೆ ಯಾರಾದರೂ ಭಾವನೆಗಳ ಭಾವೋದ್ರೇಕದಿಂದ ಅನಂದಿಸುವುದಾದದಲ್ಲಿ, ಅದೇ ರೀತಿಯಲ್ಲಿ ಅಭಿಷೇಕ ಹೊಂದಿದ ಇತರರೆಲ್ಲರೂ ಅವರ ಅನುಭವದಲ್ಲಿ ಆನಂದಿಸಲಿ. ಅಭಿಷೇಕ ಹೊಂದಿದ ಮತ್ತೊಬ್ಬರು ಪರೀಕ್ಷೆಯಲ್ಲಿ ಸಿಲುಕಿಕೊಂಡು ದುಃಖದಿಂದ ಆವರಿಸಿ ಕೊಂಡಲ್ಲಿ ಇತರರು ಅವರೊಂದಿಗೆ ಅನುಕಂಪವುಳ್ಳವರಾಗಿದ್ದು ಅವರನ್ನು ಸಹಾ ಸಂತೋಷಗೊಳಿಸಲಿ. ಅವರ ಅನುಭವವು ಎಷ್ಟರ ಮಟ್ಟಿಗೆ ಅವರ ನಾಯಕನ ಅನುಭವದಂತಿದೆಯೆಂಬುದನ್ನು ಅವರು ಗ್ರಹಿಸಿಕೊಳ್ಳಲಿ.

ದೇವರ ಪ್ರಿಯ ಜನರಾದ ಜಾನ್ ಮತ್ತು ಚಾರ್ಲ್ಸ್ ವೆಸ್ಲಿ ಎಂಬುವವರು ನಿಸ್ಸಂದೇಹವಾಗಿ ತಾವಾಗಿಯೇ ಅಭಿಷಕ್ತರಾದವರು ; ಹೀಗಿದ್ದರೂ ಅವರ ಅಭಿಷೇಕದ ಫಲದ ಭಾವನೆಗಳು ಕೆಲ್ವರಿಗೆ ಒಳ್ಳೇದನ್ನು ಮಾಡಿತಾದರೂ ಹೆಚ್ಚಾದ ಪ್ರಮಾಣದಲ್ಲಿ ಇತರರಿಗೆ ಹಾನಿಯನ್ನುಂಟುಮಾಡಿತು. ಎಲ್ಲರೂ ಗ್ರಹಿಸಲಾಗದ ದೇವರ ವಾಕ್ಯದಲ್ಲಿಲ್ಲದ ನಿರೀಕ್ಷಣೆಗಳನ್ನು ರಚಿಸಿ ಅವರಿಗೆ ನಿರುತ್ಸಾಹವನ್ನುಂಟುಮಾಡುವುದರ ಮೂಲಕ ಅಂಥಾಃ ಕೇಡನ್ನುಂಟುಮಾಡಿತು. ದೇವರಿಗೆ ಅಭಿಷಕ್ತರಾಗುವುದು ಎಂದರೆ ಎಲ್ಲಾ ಸಮಯಗಳಲ್ಲೂ ಒಂದೇ ಪ್ರಮಾಣದ ಬಹಳ ಸೊಂಪಾದ ಅನುಭವವೆಂದು ಗ್ರಹಿಸಿ ಅದರಂತೆ ಬೋಧಿಸಿದ್ದು ಅವರ ಪಾಲಿನ ದೊಡ್ಡ ತಪ್ಪು. ಕ್ರೈಸ್ತ ತಂದೆ-ತಾಯಿಗಳಿಗೆ ಹುಟ್ಟಿದವರು ಮತ್ತು ಕ್ರೈಸ್ತ ಮನೆಯ ಪೂಜ್ಯ ಪ್ರಭಾವದಲ್ಲಿ ಬೆಳೆಯಿಸಲ್ಪಟ್ಟವರು, ಅವರ ತಂದೆತಾಯಿಗಳ ನಂಬಿಕೆಗೆ ತಕ್ಕಂತೆ ಜೀವನದ ಎಲ್ಲಾ ವಿಷಯಗಳಲಿ ದೇವರ ವಾಕ್ಯದ ಮೂಲಕ ಶಿಕ್ಷಿತರಾದವರು ಇಂಥಾಃ ಸಂದರ್ಭಗಳಲ್ಲಿ ಸದಾ ದೇವರ ಚಿತ್ತವನ್ನು ತಿಳಿಯಲು ಮತ್ತು

ಅದನ್ನು ಪಾಲಿಸ ಬಯಸಿದವರು ಹಲವು ವರ್ಷಗಳ ವಿವೇಚನೆ ಪಡೆದು, ಕರ್ತನಿಗೆ ವೈಯುಕ್ತಿಕವಾಗಿ ಅಭಿಷೇಕವನ್ನು ಮಾಡಿಕೊಂಡ ನಂತರ, ಆವರೆಗೆ ದುಂದುಗಾರರಾಗಿದ್ದವರು, ಅನ್ಯರಾಗಿದ್ದವರು, ಪವಿತ್ರ ಸಂಗತಿಗಳಿಗೆ ಅಪರಿಚಿತರೂ ಪರಕೀಯರಂತಿದ್ದವರು ಈಗ ಅನುಭವಿಸುವ  ತುಂಬಿ ತುಳುಕುವ ಅನಂದವನ್ನು ಅವರು ಸಹಾ ಅದೇ ಪಡೆಯುವರೆಂದು ನಿರೀಕ್ಷಿಸಬಾರದು.

ಮೇಲಿನವರಲ್ಲಿ ಎರಡನೆಯವರ ಪರಿವರ್ತನೆಯೆಂದರೆ ಅದೊಂದು ಮಹತ್ವದ ಬದಲಾವಣೆ. ಈ ಹಿಂದೆ ದೇವರಿಂದ ದೂರ ಸರಿಯುವಂತೆ ಮಾಡಿದ್ದ ಸೆಳೆತ ಮತ್ತು ಒತ್ತಾಯಗಳಿಂದ, ಪಾಪ ಮತ್ತು ಸ್ವಾರ್ಥದಿಂದ ಹಿಂದೆ ಸರಿದು ದೇವರ ಕಡೆಗೆ ತಿರುಗಿಕೊಳ್ಳುವುದು ; ಆದರೆ ಮೊದಲನೆಯವರ ಮನೋಭಾವನೆಗಳು, , ಭಯಭಕ್ತಿ ಮತ್ತು ಶ್ರದ್ಧೆಗಳು ಶೈಶ್ಯಾವಸ್ತೆಯಿಂದಲೂ ದೈವ ಭಕ್ತ ತಂದೆತಾಯಿಗಳ ಮೂಲಕ ಕರ್ತನ ಮತ್ತು ಆತನ ನೀತಿಯೆಡೆಗೆ ಸರಿಯಾದ ರೀತಿಯಲ್ಲಿ ನಿರ್ದೇಶಿಸಲ್ಪಟ್ಟಿದ್ದು ಅವರು ಯಾವುದೇ ಆಕಸ್ಮಿಕವಾದ ಮನೋಭಾವನೆಯ ಕ್ರಾಂತಿಯನ್ನು ಅನುಭವಿಸುವುದಿಲ್ಲ ಮತ್ತು ಈ ರೀತಿಯಾದ ಯಾವುದನ್ನೂ ನಿರೀಕ್ಷಿಸುವುದಿಲ್ಲ. ಅಂಥವರು ಗ್ರಹಿಸಬೇಕಾದುದೇನೆಂದರೆ, ವಿಶ್ವಾಸಿ ತಂದೆ ತಾಯಿಗಳ ಮಕ್ಕಳಾಗಿ ಅವರು ತಮ್ಮ ಜವಾಬ್ದಾರಿಯನ್ನು ಖುದ್ದಾಗಿ ವಹಿಸಿಕೊಳ್ಳುವವರೆಗೂ ದೇವರ ಕೃಪೆಯಲ್ಲಿದ್ದಾರೆ ಮತ್ತು ಈಗ ಅವರ ಅಂಗೀಕಾರವೆಂದರೆ ಅವರ ಹಿಂದಿನ ಸ್ವಾಮಿಭಕ್ತಿಗೆ ನೀಡುವ ಸಂಪೂರ್ಣವಾದ ಪ್ರಮಾಣಿಕರಣ ಮತ್ತು ಅವರ ಎಲ್ಲಾ ಮೇಧಾಶಕ್ತಿಯ, ಇತರ ಶಕ್ತಿಗಳ ಮತ್ತು ಕರ್ತನ, ಆತನ ಸತ್ಯದ ಮತ್ತು ಆತನ ಜನರ ಮೇಲಿನ ಪ್ರಭಾವದ ಸಂಪೂರ್ಣವಾದ ಸಮರ್ಪಣೆಯಾಗಿದೆ. ಇವರುಗಳು ತಮ್ಮ ಸಮರ್ಪಣೆಯು ಅವರ ಯತೋಚಿತವಾದ ಸೇವೆಯಾಗಿದೆ ಎಂದು ಗ್ರಹಿಸಬೇಕು ; ಇದು ದೇವರ ವಾಕ್ಯದಿಂದ ನಿರ್ದೇಶಿಸಲ್ಪಡಬೇಕು. ಇಗಾಗಲೇ ಸಮರ್ಥನೆಗೊಂಡ ತಮ್ಮ ಮಾನವೀಯತೆಯನ್ನು  ದೇವರಿಗೆ ಅರ್ಪಿಸಿದವರು ಈಗ ಅದನ್ನು ಮೊದಲಿಗಿಂತ ಹೆಚ್ಚಿನ ಶ್ರೇಣಿಯಲ್ಲಿ ಹೆಚ್ಚುತ್ತಿರುವ ಮಹಾ ಮತ್ತು ಅಮೂಲ್ಯವಾದ ದೇವರ ವಾಕ್ಯದ ವಾಗ್ದಾನಗಳಿಗೆ ತಕ್ಕಂತೆ ಅವರು ತಮ್ಮ ಸ್ವಂತಕ್ಕೆ ಬಳಿಸಿಕೊಳ್ಳಬೇಕು. ಇವು ಅಭಿಷಿಕ್ತರಿಗೆ ಮತ್ತು ಅವರ ಮಕ್ಕಳಿಗೆ ಮಾತ್ರ ಸಲ್ಲುವಂಥಾದ್ದು. ಇದಕ್ಕೂ ಹೆಚ್ಚಾಗಿ ಅವರಿಗೆ ದೇವರ ಯೋಜನೆಯ ಸ್ಪಷ್ಟವಾದ ಒಳನೋಟವು ಅಥವಾ ಅದರ ಪ್ರಾರಂಭವು ದೊರೆತದ್ದೇ ಆಗಿದ್ದರೆ ಅವರು ಇದನ್ನು ಸುವಾರ್ತಾಯುಗದ ಮಹಾ ಕರೆಯ ಸಂಬಂಧದಲ್ಲಿ ದೇವರ ಕೃಪೆಯ  ನಿದರ್ಶನವೆಂದು ಪರಿಗಣಿಸಬೇಕು ಮತ್ತು ಇದರಲ್ಲಿ ಉಲ್ಲಾಸಿಸಬೇಕು.

**"ನಾವು ನೋಡುವವರಾಗಿ ನಡೆಯದೆ ನಂಬುವವರಾಗಿಯೇ ನಡೆಯುತ್ತೇವೆ"** (೨ ಕೊರಿ ೫:೭) ಎಂಬ ಅಪೋಸ್ತಲನ ಮಾತುಗಳು ಸುವಾರ್ತಾ ಯುಗದ ಸಮಗ್ರ ಸಭೆಗೆ ಅನ್ವಯವಾಗುತ್ತದೆ. ದೇವರ ಚಿತ್ತವೇನೆಂದರೆ ನಾವು ಆತನನ್ನು ಕಂಡುಕೊಳ್ಳಲಾಗದ ಸ್ಥಳದಲ್ಲಿಯೂ ಆತನ ಮೇಲಿನ ವಿಶ್ವಾಸವನ್ನು ಬೆಳಿಸಿಕೊಳ್ಳಬೇಕು ಎಂಬುದೇ. ಈ ದೃಷ್ಟಿಯಲ್ಲಿ ಆತನ ಹಲವು ಸಂಗತಿಗಳನ್ನು ಪಾರ್ಶಿಕ ಅಗೋಚರವಾಗಿ ಬಿಟ್ಟುಬಿಡುತ್ತಾನೆ. ಮಾನವ ದೃಷ್ಟಿ ಅಥವಾ ನಿರ್ಣಯದಲ್ಲಿ ನಮ್ಮ ವಿಶ್ವಾಸವನ್ನು ಈ ದೆಸೆ ಮತ್ತು ಮತ್ತು ಪ್ರಮಾಣದಲ್ಲಿ ಬೆಳೆಸಬೇಕು. ನಮ್ಮ ಐಹಿಕ ಜ್ಞಾನಕ್ಕೆ ಸೂಚನೆಗಳು ಮತ್ತು ಅದ್ಭುತಗಳನ್ನು ದಯಪಾಲಿಸಿದಲ್ಲಿ ಇದು ಸಾಧ್ಯವಾಗದು. ನಮ್ಮ ತಿಳುವಳಿಕೆಯ ಕಣ್ಣುಗಳು ಆತನ ವಾಗ್ದಾನಗಳ ಮೂಲಕ, ಸೂಕ್ಷ್ಮಗ್ರಹಣದ ಮೂಲಕ ಸತ್ಯವನ್ನು ಅರಿತುಕೊಳ್ಳುವುದರ ಮೂಲಕ ದೇವರ ಕಡೆಗೆ ತೆರೆದುಕೊಳ್ಳಬೇಕು ಮತ್ತು ಇದು ನಾವಿನ್ನೂ ನೋಡದೇ ಇರುವ ಸಂಗತಿಗಳ ಬಗ್ಗೆ ಮತ್ತು ಸ್ವಾಭಾವಿಕವಾಗಿ ನಾವಿನ್ನೂ ಗ್ರಹಿಸದಿರುವುದರ ಬಗ್ಗೆ ನಮಗೆ ಸಂತೋಷವನ್ನು ಉಂಟುಮಾಡಬೇಕು.

ನಮ್ಮ ತಿಳುವಳಿಕೆಯೆಂಬ ಕಣ್ಣುಗಳು ತೆರೆಯುವುದು ಸಹಾ ಅಪೋಸ್ತಲನು ವಿವರಿಸುವಂತೆ ಕ್ರಮೇಣವಾದುದು. ಆತನು ಈಗಾಗಲೇ ಸಭೆಯಲ್ಲಿರುವವರಿಗಾಗಿ ಪ್ರಾರ್ಥಿಸುವಾಗ ಅವರನ್ನು ಸಂತರು (ದೇವ ಜನರು) ಅಥವಾ ಅಭಿಷಿಕ್ತರು ಎಂದು ಹೇಳುತ್ತಾ, ಅವರ ತಿಳುವಳಿಕೆಯ ಕಣ್ಣುಗಳು ತೆರೆಯಲ್ಪಡಲಿ ಮತ್ತು ಅವರು ಇತರ ಎಲ್ಲಾ ಸಂತರೊಡನೆ ತಿಳಿದುಕೊಳ್ಳುವಂತಾಗಲಿ ( ಬೇರೆ ಯಾರಿಗೂ ತಿಳಿಯದಂತೆ) ದೇವರ ಜ್ಞಾನ ಮತ್ತು ಪ್ರೀತಿಯ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ಗ್ರಹಿಸುವಂತಾಗಲಿ ಎಂದು ಪ್ರಾರ್ಥಿಸುತ್ತಾನೆ. ನೂತನ ಸೃಷ್ಟಿಯ ದೀಕ್ಷೆಯ ನಂತರ ಆತನನ್ನು

ಅನುಸರಿಸುವ ಆತ್ಮಿಕ ಆಶೀರ್ವಾದಗಳು ಆತನ ಲೌಕಿಕ ಜ್ಞಾನಕ್ಕೆ ಸ್ಪಷ್ಟವಾಗುವುದಿಲ್ಲ ಅದು ಕೇವಲ ಆತನ ವಿಶ್ವಾಸಕ್ಕೆ ಎಂಬ ಆಲೋಚನೆಯು ದೇವ ದರ್ಶನ ಗುಡಾರದ ಚಿತ್ರದಲ್ಲಿ ವಿಶದಗೊಳಿಸಲಾಗಿದೆ – ಪ್ರಥಮ ಪವಿತ್ರ ಮರೆಯ ಪವಿತ್ರ ವಸ್ತುಗಳನ್ನು ಲೇವಿಯರಿಂದಲೂ (ಸಮರ್ಥನೆಗೊಂಡ ಮಾದರಿಗಳು) ಮುಚ್ಚಿಡುವ ಹೊರಗಣ ಪರದೆಯು ಆಳವಾದ ಸತ್ಯದ ನಮೂನೆಯಾಗಿದೆ. ಪವಿತ್ರರಾಗಿ ಪ್ರವೇಶಿಸುವವರನ್ನು ಮಾತ್ರವೇ ರಾಜಯಾಜಕತ್ವದ ಸದಸ್ಯರು ಎಂದು ತಿಳಿಯಲಾಗುವುದು ಅಥವಾ ಹಾಗೆಂದು ಮೆಚ್ಚಿಕೊಳ್ಳಲಾಗುವುದು.

ಭಾವನೆಗಳ ಸಮೃದ್ಧಿಯು ಕೆಲವರಿಗೆ ಪ್ರಕೃತಿ ಸ್ವಭಾವದ ಕಾರಣ ಬರುವುದಾಗಿದ್ದು ಅದೇ ಕಾರಣದಿಂದ ಅದು ಪದೇ ಪದೇ ಇಲ್ಲವಾಗುವುದಿಲ್ಲ ; ಆದರೆ ಅವರು ಕರ್ತನಲ್ಲಿ ನೆಲೆಗೊಂಡು ಮುಂದುವರೆದಾಗ, ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯಲು ಬಯಸಿದಾಗ ಶಾಶ್ವತವಾಗಿ ಅವರಲ್ಲಿರುವ ಅನುಭವಗಳು ಮತ್ತು ಆಶೀರ್ವಾದ ಮತ್ತು ಸಂತೋಷಗಳು ವಿಶ್ವಾಸದ ಸಂತೋಷವಾಗಿದೆ. ಇದನ್ನು ಐಹಿಕ ಮೋಡ ಮತ್ತು ತೊಂದರೆಗಳು ಮಸುಕು ಗೊಳಿಸಲಾರವು. ಆತ್ಮೀಕ ಸಂಗತಿಗಳಲ್ಲಿ ದೇವರ ಚಿತ್ತವು ಬಹುಶಃ ಕೆಲವು ಕ್ಷಣಗಳು ಮಾತ್ರವೇ ಮಸುಕಾಗುತ್ತದೆ. ***“ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?”*** ಎಂದು ನಮ್ಮ ಕರ್ತನು ಶಿಲುಬೆಯಲ್ಲಿ ಕೂಗಿದಾಗಿನ ಸಂಧರ್ಭದಲ್ಲಿಇದನ್ನು ನೋಡಬಹುದು. ನಮ್ಮ ಒಡೆಯನು ಶಾಪಗ್ರಸ್ತ ಆದಾಮನ ಸ್ಥಾನವನ್ನು ತೆಗೆದುಕೊಂಡಾಗ, ಆದಾಮನ ಪಾಪದ ಎಲ್ಲಾ ಅನುಭವಗಳನ್ನು ಸವಿಯುವುದು ನಮ್ಮ ಕರ್ತನಿಗೆ ಅಗತ್ಯವಾಗಿತ್ತು. ಆದುದರಿಂದ ಆತನು ಇಂಥಾಃ ಅನುಭವವನ್ನು ಕ್ಷಣ ಮಟ್ಟಿಗಾದರೂ ಅನುಭವಿಸಲೇ ಬೇಕಿತ್ತು. ಅಂಥಾಃ ಅಂಧಕಾರದ ಕ್ಷಣವು ಆ ಕುರಿಮರಿಯ ಅತ್ಯುತ್ತಮ ಯೋಗ್ಯ ಅನುಯಾಯಿಗಳಿಗೆ ಬರಬಾರದೆಂದು ಯಾರು ಹೇಳಿಯಾರು? ಅಂಥಾಃ ಅನುಭವಗಳು ಹೇಗಿದ್ದರೂ ಹೆಚ್ಚು ಸಮಯದ ಅನುಮತಿ ಪಡೆದಿರುವುದಿಲ್ಲ, ಅಂಧಕಾರದ ಸಮಯದಲ್ಲಿ ದೇವರಲ್ಲಿ ಭರವಸೆ ಹಾಗೂ ವಿಶ್ವಾಸವನ್ನು ಪ್ರದರ್ಶಿಸಿದ ಆತ್ಮಕ್ಕೆ ಮೋಡವು ಚದುರಿಹೋಗಿ ಕರ್ತನ ಸೂರ್ಯಪ್ರಕಾಶವು ಮತ್ತೆ ಬೆಳಗುವಾಗ ಹೆಚ್ಚಾದ ಪ್ರತಿಫಲವು ದೊರೆಯಲಿದೆ.

ಅಳೆಯಬಹುದಾದ ಅಂಧಕಾರಕ್ಕೆ ಬೇರೆ ಕಾರಣವನ್ನು ಕವಿಯೊಬ್ಬನು ಕೆಳಗಿನ ಸಾಲುಗಳಲ್ಲಿ ಸೂಚಿಸುತ್ತಾನೆ ;–

| | |
|---|---|
| “ O! may no earthborn cloud arise | “ ಓ! ಯಾವುದೇ ಭೂಲೋಕ ಜನಿತವಾದ ಮೋಡವು ಏಳದಿರಲಿ, |
| To hide thee from thy servant’s eyes” | ನಿನ್ನನ್ನು ನಿನ್ನ ಸೇವಕನ ಕಣ್ಣಿಂದ ಮರೆಮಾಡುವಂತೆ ” |

ದೇವರ ಪೂರ್ಣ ಪ್ರತಿಷ್ಠೆಗೊಂಡ ಮಕ್ಕಳ ಮತ್ತು ಅವರ ಪರಲೋಕದ ತಂದೆ ಹಾಗೂ ಅವರ ಹಿರಿಯ ಸಹೋದರನ ನಡುವೆ ಬರುವ ಮೋಡವು ಸಾಮಾನ್ಯವಾಗಿ ಭೂಲೋಕ ಜನಿತವಾದುದು – ಐಹಿಕ ಸಂಗತಿಗಳ ಮೇಲೆ ಮೇಲಿನವುಗಳನ್ನು ಸ್ಥಾಪಿಸದೆ ಅವುಗಳ ಬಗ್ಗೆ ಪ್ರೀತಿ ತೋರಿಸಿದುದರ ಫಲ ; ದೀಕ್ಷೆಯ ಪ್ರತಿಜ್ಞೆಗಳನ್ನು ನಿರ್ಲಕ್ಷಿಸಿದುದರ ಫಲ ; ಕರ್ತನ ಸೇವೆಯಲ್ಲಿ ಸಮಯ ಕಳೆಯಲು, ನಮ್ಮ ಸಹೋದರರಿಗಾಗಿ ನಮ್ಮ ಜೀವನವನ್ನು ಅರ್ಪಿಸಲು ಮತ್ತು ಅವಕಾಶ ದೊರೆತಂತೆಲ್ಲಾ ಅವರಿಗೆ ಒಳ್ಳೇದನ್ನು ಮಾಡಲು ನಿರ್ಲಕ್ಷಿಸಿದುದರ ಫಲ. ಅಂಥಾಃ ಸಮಯಗಳಲ್ಲಿ ನಮ್ಮ ಕಣ್ಣುಗಳು ನಮ್ಮ ಕರ್ತನಿಂದ ಮತ್ತು ಆತನ ಮಾರ್ಗದರ್ಶನದಿಂದ ದೂರಕ್ಕೆ ಆಕರ್ಷಿತವಾಗುತ್ತದೆ, ಮೋಡವು ತ್ವರಿತವಾಗಿ ಬಂದು ಸೇರಲು ಪ್ರಾರಂಭಿಸುತ್ತದೆ. ಈ ಮೊದಲು ಬಹುಕಾಲದವರೆಗೆ ಇದ್ದ ಅನ್ಯೂನತೆ, ನಂಬಿಕೆ, ಭರವಸೆ ಮತ್ತು ನಿರೀಕ್ಷೆ ಎಂಬ ಸೂರ್ಯ ಪ್ರಕಾಶವು ಒಂದು ಪ್ರಮಾಣದಲ್ಲಿ ಮಂಕಾಗುತ್ತದೆ. ಇದು ಆತ್ಮನ ಛಾಯಿಲೆ ಮತ್ತು ಅವಿಶ್ರಾಂತಿಯ ಬೇರ್ಪಡಿಸುವುದಿಲ್ಲ. ಆತನು ತನ್ನ ಮುಖವನ್ನು ನಮ್ಮಿಂದ ಮರೆಮಾಡುವುದು ಆತನ ಇರುವಿಕೆಯ ಸೂರ್ಯಪ್ರಕಾಶವು ಇಲ್ಲವಾದಲ್ಲಿ ನಮ್ಮ ಸ್ಥಿತಿಯು ಎಷ್ಟರ ಮಟ್ಟಿಗೆ ಏಕಾಂತವೂ ಅತೃಪ್ತಿಕರವೂ ಆಗುತ್ತದೆ ಎಂಬುದನ್ನು ನಾವು ಅರಿತುಕೊಳ್ಳುವಂತೆ ಮಾಡುವುದು, ಈ ಬೆಳಕು ನಮ್ಮ ಮಾರ್ಗವನ್ನು ಬೆಳಗಿಸಿ ನಮ್ಮೆಲ್ಲಾ ಜೀವನದ ಹೊರೆಯು ಹಗುರವಾಗುವಂತೆ ಮಾಡುವುದಾಗಿದೆ. ಕವಿಯು ಮತ್ತೊಮ್ಮೆ ಈ ವಿಷಯದ ಬಗ್ಗೆ ಹೀಗೆ ಹೇಳುತ್ತಾನೆ :–

“Content with beholding his face
My all to his pleasure resigned
No changes of season or place
While blest with a sense of his love
A palace a toy would appear;
And prisons would palaces prove
If Jesus still dwelt with me there ”

## ನಿನ್ನ ಎಲ್ಲಾ ಕಾಯಿಲೆಗಳನ್ನು ವಾಸಿಮಾಡುವಾತನು

*“ ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ ಸಮಸ್ತ ರೋಗಗಳನ್ನು ವಾಸಿಮಾಡುವವನೂ ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ ಆಗಿದ್ದಾನೆ. ಶ್ರೇಷ್ಟವರಗಳಿಂದ ನಿನ್ನ ಆಸೆಯನ್ನು ಪೂರ್ತಿಗೊಳಿಸುತ್ತಾನೆ ; ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರುಗಿ ಬರಮಾಡುತ್ತಾನೆ (ಕೀ ೧೦೩: ೩-೫)*

ಕರ್ತನು ನೂತನ ಸೃಷ್ಟಿಗಳಿಗೆ ನಾವೀಗ ನೋಡಿದ ಕಾಯಿಲೆಗಳು ಬರಲು ಅನುಮತಿಸುವಾಗ, ಅವರು ಹೃದಯದ ಸರಿಯಾದ ಮನೋಸ್ಥಿತಿಗೆ ಬರುವಾಗ ದನ್ನು ಗುಣಪಡಿಸಲೂ ಸಿದ್ಧನಾಗಿದ್ದಾನೆ. ಆ ರೀತಿಯ ಆತ್ಮೀಕ ಕಾಯಿಲೆಗಳಿಗಾಗಿ ಪರಲೋಕದ ಕೃಪಾಸಾನವನ್ನು ಸಮೀಪಿಸಬೇಕು – ನೂತನ ಸೃಷ್ಟಿಗಳ ಅಂಥಾಃ ದುರ್ಬಲತೆ – ಆ ಆತ್ಮೀಕ ಜೀವನ, ಜೀವನ ಶಕ್ತಿ ಮತ್ತು ಆರೋಗ್ಯವು ದೇವರ ಕೃಪೆಯ ಬೆಳಕಿನಲ್ಲಿ ಮರುಳಬಹುದು. ಅಫೊಸ್ತಲನ ಪ್ರಬೋಧನೆ ಏನೆಂದರೆ – “ ***ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ*** (ನಿರ್ಭಯವಾಗಿ, ಭರವಸೆಯಿಂದ) ***ಕೃಪಾಸನದ ಮುಂದೆ ಬರೋಣ”*** (ಇಬ್ರಿಯ ೪:೧೬). ಎಲ್ಲಾ ನೂತನ ಸೃಷ್ಟಿಗಳಿಗೆ ಈ ದೆಸೆಯಲ್ಲಿ ಅನುಭವವಿದೆ ; ಯಾರು ಅವುಗಳಿಂದ ಸರಿಯಾದ ರೀತಿಯಲ್ಲಿ ಪ್ರಯೋಗ ಪಡೆಯುತ್ತಾರೋ ಕರ್ತನಲ್ಲಿ ಬಲದಿಂದ ಬಲವುಳ್ಳವರಾಗಿ ಮತ್ತು ಆತನ ಸಾಮರ್ಥ್ಯದ ಶಕ್ತಿಯಲ್ಲಿ ಬೆಳೆಯುತ್ತಾರೆ. ಹೀಗಾಗಿ ಅವರ ಮುಗ್ಗರಿಸುವಿಕೆಗಳು ಮತ್ತು ಬಲಹೀನತೆಗಳು ಸಹಾ – ಸಹಾಕ್ಕಾಗಿ ಕರೆಯುವ ಅವಶ್ಯಕತೆ, ವಿಶ್ವಾಸದಿಂದ ಕರ್ತನ ಭುಜದ ಮೇಲೆ ಕೈ ಇಡುವಿಕೆ – ಇವುಗಳು ಅವರಿಗೆ ಆತ್ಮೀಕ ಆಶೀರ್ವಾದದ ಸಾಧನೆಗಳು. ಇವುಗಳಿಂದ ಅವರು ಪರೀಕ್ಷೆಗಳೂ, ಕಷ್ಟವೂ ಇಲ್ಲವಾದಲ್ಲಿ, ಕರ್ತನು ತನ್ನ ಪ್ರಕಾಶಮಯ ಕೃಪಾದೃಷ್ಟಿಯನ್ನು ಅವರ ಹೃದಯಗಳಿಂದ ತೆಗೆಯದೇ ಹೋದಲ್ಲಿ, ಅವರು ತಣ್ಣಗಾಗಿ ಅಥವಾ ಅಧಿಕ ಶಕ್ತಿ ತುಂಬಿದವರಾಗಿ ಅಥವಾ ತಮ್ಮ ಆತ್ಮೀಕ ಸವಲತ್ತುಗಳ ಬಗ್ಗೆ ನಿರ್ಲಕ್ಷವುಳ್ಳವರಾಗಿರುವುದಕ್ಕಿಂತ ಬೇರೆಯಾದ ರೀತಿಯಲ್ಲಿ ಬೆಳೆಯುತ್ತಾರೆ. ಪ್ರತಿಯೊಂದು ಸಮಯದಲ್ಲಿಯೂ ನೂತನ ಸೃಷ್ಟಿಯು ಕೃಪೆಯನ್ನು, ಸಹಾಗಳನ್ನು ಬಯಸುವುದು ಅಗತ್ಯವೆಂದೆನಿಸುತ್ತಾನೆ. ಆತನಿಗೆ ವಿಮೋಚಕನ ಪ್ರಾಯಶ್ಚಿತ್ತ ಕಾರ್ಯದಲ್ಲಿ ಹೊಸ ನೆನಪು ಹುಟ್ಟಿಸುವಿಕೆ ಇದೆ. ಅದು ಕ್ರಿಸ್ತನ ತ್ಯಾಗವು ಹಿಂದಿನ ಅಂದರೆ ಆದಾಮನ ಪಾಪಗಳಿಗೆ ಮತ್ತು ನಾವು ಮಗನ ಅರ್ಹತೆಯ ಮೂಲಕ ತಂದೆಯ ಬಳಿಗೆ ಬರುವ ವರೆಗೆ ತೋರಿದ ಎಲ್ಲಾ ನ್ಯೂನ್ಯತೆಗಳಿಗೆ ಮಾತ್ರ ಸಾಕಾಗದೆ, ಇನ್ನೂ ಅಧಿಕವಾಗಿ ಸಮಸ್ತರಿಗಾಗಿ ಮಾಡಿದ ಒಂದೇ ಸಮರ್ಪಣೆಯಿಂದ ತೋರಿಬಂದ ಆತನ ನೈತಿಕತೆಯು ಇಚ್ಛಾಪೂರ್ವಕವಾಗಿ ನಮ್ಮದಲ್ಲದ ನಮ್ಮ ಎಲ್ಲಾ ಮಾನಸಿಕ, ನೈತಿಕ ಮತ್ತು ದೈಹಿಕ ಕಳಂಕಗಳನ್ನು ಆವರಿಸುತ್ತದೆ. ಈ ರೀತಿಯಲ್ಲಿ ನೂತನ ಸೃಷ್ಟಿಯು ಕ್ರಿಸ್ತನ ಅಮೂಲ್ಯವಾದ ರಕ್ತದ ಬೆಲೆ ತೆತ್ತು ತಂದಿರಿಸಿದ ಇಕ್ಕಟ್ಟಾದ ಮರ್ಗದಲ್ಲಿನ ತನ್ನ ಎಲ್ಲಾ ತಂಗುವಿಕೆಯಲ್ಲಿ ನಿರಂತರವಾದ ನೆನಪು ಹುಟ್ಟಿಸುವಿಕೆಯನ್ನು ಪಡೆಯುತ್ತಾನೆ ; ಆತನ ವಿಫಲತೆಗಳಲ್ಲಿನ ಅನುಭವಗಳು ವಿಮೋಚಕನಾಗಿದ್ದ ಆತನ ಹಿಂದಿನ ಕಾರ್ಯದಲ್ಲಿಯೂ ಮತ್ತು ಇಂದಿನ ಸಹಾಯಕ ಮತ್ತು ಉದ್ಧಾರಕನಾಗಿರುವ ಆತನ ಮೆಚ್ಚುಗೆಗಾಗಿಯೂ ಆತನನ್ನು ಸದಾ ಕರ್ತನ ಬಳಿಗೆ ಸೆಳೆಯುವುದಾಗಿದೆ .

ಬಹಳಷ್ಟು ನೂತನ ಸೃಷ್ಟಿಗಳು, ಎಷ್ಟಾದಾರೂ ಈ ಆತ್ಮೀಕ ಕಾಯಿಲೆಗಳ ಬಗ್ಗೆ ಕಲಿಯುವುದರ ಬದಲಾಗಿ ತಮ್ಮಷ್ಟಕ್ಕೇ " ನಾನು ಮತ್ತೊಮ್ಮೆ ಸೋತುಹೋಗಿದ್ದೇನೆ, ನಾನು ನನ್ನ ಒಳ್ಳೆಯ ಉದ್ದೇಶಗಳನ್ನು ನಿರೂಪಿಸಿ ಗೆಲ್ಲುವ ವರೆಗೆ ಪರಲೋಕದ ಕೃಪಾಸಿಂಹಾಸನವನ್ನು ಸಮೀಪಿಸಲು ಸಾಧ್ಯವಿಲ್ಲ"ಎಂದು ಹೇಳುವ ಒಲವು ತೋರುತ್ತಾರೆ. ಈ ರೀತಿಯಲ್ಲಿ ಅವರು ತಮ್ಮ ಪ್ರಥಮ ಕಾರ್ಯವಿಧಾನವಾಗಬೇಕಾದುದನ್ನು ಮುಂದೂಡುತ್ತಾರೆ. ತಮ್ಮ ಸ್ವಂತ ಬಲದ ಮೂಲಕ ವಿಜಯವನ್ನು ಬಯಸುತ್ತಾರೆ. ಆದರೆ ಅವರ ಹಿಂದಿನ ಬಲಹೀನತೆಗಳಿಂದ ಕಿರುಕುಳಗೊಂಡಿದ್ದ ಮನಸ್ಸಿನ ಕಾರಣ ಅವರು ತಮ್ಮ ಸ್ವಂತ ದೇಹದೊಂದಿಗೆ ಅಥವಾ ವಿರೋಧಿಯೊಂದಿಗೆ ಒಳ್ಳೆಯ ವಿಶ್ವಾಸದ ಹೋರಾಟವನ್ನು ಹೋರಾಡುವ ಸ್ಥಿತಿಯಲ್ಲಿರುವುದಿಲ್ಲ ಮತ್ತು ಸೋಲೆಂಬುದು ಸಹನೀಯವಾಗಿ ಬರುವುದು ಖಂಡಿತ ; ಇದರೊಂದಿನ ಕರ್ತನಿಗೆ ಮೊರೆಹೋಗುವುದು ಸಹಾ ಕ್ರಮೇಣವಾಗಿ ನಿಂತುಹೋಗುತ್ತದೆ ಮತ್ತು ದೇವರ ಕೃಪೆಯೆಂಬ ಬೆಳಕಿನಿಂದ ಅವರನ್ನು ಮರೆಮಾಡುವಂತೆ ಮಧ್ಯೆ ಬರುವ ಮೋಡಗಳಿಗೆ ವಶವಾಗುವುದು ಹೆಚ್ಚಾಗುತ್ತಾ ಹೋಗುತ್ತದೆ. ಈ ಮೋಡಗಳನ್ನು ಅವರು ನಿವಾರಿಸಲಾಗದ **ಅವರ ಪರಿಸ್ಥಿತಿ**ಯೆಂದು ಪರಿಗಣಿಸುತ್ತಾರೆ.

ಅದೇ ರೀತಿಯ ವಿರುದ್ಧ ಕ್ರಮವನ್ನು ಅನುಸರಿಸಬೇಕು : ಮಾತಿನ ಅಥವಾ ಕ್ರೀಯೆಯ ಅಥವಾ ಕೆಲಸದ ತಪ್ಪನ್ನು ಗ್ರಹಿಸಿದ ಕೂಡಲೇ ಮತ್ತು ಇತರರಿಗೆ ಮಾಡಿದ ತಪ್ಪುಗಳನ್ನು ಸಾಧ್ಯವಾದ ಮಟ್ಟಿಗೆ ಸರಿಪಡಿಸಿದ ಕೂಡಲೇ ಕೃಪಾ ಸಿಂಹಾಸನವನ್ನು ವಿಳಂಬವಿಲ್ಲದೆ ಬಯಸಬೇಕು – ನಂಬಿಕೆಯ ಮೂಲಕವೇ ಹೊರತು ಅಪನಂಬಿಕೆಯಿಂದಲ್ಲ. ಕರ್ತನು ನಮ್ಮ ವಿರುದ್ಧವಾದ ಸಂದರ್ಭಗಳನ್ನು ಕಂಡುಕೊಳ್ಳಲು ಇಷ್ಟಪಡುತ್ತಾನೆ ಮತ್ತು ನಮ್ಮನ್ನು ಕ್ರೂರವಾದ ನ್ಯಾಯವಿಚಾರಣೆಗೆ ಒಳಪಡಿಸುವ ಒಲವುಳ್ಳವನೆಂಬುದಾಗಿ ನಾವು ಭಾವಿಸಕೂಡದು ; ಅದರೆ ಮತ್ತೊಂದೆಡೆ ಆತನ ಒಳ್ಳೇತನ ಮತ್ತು ಕರುಣೆಯನ್ನು ಆತನು ತಡವಿಲ್ಲದೆ **ನಾವಿನ್ನೂ ಪಾಪಿಗಳಾಗಿರುವಾಗಲೇ** ನೀಡಲು ಸಿದ್ಧನಿದ್ದಾನೆಂದು ನಾವು ತಿಳಿಯಬೇಕು. ಖಂಡಿತವಾಗಿಯೂ ನಾವು ಆತನ ಶಿಷ್ಯರಾದ ಮೇಲೆ ಮತ್ತು ಆತ್ಮನಿಂದ ಹುಟ್ಟಿದವರಾದ ಮೇಲೆ ನಾವು ಆತನ ಮಾರ್ಗದಲ್ಲಿ ದೇಹದ ಮೂಲಕವಲ್ಲ ಆತ್ಮನ ಮೂಲಕ ನಡೆಯಲು ಬಯಸುವವರಾಗಿದ್ದು ನಮ್ಮ ಉತ್ತಮ ಪ್ರಯತ್ನಗಳು ಎಷ್ಟೇ ಮುಗ್ಗರಿಸುವುದಾಗಿರಲಿ ಅಂಥಾಃ ಸಂದರ್ಭಗಳಲ್ಲಿಯೂ ಆತನ ಪ್ರೀತಿಯು ನಾವು ಇತರರಂತೆ ಆತನ ಕೋಪದ ಮಕ್ಕಳಾಗಿದ್ದಕ್ಕಿಂತಲೂ ಹೆಚ್ಚಾದ ರೀತಿಯಲ್ಲಿ ನಮ್ಮಲ್ಲಿ ತುಂಬಿರುತ್ತದೆ. ಈ ಲೋಕದ ತಂದೆಯು ತನ್ನ ಮಕ್ಕಳನ್ನು ಕನಿಕರಿಸುವಂತೆ ನಮ್ಮ ಕರ್ತನು ತನ್ನನ್ನು ಗೌರವಿಸುವವರನ್ನು ಕನಿಕರಿಸುತ್ತಾನೆ. ನಾವು ನಮ್ಮ ಇಹಲೋಕದ ಸ್ನೇಹಿತರನ್ನು ಮತ್ತು ಅವರ ಪ್ರೀತಿ ಮತ್ತು ಅನುಕಂಪವನ್ನು ಪರಿಗಣಿಸಿ ಅವನ್ನು ಹೋಲಿಸಿಕೊಂಡು ಕರ್ತನು ತನ್ನ ಯಾವುದೇ ಸೃಷ್ಟಿಗಿಂತಲೂ ಹೆಚ್ಚಾದ ರೀತಿಯಲ್ಲಿ ಕರುಣೆಯುಳ್ಳವನೂ ಮತ್ತು ನಂಬಲರ್ಹನೂ ಆಗಿದ್ದಾನೆಂದು ತಿಳಿದುಕೊಳ್ಳಬೇಕು. ಆತನು ಅಂಥಾಃ ನಂಬಿಕೆಯನ್ನು, ಅಂಥಾಃ ಭರವಸೆಯನ್ನು ನಮ್ಮಿಂದ ನಿರೀಕ್ಷಿಸುತ್ತಾನೆ ಮತ್ತು ಅದಕ್ಕೆ ತಕ್ಕ ಬಹುಮಾನವನ್ನು ನೀಡುವವನಾಗಿದ್ದಾನೆ. ಮೂಲದಲ್ಲಿ ಕರ್ತನ ಬಳಿಗೆ ಬರಲು ತಕ್ಕಷ್ಟು ನಂಬಿಕೆಯಿದ್ದವರು, ಪ್ರತಿನಿತ್ಯ ಆತನ ಬಳಿಗೆ ಅವರ ತೊಂದರೆ ತಾಪತ್ರಯಗಳೊಂದಿಗೆ, ಕುಂದುಕೊರತೆಗಳೊಂದಿಗೆ ಬರಲು ಬೇಕಾದಷ್ಟು ವಿಶ್ವಾಸವುಳ್ಳವರಾಗಿದ್ದಾರೆ. ಅವರು ತಮ್ಮ ಮಧ್ಯೆ ಯಾವುದೇ ಅಸ್ಪಷ್ಟತೆಯನ್ನು ಅನುಭವಿಸುತ್ತಿದ್ದು ಶಾಂತಿ ಮತ್ತು ಸಾಮರಸ್ಯವನ್ನು ಪುನಃವಶ ಪಡಿಸಿಕೊಳ್ಳುವಂತೆ ಆತನ ಕೃಪಾಸನದ ಬಳಿಗೆ ಬರಬೇಕೆಂಬ ವಾಕ್ಯದ ಆಹ್ವಾನವನ್ನು ನಿರಾಕರಿಸಿದಲ್ಲಿ, ಅಂಥವರು ಕರ್ತನು ಆಯ್ಕೆಮಾಡುವ ವಿಶೇಷ ವರ್ಗದವರ ಲೆಕ್ಕಕ್ಕೆ ಹಿಡಿಯಲು ಅನರ್ಹರಾಗುತ್ತಾರೆ : ***"ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ"*** (ಯೋಹಾನ ೪:೨೩) ***"ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ"*** (ಇಬ್ರಿಯ ೧೧:೬) ***" ಲೋಕವನ್ನು ಜಯಿಸುವಂಥದ್ದು ನಮ್ಮ ನಂಬಿಕೆಯೇ"*** (೧ ಯೋಹಾನ ೫:೪).

ಈ ಮಾರ್ಗದಲ್ಲಿ ನಿಜವಾಗಿಯೂ ತೊಂದರೆಗಳಿವೆ. ಆದರೆ ಕರ್ತನು ಅದಕ್ಕೆ ಬೇಕಾದ ಎಲ್ಲಾ ಸಹಾಯ ಮತ್ತು ಸಲಹೆಗಳನ್ನು ತನ್ನ ವಾಕ್ಯದಲ್ಲಿಯೂ ಮತ್ತು ಇದೇ ಉದ್ದೇಶಕ್ಕಾಗಿ ಆತನು ಸಹೋದರರ ದೇಹದಲ್ಲಿ ಇಟ್ಟಿರುವ ಅಂಗಗಳ ಮೂಲಕ ಒದಗಿಸಿಕೊಡುತ್ತಾನೆ. (೧ ಕೊರಿ ೧೨:೧೮ ನೋಡಿರಿ). ಉದಾಹರಣೆಗೆ, ಪ್ರಸ್ತಾಪಿಸುವ ಕ್ರಮದಲ್ಲಿ ದೋಷಗಳು ಎಲ್ಲಿವೆ ಎಂಬುದನ್ನು ಸರಿಯಾಗಿ ನೋಡುವುದು ಸಹಾಯಕಾರಿ – ಕರುಣೆಯನ್ನು ಪಡಕೊಳ್ಳುವಂತೆ ಕೃಪಾಸನವನ್ನು ಸಂಧಿಸುವುದನ್ನು ಮುಂದಕ್ಕೆ ಹಾಕುವುದರಲ್ಲಿ, ನಮ್ಮ ಕೈಗಳಲ್ಲಿ ಏನನ್ನದರೂ ತಾರದ ಹೊರತು ನಮ್ಮನ್ನು ಸಮರ್ಥಿಸಿಕೊಳ್ಳಲು ನೋಡುವುದು ದೇವರು ಶತಮಾನಗಳಿಂದ ನಮಗೆ ಕಲಿಸುತ್ತಾ ಬಂದ ಪಾಠವನ್ನು ನಾವು ಪೂರ್ಣವಾಗಿ ಮೆಚ್ಚುತ್ತಿಲ್ಲವೆಂಬುದನ್ನು ತೋರಿಸುತ್ತದೆ ; ನಾವೆಲ್ಲರೂ ಅಸಮರ್ಪಕರು, ನಾವು ಮಾಡಬೇಕಾದುದನ್ನು ಮಾಡದೇ ಹೋದವರು ಆಗಿದ್ದೇವೆ. ಆದುದರಿಂದ ವಿಮೋಚಕನು ಬಂದು ನಮ್ಮನ್ನು ಎತ್ತುವುದು ಅನಿವಾರ್ಯವಾಯಿತು. ಯಾರು ತನ್ನನ್ನು ಸಮರ್ಥಿಸಿಕೊಳ್ಳಲು ಹೊರಟಿದ್ದಾನೋ ಅವನು ಅಸಾಧ್ಯವಾದುದನ್ನು ಸಾಧಿಸಲು ಹೊರಟಿದ್ದಾನೆ. ಅದನ್ನು ಆತನು ಎಷ್ಟು ಬೇಗ ಅರಿತುಕೊಳ್ಳುತ್ತಾನೋ ಅಷ್ಟು ಒಳ್ಳೆಯದು. ದೇವರೊಂದಿಗಿನ ನಮ್ಮ ಲೆಕ್ಕಾಚಾರವು ದಿನನಿತ್ಯದ್ದಾಗಿರತಕ್ಕದ್ದು. ಕಷ್ಟವು ಗಣನೀಯವಾದುದ್ದಾಗಿದ್ದಲ್ಲಿ ಅಥವಾ ಕೇವಲ ಹಗುರವಾದುದ್ದಾಗಿದ್ದಲ್ಲಿ, ಮತ್ತು ಅಭಿಷಕ್ತರ ಹೃದಯವು ಬಹು ಮೃದುವಾದುದಾಗಿದ್ದು ದೇವರ ನಿರಂತರವಾದ ಅನ್ಯೂನತೆಗೆ ಮತ್ತು ಸಹವಾಸಕ್ಕೆ ಹೊಂದಿಕೆಯಾಗಿರುವಲ್ಲಿ ಆತನು ಯಾವುದೇ ತೊಂದರೆಯು ಉದ್ಭವವಾಗುವಾಗ ದಿನದ ಅಂತ್ಯದವರೆಗೂ ಕಾಯದೆ, ತಡವಿಲ್ಲದೆ ಆತನ ಕೃಪಾಸನಕ್ಕೆ ಹಿಂತಿರುಗುವ ಆಶೀರ್ವಾದವನ್ನು ಕಂಡುಕೊಳ್ಳುತ್ತಾನೆ. ಕೃಪಾಸಾನವು ಸದಾ ನಮಗೆ ತೆರೆದಿಟ್ಟಿರುವಾಗ ಒಂದು ರಾತ್ರಿಯನ್ನಾದರೂ ದಾಟಿಸಬಾರದು. ನಿರ್ಲಕ್ಷಿಸುವುದೆಂದರೆ, ದೇವರ ವಾಕ್ಯದ ಬೋಧನೆಗಳಿಗೆ ವಿರುದ್ಧವಾದ ಮನೋಪ್ರವೃತ್ತಿಯಾಗಿದೆ.

ಕೆಲವರು ಅನುಭವಿಸುವ ತೊಂದರೆ ಏನೆಂದರೆ, ಅವರು ಕೃಪಾಸನದ ಬಳಿಗೆ ಬಂದ ಮೇಲೆ ಅವರು ತಾವು ಬಯಸಿದ ಆಶೀರ್ವಾದಗಳಾದ ಪಾಪದ ಪರಿಹಾರ ಮತ್ತು ತಂದೆಯೊಡನೆ ಸಂಧಾನ ಇವುಗಳನ್ನು ಗ್ರಹಿಸುವುದಿಲ್ಲ. ಅವರ ತೂಂದರೆಯು ಈ ಮೂರರಲ್ಲಿ ಒಂದಾಗಿದೆ : (೧) ಅವರಲ್ಲಿ ವಿಶ್ವಾಸದ ಕೊರತೆ ಇದ್ದಿರಬಹುದು ; ಈ ಕಾಲದಲ್ಲಿ ದೇವರು ವಿಶ್ವಾಸಕ್ಕನುಸಾರವಾಗಿ ವ್ಯವಹರಿಸುವನಾದುದರಿಂದ ವಿಶ್ವಾಸವಿಲ್ಲದೆ ಏನನ್ನೂ ಪಡಕೊಳ್ಳಲು ಸಾಧ್ಯವಾಗುವುದಿಲ್ಲ. – "ನಿನ್ನ ವಿಶ್ವಾಸಕ್ಕನುಗುಣವಾಗಿಯೇ ಅದು ನಿನಗೆ ದೊರೆಯುವುದು " (೨) ಅವರ ತೊಂದರೆಯೆಂದರೆ, ಅವರು ತಾವು ಮಾಡಿದ ಮತ್ತು ಅರಿಕೆಮಾಡುತ್ತಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳಲಿಲ್ಲ ; ಅವರು ಇತರರಿಗೆ ಮಾಡಿದ ಹಾನಿಗಳನ್ನು ಸುಧಾರಿಸಲಿಲ್ಲ. ಅಥವಾ ಉಲ್ಲಂಘನೆಯು ದೇವರ ವಿರೋಧವಾಗಿದ್ದಲ್ಲಿ ಅವರು ಅದನ್ನು ಆತನ ಮುಂದೆ ಒಪ್ಪಿಕೊಳ್ಳದೆ ಸಮಾಧಾನವನ್ನು ಬಯಸುತ್ತಿದ್ದಾರೆ. (೩) ನಮ್ಮ ಅವಗಾಹನೆಗೆ ಬಂದ ಇಂಥಾಃ ಕೆಲವು ಪ್ರಕರಣಗಳಲ್ಲಿ ಕಂಡು ಬಂದ ತೊಂದರೆ ಏನೆಂದರೆ, ನಮ್ರಬೇಡಿಕೆಗಳು ದೇವರಿಗೆ ತಕ್ಕಂಥ ರೀತಿಯಲ್ಲಿ ಅರ್ಪಿತವಾಗಲಿಲ್ಲ. ಅವುಗಳು ದೈವಿಕ ಪ್ರೀತಿ, ಸಂತೋಷ ಮತ್ತು ಕೃಪೆಯ ಸೂರ್ಯಪ್ರಕಾಶ, ಚಿನ್ನದ ದೀಪಸ್ಥಂಭದ ಬೆಳಕಿನಲ್ಲಿ ಮತ್ತು ದೇವದರ್ಶನ ಗುಡಾರದಲ್ಲಿನ ಹುಳಿಯಿಲ್ಲದ ರೊಟ್ಟಿಯಲ್ಲಿ ತೋರಿಬಂದ ಆಶೀರ್ವಾದ ಇವುಗಳನ್ನಷ್ಟೇ ಬಯಸುತ್ತಿದ್ದವು. ಅದೇ ಸಮಯದಲ್ಲಿ ಅವರು ಇದರ ಹೊರಗೆ ರಾಜ ಯಾಜಕತ್ವದ ಪ್ರತಿಷ್ಟೆಹೊಂದದ ನೈಜಸ್ಥಿತಿಯಲ್ಲಿ ಕೇವಲ ಲೇವಿಯರಂತೆ ಇದ್ದರು. ಅವರು ಆವರೆಗೆ ಈ ಕಾಲದ ವಿಶೇಷ ಸವಲತ್ತುಗಳನ್ನು ವ್ಯರ್ಥವಾಗಿ ಪಡೆದಿದ್ದರು.

ವಿಶ್ವಾಸದ ಕೊರತೆಗೆ ಸೂಕ್ತವಾದ ಪರಿಹಾರವೆಂದರೆ, ಅದನ್ನು ದೇವರ ವಾಕ್ಯದ ಅಧ್ಯಯನದ ಮೂಲಕ ಬೆಳೆಸುವುದು, ಆತನ ಹಿಂದಿನ ಮತ್ತು ಇಂದಿನ ಒಳ್ಳೇತನದ ಬಗ್ಗೆ ಆಲೋಚಿಸುವುದು ಮತ್ತು ಆತನು ನಾವು ಆಲೋಚಿಸುವುದಕ್ಕೂ ಹೆಚ್ಚಾದ ಕೃಪಾಳುವೆಂದು ಗ್ರಹಿಸಲು ಹೆಣಗುವುದು, ಎರಡನೆಯ ತೊಂದರೆಗೆ ಪರಿಹಾರವೇನೆಂದರೆ, ತಡವಿಲ್ಲದ, ಸಂಪೂರ್ಣ ಮತ್ತು ಸಾದ್ಯಂತವಾದ ಕ್ಷಮೆಯಾಚನೆ ಮತ್ತು ಸಾಧ್ಯವಾದ ಮಟ್ಟಿಗೆ ತಪ್ಪುಗಳನ್ನು ಸರಿಪಡಿಸುವುದು ಅಥವಾ ನಷ್ಟಪರಿಹಾರ ಮಾಡುವುದು. ನಂತರದಲ್ಲಿ ಕೃಪಾಸನದೆಡೆಗೆ ವಿಶ್ವಾಸದ ಪೂರ್ಣ

ಭರವಸೆಯೊಂದಿಗೆ ಮರಳುವುದು. ಮೂರನೆಯ ತೊಂದರೆಗೆ ಪರಿಹಾರವೆಂದರೆ, ಸುವಾರ್ತಾಯುಗದ ವಿಶೇಷ ಸವಲತ್ತು ಮತ್ತು ವ್ಯವಸ್ಥೆಗಳನ್ನು ಆನಂದದಿಂದ ಅನುಭವಿಸುವವರಿಂದ ಕರ್ತನು ಸಂಪೂರ್ಣವಾದ ಸಮರ್ಪಣೆಯನ್ನು ಬಯಸುವವನಾಗಿದ್ದಾನೆ.

ಪ್ರತಿಷ್ಠೆ ಹೊಂದಿದ ಆದರೆ ಆತ್ಮಿಕವಾಗಿ ರೋಗಕ್ಕೆ ತುತ್ತಾಗಿರುವ ಮತ್ತೊಂದು ವರ್ಗದವರಿಗೆ ಪರಿಗಣನೆಯ ಅಗತ್ಯವಿದೆ. ಇವರುಗಳು ಸಹಜವಾಗಿ ವಿಶ್ವಾಸದಿಂದ ಸಮರ್ಥನೆಗೊಂಡು ತಮ್ಮ ಸಮರ್ಪಣೆಯಲ್ಲಿ ನಿಷ್ಠೆಯುಳ್ಳವರಾಗಿದ್ದು ತಮ್ಮ ಐಹಿಕತೆಯಲ್ಲಿ ಯಾವ ಪ್ರಗತಿಯನ್ನೂ ಮಾಡದವರಾಗಿ ಕಂಡುಬರುತ್ತಾರೆ. ನಿಜವಾಗಿಯೂ, ಕೆಲವೊಂದು ಸಂಧರ್ಭಗಳಲ್ಲಿ ದೇವರ ಒಳ್ಳೆಯತನ ಮತ್ತು ಕರುಣೆಯಲ್ಲಿ ಅವರ ನಂಬಿಕೆಯು ಅಂಜಿಕೆಯನ್ನು ತಡೆಹಿಡಿಯುವಿಕೆಯನ್ನು ತೆಗೆದುಹಾಕಿ, ಅವರನ್ನು ಅವರು ಈ ಮೊದಲು ದೇವರ ಬಗ್ಗೆ ಅಲ್ಪಜ್ಞಾನವುಳ್ಳವರಾಗಿದ್ದಕ್ಕಿಂತ ಹೆಚ್ಚಾದ ಐಹಿಕ ಬಲಹೀನತೆಯ ದೆಸೆಯಿಂದ ಶೋಧನೆಗಳಿಗೆ ತೆಗೆದಿಡುತ್ತದೆ. ಅವರುಗಳು ತಮಗಾಗಿ ಮಾತ್ರವಲ್ಲ, ಅವರು ಸಂಪರ್ಕದಲ್ಲಿರುವ ಇಡೀ ವಿಶ್ವಾಸಿ ಮನೆಯವರಿಗೆ ಬಹಳಷ್ಟು ವಿಚಾರಿಸಿದ ಅನುಭವವುಳ್ಳವರಾಗಿದ್ದು ಅವರ ಜೀವನವು ವಿಫಲತೆಗಳ ಮತ್ತು ಪಶ್ಚಾತ್ತಾಪಗಳ ಸರಮಾಲೆಯಾಗುತ್ತದೆ. ಕೆಲವರು ಆರ್ಥಿಕ ಅಸಮಂಜತೆಗೆ, ಮತ್ತೆ ಕೆಲವರು ಸಾಮಾಜಿಕ ದೋಷಕ್ಕೆ ಬಲಿಯಾಗುತ್ತಾರೆ.

ಇಂಥಾಃ ಪರಿಸ್ಥಿತಿಯ ಸಂಗತಿಗಳಿಗೆ ಕಾರಣಗಳೇನು? ಇದಕ್ಕೆ ನಮ್ಮ ಉತ್ತರವೆಂದರೆ, ನೂತನ ಸೃಷ್ಟಿಯು ಕೇವಲ **ಒಪ್ಪಂದದ** ಲೌಕಿಕವಾದ ಸ್ವಯಂ ನಿರಾಕರಣೆಯುಳ್ಳವರು ಮತ್ತು ಸ್ವಾರ್ಥ ತ್ಯಾಗಿಗಳನ್ನು ಮಾತ್ರ ಒಳಗೊಂಡಿರದೆ, ಐಹಿಕ ಸಂಗತಿಗಳಲ್ಲಿ ನಡೆಯದೆ, ಆತ್ಮಿಕ ಸಂಗತಿಗಳಲ್ಲಿ ನಡೆಯುವವರಾಗಿರುತ್ತಾರೆಂದು ಅವರುಗಳಿಗೆ ಸ್ಪಷ್ಟವಾಗಿ ತಿಳಿಸಬೇಕು. ಆದರೆ, ಪ್ರಾಮಾಣಿಕತೆಯ ದೆಸೆಯಿಂದ ಈ ಒಪ್ಪಂದವನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿರುವವರನ್ನು ಹೃದಯವನ್ನು ಓದಬಲ್ಲ ಆತನು ಜಯಶಾಲಿಗಳ ಲೆಕ್ಕಕ್ಕೆ ಹಿಡಿಯುತ್ತಾನೆ. ಎಲ್ಲಾ ಅಭಿಷಿಕತರೂ ಅನುಸರಿಸಬೇಕಾದ ಸರಿಯಾದ ಪದ್ದತಿ ಎಂದರೆ ಮಗನಿಂದ ವಿಮುಕ್ತಿಗೊಂಡ ಅವರು ದೈವಕೃಪೆಗೆ ಪ್ರಾಸಂಗಿಕವಾದ ಎಲ್ಲಾ ಆಶೀರ್ವಾದಗಳನ್ನು ಪಡಕೊಳ್ಳಲು ಕಾತುರರಾಗಿರಬೇಕೆಂದು ಅವರಿಗೆ ತಿಳಿಸಿಹೇಳಬೇಕು. ಇದರಿಂದ ಅವರು ಇಚ್ಚಾಪೂರ್ವಕವಾಗಿ ದಾಸರಾಗಿ ಅವರ ಮಾತು ಮತ್ತು ನಡತೆಗಳಲ್ಲಿ, ಅವರ ಅಲೋಚನೆಗಳಲ್ಲಿ ತಮ್ಮನ್ನು ಕೆಲವು ನಿರ್ಬಂಧಗಳಲ್ಲಿ, ಇತಿ–ಮಿತಿಗಳಲ್ಲಿ, ದಾಸತ್ವದಲ್ಲಿ ತೊಡಗಿಸಿಕೊಳ್ಳುತ್ತಾರೆ. ಪ್ರಾರ್ಥನೆಯಲ್ಲಿ ನಿಷ್ಠೆಯಿಂದ ಕರ್ತನನ್ನು, ಆತನು ವಾಗ್ದಾನಮಾಡಿರುವ, ಅಪೊಸ್ತಲರುಗಳಿದೆ ಹೇಳಿದ ಮಾತುಗಳಲ್ಲಿ ವ್ಯಕ್ತಪಡಿಸಿರುವ ಸಹಾಯಗಳನ್ನು ಅಪೇಕ್ಷಿಸುತ್ತಾರೆ –" ನನ್ನ ಕೃಪೆಯೇ ನಿನಗೆ ಸಾಕು ; ನನ್ನ ಬಲವು ಬಲಹೀನತೆಯಲ್ಲಿ ಪೂರ್ಣ ಸಾಧಕವಾಗುತ್ತದೆ ". ಪ್ರತಿಯೊಂದು ಸಮಯದಲ್ಲಿ ಅವರು ತಾವು ಪಾಪಮಾಡಿದವರೆಂದು ಕಂಡುಕೊಳ್ಳಬೇಕು. ಅವರು ಹಾನಿಗೊಂಡದ್ದನ್ನು ಸರಿಪಡಿಸಿ ವಿಶ್ವಾಸದಿಂದ ಆತನ ಕ್ಷಮಾಪಣೆಯನ್ನು ಹೊಂದಿಕೊಳ್ಳುವುದಲ್ಲದೆ ದೇವರಿಗೆ ತಮ್ಮ ಪಾಪಗಳನ್ನು ಅರಿಕೆಮಾಡಬೇಕು. ವಿಶ್ವಾಸದಿಂದ ಆತನ ಕ್ಷಮಾಪಣೆಯನ್ನು ಪಡಕೊಳ್ಳಬೇಕು – ಅವರು ಭವಿಷ್ಯಕ್ಕಾಗಿ ಹೆಚ್ಚಿನ ಕಾರ್ಯತತ್ಪರತೆಯನ್ನು ವಾಗ್ದಾನಮಾಡಬೇಕು ಮತ್ತು ತಮ್ಮ ಸ್ವಂತ ಅನಿರ್ಬಂಧತೆಯ ಮಿತಿಯನ್ನು ತಮ್ಮ ಇತ್ತೀಚಿನ ವಿಫಲತೆಯ ಹಾದಿಯಲ್ಲಿ ಹೆಚ್ಚಿಸಿಕೊಳ್ಳಬೇಕು.

ಈ ರೀತಿಯಲ್ಲಿ ಎಚ್ಚರವಾಗಿದ್ದು ಪ್ರಾರ್ಥಿಸುವ ಮೂಲಕ, ಮತ್ತು ಜೀವನದ ಚಟುವಟಿಕೆ ಮತ್ತು ಮಾತುಗಳ ಮೇಲೆ ಎಚ್ಚರ ವಹಿಸುವುದರ ಮೂಲಕ ಹಾಗೂ ಎಲ್ಲಾ ಅಲೋಚನೆಗಳನ್ನೂ ಕ್ರಿಸ್ತನಲ್ಲಿ ದೇವರ ಚಿತ್ತವೆಂಬ ನಿರ್ಬಂಧನಕ್ಕೆ ಒಳಪಡಿಸುತ್ತಾರೆ ( ೨ ಕೊರಿ ೧೦:೫ ನೋಡಿರಿ), ಅವರು ತಮಗೆ ಮತ್ತು ತಮ್ಮ ಸಹೋದರರಿಗೆ ಅವರ ಹೃದಯದ ನಿಷ್ಠೆಯನ್ನು ಗೌರವಿಸಿ ಜೀವನದಲ್ಲಿ ಎಚ್ಚರವುಳ್ಳವುಳ್ಳವರಾಗಿ ಎಲ್ಲರೂ ಅವರು ಕ್ರಿಸ್ತನೊಡನಿದ್ದೇವೆಂಬುದನ್ನು ಗ್ರಹಿಸುವುದು ಮಾತ್ರವಲ್ಲದೆ ಆತನ ಬಗ್ಗೆ ಕಲಿತಿದ್ದೇವೆ ಮತ್ತು ತಮ್ಮ ಎಲ್ಲಾ ಬಲಹೀನತೆಗಳಲ್ಲಿ ಜಯಗಳಿಸಲು ಆತನ ಸಹಾಯವನ್ನು ಬಯಿಸಿ ಅದನ್ನು ಉಪಯೋಗಿಸಿಕೊಂಡಿದ್ದೇವೆ ಎಂಬುದನ್ನು ದೃಢಪಡಿಸುವ ಕಾಲ ಇನ್ನು ದೂರವಿಲ್ಲ.

ಅಂಥಾಃ ಸಹೋದರ ಸಹೋದರಿಯರ ಪ್ರಕರಣಗಳು ಅಪೋಸ್ತಲರು "ಕ್ರಮವಿಲ್ಲದೆ ನಡೆಯುವುದು" ಎಂದು ಹೇಳುವ ಮೂಲದಲ್ಲಿ ಬರುತ್ತದೆ – ಕರ್ತ ಮತ್ತು ಅಪೋಸ್ತಲರ ಉದಾಹರಣೆಯಂತಲ್ಲ. ಮತ್ತೊಂದು ಅಧ್ಯಾಯದಲ್ಲಿ ಐಹಿಕತೆಯಲ್ಲಿ ಬಲಹೀನರಾಗಿರುವವರ ಬಗ್ಗೆ ಮತ್ತು ದೇವರ ಉದ್ದೇಶಗಳಿಗೆ ಅವಮರ್ಯಾದೆ ಮತ್ತು ಅಗಣ್ಯತೆಯನ್ನು ತರುವವರೊಡನೆ ಸಹೋದರರು ಹ್ಯಾಗೆ ವ್ಯವಹರಿಸಬಹುದೆಂದು ನಾವು ನೋಡುತ್ತೇವೆ.

ಇಲ್ಲಿ ಹೇಗೂ ಅವರುಗಳು ತಮ್ಮ ತಪ್ಪು ಕ್ರಮಗಳಿಗೆ ಪಶ್ಚಾತ್ತಾಪದ ಪ್ರಮಾಣವನ್ನು ನೀಡುವ ತನಕ ಮತ್ತು ಸರಿಯಾದ ಮಾರ್ಗದಲ್ಲಿ ನಡೆಯುತ್ತೇವೆಂಬ ಮತ್ತು ಕರ್ತನಲ್ಲಿ ವಿಶ್ವಾಸವನ್ನು ಮುಂದುವರಿಸುವ ಹೃದಯದ ಬಯಕೆಯನ್ನು ತೋರುವ ತನಕ– ಆದಾಗ್ಯೂ ಅವರು ಬಾಹ್ಯರೂಪದಲ್ಲಿ, ಅವರ ಐಹಿಕ ಬಲಹೀನತೆಗಳನ್ನು ಹತೋಟಿಯಲ್ಲಿಡುವ ನಿರೂಪಣೆಯನ್ನು ತೊರದ ಹೊರತು ಸುಸ್ಪಷ್ಟವಾಗಿ ಅವರೊಡನೆ ಸಾಂಗತ್ಯವನ್ನು ನಿರ್ಬಂಧಪಡಿಸುವುದು ಎಷ್ಟೇ ಅಗತ್ಯವೆನಿಸಿದರೂ ಅವರನ್ನು ಸಹೋದರರೆಂದು ಪರಿಗಣಿಸಬೇಕೆಂಬುದನ್ನು ನಾವು ಗಮನಿಸುತ್ತೇವೆ. ಹೀಗಿದ್ದರೂ ಆತನನ್ನು ನಂಬುವವರಿಗೆ, ತಮ್ಮ ಹೃದಯಗಳಲ್ಲಿ ಆತನ ಮಾರ್ಗವನ್ನು ಬಯಸುವವರಿಗೆ ದೇವರು ಬಹಳ ಕರುಣಾಮಯಿ ಎಂಬುದನ್ನು ತಿಳಿಯುವಂತೆ ಅವರನ್ನು ಪ್ರೋತ್ಸಾಹಿಸಬೇಕಾದಾಗ್ಯೂ , ಅವರು ನೈತಿಕತೆಯ ಬಗ್ಗೆ ತಮ್ಮ ಉತ್ಕಂಠತೆಯಲ್ಲಿ ಪ್ರಾಮಾಣಿಕರಾಗುವವರೆಗೆ, ಅವರ ದೇಹವು ಹೊಸ ಮನಸ್ಸಿಗೆ ಒಳಗಾಗಿದೆ ಎಂಬ ಬಗ್ಗೆ ಗಣನೀಯವಾದ ನಿದರ್ಶನವನ್ನು ತೋರದ ಹೊರತು ಅವರುಗಳು ಜಯಶಾಲಿಗಳ ವರ್ಗಕ್ಕೆ ಯೋಗ್ಯರೆಂಬಂತೆ ಅವರನ್ನು ಪ್ರೋತ್ಸಾಹಿಸಲಾಗದು.

ಕರ್ತನ ಕೆಲವು ಪ್ರತಿಷ್ಠೆಗೊಂಡ ವ್ಯಕ್ತಿಗಳು ಸೊರಗಿ ಹೊಟ್ಟೆಗಿಲ್ಲದ ದುಸ್ಥಿತಿಯಲ್ಲಿರುವುದನ್ನು ನಾವು ನೋಡಿದ್ದೇವೆ. ಅವರು ಆತನೊಂದಿಗೆ ಪೂರ್ಣರೂಪದ ಸಾಂಗತ್ಯವನ್ನು ಪ್ರಾಮಾಣಿಕವಾಗಿ ಬಯಸುವರಾದರೂ ಅದನ್ನು ಯಾವರೀತಿ ಪಡಕೊಳ್ಳಬೇಕು ಮತ್ತು ಕಾಪಾಡಿಕೊಳ್ಳಬೇಕು ಎಂಬುದರ ಅಗತ್ಯ ಸೂಚನೆಯ ಕೊರತೆ ಅವರಿಗಿದೆ. ಅವರ ಬಳಿ ಸತ್ಯವೇದ ಇರುವುದು ನಿಜ ; ಆದರೆ ಅವರ ಗಮನವನ್ನು ಅದರಿಂದ ಬೇರೆಡೆಗೆ ಸೆಳೆಯಲ್ಪಟ್ಟು ಅವರು ಶಿಕ್ಷರುಗಳಿಂದ, ಪ್ರಶ್ನೋತ್ತರ ರೂಪಗ್ರಂಥಗಳ ಮೂಲಕ ಹೆಚ್ಚಾಗಿ ಕಲಿಯಲು ನೋಡುತ್ತಾರೆ. ಇವುಗಳು ಮಾನವ ಸಂಪ್ರದಾಯಗಳ ಮೇಲೆ ನಡೆಯುತ್ತವೆಯೇ ಹೊರತು ದೇವರ ಮನಸ್ಸು ಅಥವಾ ಆತ್ಮನ ಮೇಲೆ ಅಲ್ಲ. ಅದುದರಿಂದ ಅವುಗಳಲ್ಲಿ ಸೂಕ್ತ ಆತ್ಮೀಕ ಪೋಷಣೆ ಇರುವುದಿಲ್ಲ. ಇದರ ಫಲವಾಗಿ ಅವರು ವಿಧಿಯುಕ್ತವಾದ ಸಂಪ್ರದಾಯಗಳಿಂದ ಅತೃಪ್ತಿ ಹೊಂದಿದ್ದು, ತಮ್ಮ ಪೂರ್ಣ ಹೃದಯದಿಂದ ದೇವರ ಬಳಿಗೆ ಬರುವುದು ಹೇಗೆ ಎಂಬುದು ಅವರಿಗೆ ತಿಳಿಯುವುದಿಲ್ಲ. ಯಾಕೆಂದರೆ, ಆತನ ಒಳ್ಳೆಯತನ ಮತ್ತು ಯೇಸುಕ್ರಿಸ್ತನಲ್ಲಿ ಆತನ ಕೃಪೆಯ ಶ್ರೀಮಂತಿಕೆ, ಆಗಾಗ್ಗೆ ಲೋಕ ರಕ್ಷಣೆಯ ಬಗ್ಗೆ ದೇವರ ಭವ್ಯ ಯೋಜನೆಗಳು ಇವುಗಳ ಬಗ್ಗೆಯಾಗಲೀ, ನೂತನ ಸ್ವಭಾವಕ್ಕೆ ಸಭೆಯ ಕರೆಯ ಬಗ್ಗೆಯಾಗಲೀ ಅವರಿಗೆ ತಿಳಿದಿಲ್ಲ. ಅವರ ಹಸಿವಿನ ಪರಿಸ್ಥಿತಿಗೆ ಮೊಟ್ಟ ಮೊದಲನೆಯದಾಗಿ ವಾಕ್ಯ ಶುದ್ಧವಾದ ಮತ್ತು ಪ್ರಾಮಾಣಿಕವಾದ ಹಾಲಿನ ಅಗತ್ಯವಿದೆ. ನಂತರ 'ದೇವರ ಪ್ರಕಟನೆ' ಎಂಬ ಪುಷ್ಟಿಯುತ ಆಹಾರ. ಅಂಥಾಃ ಪ್ರೀಯರನ್ನು ಅವರ ಸಭಾ ಜೀವಿತದ ಶೂನ್ಯತೆಯ ಬಗ್ಗೆ ತಿಳಿದಿದ್ದಾಗ್ಯೂ ಕೀಳಾಗಿ ಕಾಣಲಾಗದು ಮತ್ತು ನಿರ್ಲಕ್ಷಿಸಲಾಗದು. ಅವರು ತಮ್ಮ ಹೃದಯದ ಹಸಿವನ್ನು ತೀರಿಸಿ ಕೊಳ್ಳುವ ಸಲುವಾಗಿ ಲೌಕಿಕ ಮನರಂಜನೆ ಮುಂತಾದವುಗಳಲ್ಲಿ ಏನನ್ನಾದರೂ ಹುಡುಕುತ್ತಿರುತ್ತಾರೆ. ಇಂಥಾ: ಅನೇಕರು ವಿವಿಧ ದಿಕ್ಕಿನಲ್ಲಿ ತಮ್ಮ ಆತ್ಮತೃಪ್ತಿಯನ್ನು ಪಡಕೊಳ್ಳಲು ವಿಫಲರಾಗಿ ಕಡೆಗೆ ಆತ್ಮಿಕ ಸಂಗತಿಗಳ ಬಗ್ಗೆ ಉದಾಸೀನ ರಾಗುವುದನ್ನು ನಾವು ಕಂಡಿದ್ದೇವೆ. ಆದರೆ ' ಪ್ರಸಕ್ತ ಸತ್ಯ' ವನ್ನು ಅಂಗೀಕರಿಸಿಕೊಂಡಾಗ ಅವರು ಆತ್ಮೀಕ ಕೃಪೆ ಮತ್ತು ಜ್ಞಾನದಿಂದ ಅತ್ಯಂತ ಗಣನೀಯವಾಗಿ ವಿಕಸಿತಗೊಳ್ಳುತ್ತಾರೆ. ಇಂಥವರು ವಿವಿಧ ಪಂಗಡಗಳಲ್ಲಿ ಇನ್ನೂ ಬಹಳ ಮಂದಿ ಇದ್ದಾರೆಂದು ನಾವು ನಂಬುತ್ತೇವೆ. ಪ್ರಸಕ್ತ ಸತ್ಯವನ್ನು ಅಂಗೀಕರಿಸಿದವರು ಇಂಥವರಿಗೆ ತಮ್ಮ ಸಹಾಯ ಹಸ್ತ ಚಾಚಿ ಅವರನ್ನು ಅಂಧಕಾರದಿಂದ ಭವ್ಯವಾದ ಬೆಳಕಿನೆಡೆಗೆ, ಆತ್ಮೀಕ ಹಸಿವಿನಿಂದ ಅತ್ಯಂತ ವಿಪುಲವಾದ ಕೃಪೆ ಮತ್ತು ಸತ್ಯದೆಡೆಗೆ ನಡೆಸುವುದು ಅವರ ಸೌಭಾಗ್ಯವಾಗಿದೆ. ಆದರೆ ಇಂಥಾಃ ಆಶಿವಾದಕ್ಕೆ ಕರ್ತನಿಂದ ಉಪಯೋಗಿಸಲ್ಪಡಲು

ವಾಕ್ಯದಿಂದ ಜ್ಞಾನ ಮತ್ತು ಕೃಪೆಗಳೆರಡನ್ನೂ ಬಯಸುವುದು ಅಗತ್ಯ ಮತ್ತು ಇವುಗಳನ್ನು ಕರುಣೆಯಿಂದ, ನಿಷ್ಠೆಯಿಂದ ಮತ್ತು ಛಲದಿಂದ ನಿರ್ವಹಿಸಬೇಕು.

## ಸಮರ್ಥನೆಯು ಪವಿತ್ರಪಡಿಸುವಿಕೆಯಲ್ಲಿ ಲೀನವಗಬೇಕು

ಸಮರ್ಥನೆಯು ಕೇವಲ ಕ್ರಿಸ್ತನು ಮಾನವನ ವಿಮೋಚಕನಾಗಿ ಸತ್ತನು ಮತ್ತು ದೇವರೊಂದಿಗಿನ ಸಂಧಾನದ ಕೆಲವು ಆಶೀರ್ವಾದಗಳು ಈ ರೀತಿಯಲ್ಲಿ ಜನಾಂಗಕ್ಕೆ ದೊರಕಿತು ಎಂಬ ಸತ್ಯಕ್ಕೆ ಒಂದು ಮಾನಸಿಕ ಸಮ್ಮತಿಯಲ್ಲ. ಆದರೆ, ಇದರೊಂದಿಗೆ ಒರ್ವ ಸಮರ್ಥನೆಗೊಂಡ ವಿಶ್ವಾಸಿಯಾಗ ಬೇಕಾದಲ್ಲಿ ಕೆಲವು ಮೊತ್ತದ ಸಮರ್ಪಣೆಯನ್ನು ಸೂಚಿಸುತ್ತದೆ. ಪಾಪವು ಅಧಿಕವಾಗಿ ಪಾಪಮಯವಾಗಿದೆ ಎಂಬ ಸತ್ಯತೆಯನ್ನು ಅಂಗೀಕರಿಸುವ ಅಭಿಪ್ರಾಯವನ್ನು ಸಮರ್ಥನೆಯು ನೀಡುತ್ತದೆ (ರೋಮ ೭:೧೩ ನೋಡಿರಿ) ಮತ್ತು ಅದರಿಂದ ಸ್ಥಗಿಗೊಳ್ಳುವ ಮತ್ತು ಅದರ ಶಕ್ತಿಯಿಂದ ಹಾಗೂ ಅದರ ದಂಡನೆಯಿಂದ ಮುಕ್ತಿಗೊಳ್ಳುವ ಬಯಕೆಯನ್ನು ವ್ಯಕ್ತಪಡಿಸುತ್ತದೆ. ಆದುದರಿಂದ ಈ ಬಯಕೆಯು ನೀತಿದಾಯಕ ಸೃಷ್ಟಿಕರ್ತನೊಂದಿಗೆ ನೀತಿಯ ಸಾಮರಸ್ಯವಾಗಿದೆ ಮತ್ತು ನೀತಿಯ ಎಲ್ಲಾ ನಿಮಯಗಳಿಗೆ ಅನುಸಾರವಾಗಿದೆ. ಅಂಥಾಃ ಎಲ್ಲಾ ಸಮರ್ಪಣೆಗಳಲ್ಲಿ ಮತ್ತು ಜೀವನದ ಎಲ್ಲಾ ಸಂಗತಿಗಳಲ್ಲಿ ವಿಶ್ವಾಸಿಯು ನೈತಿಕತೆಯನ್ನು ಹಿಂಬಾಲಿಸುವಂತೆ ತನ್ನ ಮನಸ್ಸನ್ನು, ತನ್ನ ಚಿತ್ತವನ್ನು ಸಿದ್ಧಗೊಳಿಸಿದ್ದಾನೆ ಎಂಬ ಅಭಿಪ್ರಾಯವನ್ನು ಇದು ಹೆಚ್ಚಾಗಿ ನೀಡುತ್ತದೆ. ವಿಮೋಚಕನಲ್ಲಿ ಸಮರ್ಪಣೆಯಿಂದೊಡಗೂಡಿದ ವಿಶ್ವಾಸವು ಸಮರ್ಥನೆಯನ್ನುಂಟುಮಾಡುತ್ತದೆ – ಆದರೆ ತ್ಯಾಗದ ಅಭಿಪ್ರಾಯವನ್ನು ನೀಡುವುದಿಲ್ಲ. ತನ್ನ ಎಲ್ಲಾ ಸೃಷ್ಟಿಗಳು ನೈತಿಕತೆಯನ್ನು ಒಪ್ಪಿಕೊಳ್ಳಲು ಮತ್ತು ಅನ್ಯಾಯವನ್ನು ಹೇಸರಿಸುವಂತೆ ಬಲವಂತವಾಗಿ ಕೇಳುವ ಹಕ್ಕು ದೇವರಿಗಿದೆ. ಇಲ್ಲವಾದಲ್ಲಿ ಅವರು ಆತನ ಸಂಬಂಧ ತೊರೆದು ವೈರಿಯ ಸಂಬಂಧ ಬೆಳಿಸಿದಂತೆ ಪರಿಗಣಿಸಲಾಗುವುದು. ಆದರೆ ದೇವರು ನಾವು ಆತನ ಸೇವೆಯಲ್ಲಿ ಅಥವಾ ಬೇರೊಂದು ಕಾರಣಕ್ಕೆ ನಮ್ಮ ಪ್ರಾಣಗಳನ್ನು ಅರ್ಪಿಸಬೇಕೆಂದು ಬಲವಂತ ಮಾಡುವುದಿಲ್ಲ. ಆದುದರಿಂದ, ದೇವರ ವಾಕ್ಯದಲ್ಲಿ ತ್ಯಾಗವು ಒಂದು ಸ್ವಯಿಚ್ಛೆಯಿಂದೊಡಗೂಡಿದ ಕಾರ್ಯವೆಂದು ನಿಶ್ಚಯಿಸಲಾಗಿದೆ. ಇದನ್ನು ಒಂದು 'ವಿವೇಚನೆಯ ಸೇವೆ' ಎಂದು ಘೋಶಿಸಿ ಅಪೋಸ್ತಲನು ***"ನೀವು ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವಯಜ್ಞವನ್ನಾಗಿ ಅರ್ಪಿಸಿರಿ"***(ರೋಮ ೧೨:೧) ಎಂದು ಅಪೋಸ್ತಲನು ಹೇಳಿದ್ದರೂ ಇದನ್ನು ಕಾನೂನುಗಳ ಮೂಲಕ ಬಲವಂತ ಮಾಡಲಾಗದು.

ಕೆಲವರೊಡನೆ, ತ್ಯಾಗಕ್ಕಾಗಿರುವ ಸಮರ್ಪಣೆಯು ದೇವರ ಮೇಲೆ ಇಡುವ ವಿಶ್ವಾಸವನ್ನು ಕೂಡಲೇ ಅನುಸರಿಸಿ ನೈತಿಕ ಮಾರ್ಗದಲ್ಲಿ ನಡೆಯಬೇಕೆಂಬ ಬಯಕೆಯನ್ನು ಅವರಲ್ಲಿ ತಲುಪಿಸುತ್ತದೆ. ಆದರೆ ಇದನ್ನು ಅನುಸರಿಸಬೇಕೇ ಹೊರತು ಅದೇ ಮುಂಚಿತವಾಗಬಾರದು. ಯಾಕೆಂದರೆ, ನಾವೀಗಾಗಲೇ ನೋಡಿರುವಂತೆ ನಾವು ದೇವರಿಗೆ ಏನನ್ನಾದರೂ ಸಮರ್ಪಿಸಿವ ಮುನ್ನ ನಾವು ವಿಶ್ವಾಸದ ಮೂಲಕ ಸಮರ್ಥನೆಗೊಳ್ಳಬೇಕು. ಆಗ ಆತನು ಅದನ್ನು ತನ್ನ ಬಲಿಪೀಠದಲ್ಲಿ ವಿಮೋಚಕನೊಂದಿಗಿನ ಜಂಟಿ ಸಮರ್ಪಣೆಯೋ ಎಂಬಂತೆ ಸ್ವೀಕರಿಸುವನು. ಇತರರೊಡನೆ ಒಂದು ಸಮರ್ಥನಾ ಸ್ಥಿತಿಯು ತಲಪುತ್ತದೆ ಮತ್ತು ಇದು ಕೆಲವು ಕಾಲ ಮುಂದುವರಿದ ಕೆಲವು ಸಮಯದ ನಂತರ **ಸಂಪೂರ್ಣ** ಸಮರ್ಪಣೆಯ ಅಲೋಚನೆ ಬರುತ್ತದೆ ಅಥವಾ ಇಹಲೋಕದ ಹಿತವನ್ನು ದೇವರ ಕಾರಣಕ್ಕಾಗಿ ತ್ಯಾಗಮಾಡುವ ಅಲೋಚನೆಗಳು ಸಹಾ ಬರುತ್ತವೆ. ಆದರೆ, ಈಗಿನ ಪರಿಸ್ಥಿತಿಯಲ್ಲಿ ಸಮರ್ಪಣೆಯ ಹಾದಿಯಲ್ಲಿ, ನೈತಿಕತೆಯ ಪಥದಲ್ಲಿ, ದೇವರೊಡನೆ ಸಾಮರಸ್ಯದ ದಾರಿಯಲ್ಲಿ ನಡೆಯ ಬಯಸುವವರು ಒಳಗಿನವರಿಂದ, ಇಲ್ಲವೆ ಲೋಕದವರಿಂದ ಅಥವಾ ವೈರಿಯಿಂದ ವಿರೋಧವನ್ನು ಎದುರಿಸದ ಹೊರತು ಹೆಚ್ಚು ದೂರ ಈ ಮಾರ್ಗದಲ್ಲಿ ಹೆಚ್ಚು ದೂರ ಉಪಕ್ರಮಿಸಲಾಗುವುದಿಲ್ಲ.

ನೈತಿಕತೆಯ ಹಾದಿಯು ಮೇಲೇರುವಂಥಾದೆಂದು ಅವರು ಕಂಡುಕೊಂಡಿದ್ದಾರೆ. ಅದು ಕಡಿದಾಗುತ್ತಾ ಹೋಗುತ್ತದೆ. ಬಹಳ ಕಷ್ಟಕರವು. ಇಂದಿನ ಪಾಪಮಯ ಸ್ಥಿತಿಯಲ್ಲಿ ಈ ನೈತಿಕ ಮಾರ್ಗದಲ್ಲಿ ಮುಂದುವರೆಯಲು ಅಂತಿಮವಾಗಿ ಲೌಕಿಕ ಆಸಕ್ತಿಗಳನ್ನು, ಆಕಾಂಕ್ಷೆಗಳನ್ನು ಮತ್ತು ಈ ಲೋಕದ ಗೆಳೆತನ ಇತ್ಯಾದಿಗಳನ್ನು ತ್ಯಾಗಮಾಡಬೇಕಾಗುತ್ತದೆ. ಇಲ್ಲಿ ಮಾರ್ಗದ ಬೇರ್ಪಡುವಿಕೆಗೆ ತಲಪುತ್ತೇವೆ : ಮೊದಲನೆಯ ಮೇಲ್ಮುಖ ಮಾರ್ಗವು ಮಹಿಮೆಗೆ, ಗೌರವಕ್ಕೆ ಮತ್ತು ನಿರ್ಲಯತ್ವಕ್ಕೆ ನಡೆಸುತ್ತದೆ. ಇದನ್ನು ನಮ್ರತೆ, ಸ್ವಯಂ–ನಿರಾಕರಣೆ ಮತ್ತು ಸ್ವಾರ್ಥ ತ್ಯಾಗವೆಂಬ ತಗ್ಗಾದ ಬಾಗಿಲಿನಿಂದ ಪ್ರವೇಶಿಸಬೇಕಾಗುತ್ತದೆ. ಪ್ರವೇಶಿಸಿದಾಗ ಇದು ಏರುಪೇರಾದ ಮಾರ್ಗವಾಗಿ ತೋರಿಬರುತ್ತದೆ. ಏನೇ ಆದರೂ ಇದರಲ್ಲಿ ಅದೃಶ್ಯವಾದ ಸೇವಾತ್ಮಗಳು ಯಾತ್ರಿಗಳಿಗೆ ಸಹಾಯ ಮಾಡುತ್ತವೆ ; ಮತ್ತು ಇದರಲ್ಲಿ ನಾಯಕನಾದ ಕ್ರಿಸ್ತನ ಕೃಪಾ ವಾಗ್ದಾನಗಳು ಅಲ್ಲಲ್ಲಿ ಅವರ ಪ್ರೋತ್ಸಾಹಾರ್ಥ ಬೆಳಗಿ ಸಾಕಷ್ಟು ಕೃಪೆಯ ಭರವಸವನ್ನು ನೀಡುತ್ತದೆ ಮತ್ತು ಪ್ರಯಾಣದ ಅಂತ್ಯದವರೆಗೂ ಸಹಾಯಮಾಡುತ್ತದೆ ; ಅವಿರತ ಪ್ರಯತ್ನವು ಅವರ ಉತ್ತಮ ಒಳತಿಗೆ, ನೂತನ ಸೃಷ್ಟಿಯ ಅಂತಿಮ ಸದಸ್ಯತ್ವಕ್ಕೆ ಮತ್ತು ಧರ್ಮಯುಗದ ಭವ್ಯವಾದ ಕಾರ್ಯಗಳಲ್ಲಿ ಭಾಗವಹಿಸಲು ಸಂಚುಮಾಡುವುದಾಗಿದೆ. ತ್ಯಾಗಕ್ಕೂ, ಮರಣಕ್ಕೂ ಸಹಾ ಪೂರ್ಣ ಪ್ರತಿಷ್ಠೆಯನ್ನು ಸೂಚಿಸುವ ಮುಖ್ಯ ದ್ವಾರದಲ್ಲಿ ಬಹಳಷ್ಟು ಸಮರ್ಥನೆಗೊಂಡ ವಿಶ್ವಾಸಿಗಳು ಪ್ರವೇಶಿಸುವ ಸಮಯದಲ್ಲಿ ಅವರ ಬೆಲೆಯನ್ನು ಲೆಖ್ಖಹಾಕುವಾಗ ಅವರು ಸ್ವಲ್ಪ ಹೊತ್ತು ನಿಂತುಕೊಳ್ಳುತ್ತಾರೆ, ಆಗ ದೇವರ ವಾಕ್ಯದಿಂದ ಆಹ್ವಾನದ ಸ್ವರವನ್ನು ಕೇಳಿಸಿಕೊಳ್ಳುತ್ತಾರೆ ಮತ್ತು ತಮ್ಮ ಯಾತ್ರೆಯ ಭರವಸೆಗಳ ಮೇಲೆ ಆತುಕೊಂಡು ಅವರ ಹೃದಯಗಳನ್ನು ಬಲಗೊಳಿಸಿಕೊಳ್ಳುತ್ತಾರೆ.

ದ್ವಾರದ ಹೊರಗೆ ಅನೇಕ ಕವಲು ದಾರಿಗಳಿರುತ್ತವೆ. ಇವುಗಳ ಮೂಲಕ ಅಲ್ಲಿಯವರೆಗೆ ಬಂದ ಹಲವರು ಮಹಿಮೆಗೆ, ಗೌರವಕ್ಕೆ ಮತ್ತು ನಿರ್ಲಯತ್ವಕ್ಕೆ ಸುಲಭವಾದ ಮಾರ್ಗವನ್ನು ಕಂಡುಕೊಳ್ಳಲು ಪ್ರಯತ್ನಿಸಿ ವಿಫಲರಾಗುತ್ತಾರೆ. ಇಂಥಾಃ ನೂರಾರು ಕವಲುದಾರಿಗಳಿರುತ್ತವೆ. ಕೆಲವೊಂದು ಸ್ವಲ್ಪ ಮಟ್ಟಿಗೆ ಮೇಲ್ಮುಖಕ್ಕೆ ಹಬ್ಬಿ ಸ್ವಲ್ಪ ಸ್ವಯಂ ನಿರಾಕರಣೆಯ ಅಭಿಪ್ರಾಯವನ್ನುಂಟುಮಾಡುತ್ತವೆ ; ಉಳಿದವು ಶರಣಾಗಿ ಕೆಳಮುಖವಾಗಿ ಹೆಚ್ಚು ಹೆಚ್ಚಾಗಿ ಪ್ರಪಂಚದ ಆಶೀರ್ವಾದಗಳು ಮತ್ತು ನಿರೀಕ್ಷಣೆಗಳತ್ತ ಸಾಗುತ್ತವೆ. ಈ ಯಾವುದೇ ಒಂದು ಕವಲುದಾರಿಯಲ್ಲಿ ಸ್ಪೂರ್ತಿಯುತ ವಾಗ್ದಾನಗಳು ಕಂಡು ಬರುವುದಿಲ್ಲ. ಇವುಗಳು ತಗ್ಗಾದ ದ್ವಾರದ ಮೂಲಕ ಪ್ರವೇಶಿಸುವವರ ಸ್ವತ್ತಾಗಿದೆ. ಇವರು ಆ ಮಾರ್ಗದ ಮೂಲಕ ಲೌಕಿಕ ಅಕಾಂಕ್ಷೆಗಳನ್ನು ನಿರಾಕರಿಸಿ ಕರ್ತನ ಸಾಂಗತ್ಯವೆಂಬ ಇಕ್ಕಟ್ಟಾದ ಮಾರ್ಗಕ್ಕೆ ಪ್ರವೇಶಿಸುವವರಾಗಿದ್ದಾರೆ. ಈ ಮೂಲಕ ಅವರು ಮಹಿಮೆಯಲ್ಲಿ ಕ್ರಿಸ್ತಯೇಸುವಿನ ಒಡನಾಟವನ್ನು ಪಡಕೊಳ್ಳುವವರಾಗಿದ್ದಾರೆ.

ಸಂತೋಷ ಮತ್ತು ಸಮಾಧಾನಗಳು ಕರ್ತನನ್ನು ವಿಶ್ವಾಸಿದ, ಆತನ ಪ್ರಾಯಶ್ಚಿತ್ತವನ್ನು ಅಂಗೀಕರಿಸಿದ ಮತ್ತು ಆತನ ನೈತಿಕತೆಯನ್ನು ಅನುಸರಿಸುವ ಮತ್ತು ಪಾಪವನ್ನು ವರ್ಜಿಸಿದ ಕ್ಷಣದಿಂದಲೇ ಉಂಟಾಗುತ್ತವೆ. ಈ ಸಂತೋಷ ಸಮಾಧಾನಗಳು ತಗ್ಗಿದ ದ್ವಾರದ ಮೂಲಕ ಇಕ್ಕಟ್ಟಾದ ಮಾರ್ಗವನ್ನು ತಲುಪುವವರೆಗೆ ಸಂಪೂರ್ಣವಾಗಿರುತ್ತವೆ. ಆದರೆ, ನೈತಿಕತೆಯ ಬೆನ್ನಟ್ಟುವಿಕೆಯು ಸ್ವಯಂ ನಿರಾಕರಣೆ ಮತ್ತು ಸ್ವಾರ್ಥತ್ಯಾಗವನ್ನು ಒಳಗೊಂಡಾಗ ಮತ್ತು ಈ ತ್ಯಾಗವನ್ನು ಮಾಡದೇ ಇದ್ದಾಗ ಮತ್ತು ತಗ್ಗಾದ ದ್ವಾರವನ್ನು ಪ್ರವೇಶಿಸದೇ ಇದ್ದಾಗ , ದೈವ ಕೃಪೆಯ ಸಂತೋಷ ಸಮಾಧಾನಗಳು ಮಂಕಾಗುತ್ತವೆ.. ಹೀಗಿದ್ದರೂ ಸಮರ್ಥನೆಗೊಂಡ ವಿಶ್ವಾಸಿಯು ನೈತಿಕತೆಯ ಸೇವೆ ಮಾಡುವ ಇತರ ಮಾರ್ಗಗಳನ್ನು ಹುಡುಕುವ ಸಮಯದಲ್ಲಿ, ಅದನ್ನು ಇನ್ನೂ ಪ್ರೀತಿಸುವಾಗ ಮತ್ತು ದೇವಕೃಪೆಗೆ ಇನ್ನೂ ಬೆಲೆಕೊಡುವಾಗ ಆದರೆ ಅದನ್ನು ತಡೆಹಿಡಿದು ಅದರಲ್ಲಿ ಪ್ರವೇಶಿಸಲು ನಿರ್ಲಕ್ಷಿಸಿದಾಗ ಅವುಗಳನ್ನು ಪೂರ್ಣವಾಗಿ ಹಿಂತೆಗೆದುಕೊಳ್ಳಲಾಗುವುದಿಲ್ಲ. ಸಂತೋಷ ಮತ್ತು ಸಮಾಧಾನಗಳ ಸಂಪೂರ್ಣತೆಯು ಅಂಥವರ ಭಾಗವಾಗಲು ಸಾಧ್ಯವಿಲ್ಲ. ಅವರು ಸದಾಕಾಲ ಕರ್ತನಿಗೆ ಸಮರ್ಪಿಸುವ ಅವರ ಪೂರ್ಣ ದೀಕ್ಷೆಯು ಒಂದು "ವಿವೇಚನಾಪುರ್ವಕವಾದ ಸೇವೆ"ಯಾಗಿರುತ್ತದೆ. ಈಗಾಗಲೇ ಹೊಂದಿಕೊಂಡಿರುವ ಪಾಪ ಕ್ಷಮಾಪಣೆಯ ಮೂಲಕವಾದ ಕೃಪೆಗೆ ಇದೊಂದು ತರ್ಕ ಸಮ್ಮತವಾದ ಅಂಗೀಕಾರವಾಗಿದೆ.

ಅನೇಕರು ಇದೇ ಮನೋಸ್ಥಿತಿಯಲ್ಲಿ ಬಹಳ ವರ್ಷ ಮುಂದುವರೆಯುತ್ತಾರೆ, ಆದರೆ ಕೆಲವರು ಲೋಕದ ಮಾರ್ಗದಲ್ಲಿ ಅಲೆದಾಡುತ್ತಾರೆ. ಸ್ವಯಂ ನಿರಾಕರಣೆಯೆಂಬ ತಗ್ಗಾದ ದ್ವಾರವನ್ನು ಪ್ರವೇಶಿಸದ ಹೊರತು ಇದರಲ್ಲಿ ಯಾರೂ ನೂತನ ಸೃಷ್ಟಿಯ ಸದಸ್ಯರಾಗುವುದಿಲ್ಲ. ಅವರುಗಳನ್ನು ತಗ್ಗಾದ ಬಾಗಿಲನ ಕಡೆಗೆ ನಡೆಸುವ ಸಲುವಾಗಿ ದೇವರು ಗಣನೀಯವಾದ ಸಮಯದಲ್ಲಿ ಅವರಿಗ ದಯಪಾಲಿಸಿದ್ದ ವಿಶೇಷ ಸವಲತ್ತುಗಳಿಂದ ಕಡಿದುಹಾಕುತ್ತಾನೆ ; ಆದಾಗ್ಯೂ ಅದನ್ನು ಪ್ರವೇಶಿಸಲು ಅವರು ನಿರಾಕರಿಸುವಲ್ಲಿ ಅವರು ವಾಸ್ತವಿಕವಾಗಿ ಪಾಪದ ಕ್ಷಮಾಪಣೆಯಲ್ಲಿ ಮತ್ತು ಈ ದ್ವಾರದ ವರೆಗೆ ನಡೆಸುವಲ್ಲಿ ತಾವು ದೇವರ ಕೃಪೆಯನ್ನು ವ್ಯರ್ಥವಾಗಿ ಹೊಂದಿಕೊಂಡಿದ್ದೇವೆಂದು ಅರಿಕೆಮಾಡುವವರಾಗಿದ್ದಾರೆ. ಯಾಕೆಂದರೆ, ಇಂಥಾಃ ಪರಿಸ್ಥಿತಿಯನ್ನು ತಲುಪಿದ ಮೇಲೆ ಅವರು 'ತಮ್ಮ ಕರೆಯ ಒಂದೇ ನಿರೀಕ್ಷೆ'ಯನ್ನು ತಿರಸ್ಕರಿದ್ದಾರೆ ಇಲ್ಲವೆ ನಿರ್ಲಕ್ಷಿಸಿದ್ದಾರೆ. ದೇವರು ಅಂಥವರಿಗೆ ತಕ್ಕಂಥ ರೀತಿಯಲ್ಲಿ "ನೀವು ನನ್ನ ಕೃಪೆಗೆ ಉಳಿದವರಿಗಿಂತ ಹೆಚ್ಚು ಅರ್ಹರಲ್ಲವಾದುದರಿಂದ ನಾನು ನಿಮಗೆ ದಯಪಾಲಿಸಿರುವ ಎಲ್ಲಾ ರೀತಿಯ ವಿಶೇಷ ಸವಲತ್ತುಗಳನ್ನು ಹಿಂದಕ್ಕೆ ಪಡೆಯುತ್ತೇನೆ ಮತ್ತು ನಾನು ಧರ್ಮಯುಗದಲ್ಲಿ ಎಲ್ಲಾ ಮಾನವ ಜಾತಿಗೆ ನೀಡಲು ಉದ್ಧೇಶಿಸಿರುವ ಸವಲತ್ತುಗಳನ್ನೇ ನೀವು ಸಹಾ ಹೊಂದಿಕೊಳ್ಳುತ್ತೀರಿ ; ಆದರೆ ಯಾವುದೇ ವಿಶೇಷ ಸವಲತ್ತುಗಳಾಗಲೀ, ಕರುಣೆಯಾಗಲೀ, ಪಾಲನೆಯಾಗಲೀ, ಗಮನ ಮುಂತಾದವುಗಳು ಯಾವುದೂ ಇನ್ನು ಮುಂದೆ ನಿಮ್ಮ ಪ್ರಸಕ್ತ ಜೀವಮಾನದಲ್ಲಾಗಲೀ, ಮುಂಬರಲಿರುವ ಜೀವಿತದಲ್ಲಾಗಲೀ ಮೊದಲ ಆದ್ಯತೆಯಾಗಿ ನಿಮಗೆ ದೊರೆಯಲಾರದು " ಎಂದು ಹೇಳಿದ್ದಿರಬಹುದು.- ಆದರೆ ಇದನ್ನು ಆತನು ಈ ಕೂಡಲೇ ಮಾಡುವಾತನಲ್ಲಿ, ಹೆಚ್ಚಿನವರ ಬಗ್ಗೆ ಆತನಿಗೆ ದೀರ್ಘವಾದ ಸಹನೆಯುಂಟು.

ಕರ್ತನ ವಾಕ್ಯದ ಅಧಿಕವಾದ ಮತ್ತು ಅಮೂಲ್ಯವಾದ ವಾಗ್ದಾನಗಳು – ಉದಾಹರಣೆಗೆ " ಎಲ್ಲಾ ಸಂಗತಿಗಳೂ ಒಟ್ಟಾಗಿ ದೇವರನ್ನು ಪ್ರೀತಿಸುವವರ ಒಳಿತಗಾಗಿಯೇ ನೆರವೇರುವವು" ಎಂಬ ಭರವಸೆಯ ಮಾತುಗಳು ಕೇವಲ ದೇವರ ಕೃಪೆಯನ್ನು ಹೊಂದಿದವರಿಗೆ ಮತ್ತು ಸ್ವಯಂ-ನಿರಾಕರಣೆಯೆಂಬ ತಗ್ಗಾದ ದ್ವಾರಕ್ಕೆ ನಡೆಸಲ್ಪಟ್ಟವರಿಗೆ, ಮತ್ತು ಅದರೊಳಗೆ ಪ್ರವೇಶಿಸಿದವರಿಗೆ ಮಾತ್ರವೇ ಅನ್ವಯಿಸುವುದು. ಯಾಕೆಂದರೆ ಅಂಥವರು ಮಾತ್ರವೇ ತಮಗಿಂತ ಹೆಚ್ಚಾಗಿ ಉಚ್ಚಮಟ್ಟದಲ್ಲಿ ದೇವರನ್ನು ಪ್ರೀತಿಸುತ್ತಾರೆ. " ಎಲ್ಲಾ ಸಂಗತಿಗಳು ಅವರವು, ಯಾಕೆಂದರೆ ಅವರು ಕ್ರಿಸ್ತನವರು, ಕ್ರಿಸ್ತನು ದೇವರವನು" ಅವರು ಕ್ರಿಸ್ತನ ಶಾಲೆಯನ್ನು ಪ್ರವೇಶಿಸಿದ್ದಾರೆ ಮತ್ತು ಅವರಲ್ಲಿರುವ ಜೀವನದ ಎಲ್ಲಾ ಬೋಧನೆಗಳು, ಪ್ರೋತ್ಸಾಹಗಳು ಮತ್ತು ಶಿಸ್ತುಗಳು ಅದೇ ರೀತಿಯಲ್ಲಿ ದೇವರ ರಾಜ್ಯದ ಅಂತಿಮ ಸಿದ್ಧತೆಗಾಗಿ ತಳ್ಳಿಹಾಕಲ್ಪಡುತ್ತವೆ. ಆದರೆ ಅಂಥಾಃ ಬೋಧನೆಗಳು ಮತ್ತು ಆಶಿರ್ವಾದಗಳ ಪಾಠಗಳು ಆ ಶಾಲೆಯನ್ನು ಪ್ರವೇಶಿಸಲು ನಿರಾಕರಿಸಿದವರಿಗಲ್ಲ. ಅವರು ಮಹಾ ಬೋಧಕನ ಚಿತ್ತಕ್ಕೆ ತಮ್ಮನ್ನು ಒಪ್ಪಿಸಿಕೊಡಲು ನಿರಾಕರಿಸಿದವರಾಗಿದ್ದಾರೆ.

ಕಟ್ಟುನಿಟ್ಟಾಗಿ ಹೇಳುವುದಾದರೆ, ದೇವರ ಕೃಪೆಯನ್ನು ವ್ಯರ್ಥವಾಗಿ ಪಡಕೊಂಡವರು ಪ್ರಾರ್ಥನೆಯಲ್ಲಿಯೂ ದೇವರನ್ನು ಸಮೀಪಿಸುವ ಸರಿಯಾದ ನೆಲೆಯಿಲ್ಲದವರಾಗಿದ್ದಾರೆ ; ಈಗಾಗಲೇ ಹೊಂದಿದ ಆಶಿರ್ವಾದಗಳಿಗೆ ಯೋಗ್ಯವಾದ ಪ್ರತಿಫಲ ನೀಡಲು ನಿರಲಕ್ಷಿಸಿದವರು ಯಾಕೆ ವಿಶೇಷ ಪಾಲನೆ ಮತ್ತು ವಿಶೇಷ ಸವಲತ್ತುಗಳನ್ನು ನಿರೀಕ್ಷಿಸಬೇಕು? ಅವರು ಈಗಾಗಲೇ ಕರ್ತನಿಂದ ಜ್ಞಾನ ಮತ್ತು ಸಮರ್ಥನೆಯವರೆಗಿನ ಆಶೀರ್ವಾದಗಳನ್ನು ಪಡಕೊಂಡಿರುವುದರಿಂದ ದೇವರು ಅವರಿಗೆ ಹೆಚ್ಚಿನ ಕರುಣೆ ತೋರಿಸಬೇಕೆಂದು ಅವ್ರು ತರ್ಕಮಾಡುತ್ತಾರೋ? ಅದರ ಬದಲಾಗಿ ಅವರು ವಿಮೋಚನೆಗೊಂಡ ಜನಾಂಗಕ್ಕೆ ದಯಪಾಲಿಸಿರುವ ಸಾಮಾನ್ಯ ಕೃಪೆಗಿಂಥಾಃ ಹೆಚ್ಚಾದ ಕರ್ತನ ಇಂಥಾಃ ಆಶೀರ್ವಾದಗಳನ್ನು ಪಡಕೊಂಡ ಮೇಲೆ ಇಗಾಗಲೇ ತಮ್ಮ ಪಾಲಿಗಿಂತ ಹೆಚ್ಚಾದುದನ್ನು ತಾವು ಪಡಕೊಂಡಿದ್ದೇವೆಂದು ಅವರು ತರ್ಕಿಸಬೇಕಲ್ಲವೆ? ದೇವರ ಚಿತ್ತದ ಸಾಂಗತ್ಯವನ್ನು ಅನುಸರಿಸುವಲ್ಲಿ ಸೋತುಹೋಗಿರುವಲ್ಲಿ ಅವರು ನಿಜವಾಗಿಯೂ ಇನ್ನು ಮುಂದಿನ ದೇವರ ಕರುಣೆ ಮತ್ತು ಕೃಪೆಗಳು ಅವರನ್ನು ದಾಟಿ ಈವರೆಗೆ ಹೆಚ್ಚು ಸೌಕರ್ಯಗಳನ್ನು ಹೊಂದದವರಿಗೆ ಈ ಕಾರಣದಿಂದ ದೇವರ ಕೃಪಾ ಕೊಡುಗೆಯನ್ನು ಆ ಮಟ್ಟಿಗೆ ಉಪೇಕ್ಷೆ ಮಾಡದವರಿಗೆ ಅದು ಹೋಗುವುದೆಂದು ಅವರು ನಿರೀಕ್ಷಿಸ ಬೇಕಲ್ಲವೆ? ಆದರೆ

ದೇವರು ಬಹಳ ಕರುಣಾಮಯಿ ಆಗಿರುವುದರಿಂದ ವಿಶ್ವಾಸದ ಮನೋವೃತ್ತಿಯುಳ್ಳ ಯಾರನ್ನೂ ಆತನು ನಿರಾಕರಿಸುವುದಿಲ್ಲ ಎಂಬುದಾಗಿ ನಾವು ನಿರೀಕ್ಷಿಸಬಹುದು.

ಈ ಮನೋವೃತ್ತಿಯಲ್ಲಿದ್ದು ಪೂರ್ಣವಾಗಿ ಕರ್ತನವರಾಗಬೇಕು, ಆತನ ಸಂಪೂರ್ಣವಾದ ಕೃಪೆಗೆ ಪಾತ್ರವಾಗ ಬೇಕು ಎಂಬ ಅಪೇಕ್ಷೆಯುಳ್ಳವರಿಗೆ ದೊರೆಯುವ ಪರಿಹಾರವೇನು? ಅವರ ಕ್ರಮವೆಂದರೆ ಅವರು ಅವರ ಧ್ಯೇಯಗಳು, ಅವರ ನಿರೀಕ್ಷೆಗಳು, ಅವರ ಪ್ರತೀಕ್ಷೆಗಳು. ಅವರ ಸಾಧನಗಳು ಮತ್ತು ಅವರ ಈ ಲೋಕದ ಪ್ರೀತಿ ಮುಂತಾದ ಎಲ್ಲಾ ಸಂಗತಿಗಳಲ್ಲಿ ತಮ್ಮೆಲ್ಲಾ ಚಿತ್ತವನ್ನು ದೇವರಿಗೆ ಒಪ್ಪಿಸಿಕೊಟ್ಟು ತಮ್ಮನ್ನು ಸಂಪೂರ್ಣವಾಗಿ ಕರ್ತನಿಗೆ ಸಮರ್ಪಿಸಿಕೊಳ್ಳಬೇಕೆಂದು ನಾವು ಉತ್ತರಿಸುತ್ತೇವೆ. ಇದಕ್ಕೆ ಬದಲಾಗಿ ಅವರು ಆತನ ವಾಕ್ಯಗಳನ್ನು, ಆತ್ಮನನ್ನು ಮತ್ತು ಅನುಗ್ರಹಗಳನ್ನು ಅವರ ಇರುವಿಕೆ ಮತ್ತು ಭವಿಷ್ಯತ್ತಿನ ನಡತೆ ನಿಯಾಮವಳಿ, ಮರ್ಗದರ್ಶನ ಎಂಬಂತೆ ಒಪ್ಪಿಕೊಳ್ಳಬೇಕು ಮತ್ತು ಇವುಗಳು ಅವರಿಗಾಗಿ ಕಾರ್ಯವೆಸಗುತ್ತವೆ ಮತ್ತು ಇವುಗಳು ಮುಂಬರುವ ಜೀವಿತದಲ್ಲಿ ಭವ್ಯವಾದ ಫಲಗಳನ್ನು ನೀಡುವುದಲ್ಲದೆ ಇಂದಿನ ಜೀವಿತದಲ್ಲಿ ಹೃದಯದ ಹೆಚ್ಚಿನ ಆಶೀರ್ವಾದಗಳನ್ನು ನೀಡುತ್ತವೆ ಎಂಬ ಭರವಸದಿಂದಿರಬೇಕು.

ಇದನ್ನು ಅವರು ಹೇಗೆ ಮಾಡಬಹುದು? ಇದನ್ನು ಹೃತ್ಪೂರ್ವಕವಾಗಿ, ಗೌರವ ಪೂರ್ವಕವಾಗಿ ಮತ್ತು ಪ್ರಾರ್ಥನಾ ಪೂರ್ವಕವಾಗಿ ಮಾಡಬೇಕೆಂದು ನಾವು ಉತ್ತರಿಸುತ್ತೇವೆ. ದೇವರೊಡನೆ ಖಂಡಿತವಾಗಿಯೂ ಒಪ್ಪಂದವೊಂದನ್ನು ಸಾಧ್ಯವಾದಲ್ಲಿ ಕೇಳುವ ಸ್ವರದಲ್ಲಿ ಮಾಡಿಕೊಳ್ಳ ಬೇಕು ; ದೇವರ ಕೃಪೆ, ಕರುಣೆ ಮತ್ತು ಆಶೀರ್ವಾದಗಳನ್ನು ಆತನ ತ್ಯಾಗವನ್ನು ನೆರವೇರಿಸುವ ಅಗತ್ಯ ಸಹಾಯವನ್ನಾಗಿ ಬೇಡಿಕೊಳ್ಳಬೇಕು.

ಯಾರಾದರೂ ದೇವರ ಬಗ್ಗೆ ಅನುಭವಿಸುವವರಾದರೂ ಆತನ ಚಿತ್ತಕ್ಕೆ ಸಂಪೂರ್ಣವಾಗಿ ಒಪ್ಪಿಸಿಕೊಡಲು ಸಿದ್ಧರಿರುವುದಾಗಿ ಭಾವಿಸದೇ ಹೋದಲ್ಲಿ ಏನು ಮಾಡುವುದು? ಅವರು ಈ ವಿಷಯದಲ್ಲಿ ದೇವರೊಡನೆ ಪ್ರಾರ್ಥಿಸಬೇಕೆಂದು ನಾವು ಉತ್ತರಿಸುತ್ತೇವೆ. ಅವರು ಸತ್ಯದ ಅಧ್ಯಯನಕ್ಕಾಗಿ ಆತನ ಆಶೀರ್ವಾದಗಳನ್ನು ಬೇಡಿ ಆ ಮೂಲಕ ಮೊದಲಿಗೆ ಸೇವೆಯ ವಿವೇಚನೆ, ಎರಡನೆಯದಾಗಿ ಫಲಿಸುವ ಫಲಿತಾಂಶದ ಖಚಿತತೆ ಮತ್ತು ಮೂರನೆಯದಾಗಿ ಎಲ್ಲಾ ಸ್ವಾರ್ಥತ್ಯಾಗಿಗಳ ವರ್ಗಕ್ಕೆ ಕೃಪೆಯಿಂದ ವಾಗ್ದಾನ ಮಾಡಲಾಗಿರುವ ಸಹಾಯ ಮತ್ತು ಶಕ್ತಿ ಇವುಗಳನ್ನು ಇಟ್ಟುಕೊಳ್ಳುವ ಪ್ರಾಮಾಣಿಕತೆ ಇವುಗಳನ್ನು ಹೆಚ್ಚೆಚ್ಚಾಗಿ ಗ್ರಹಿಸಲು ಶಕ್ತರಾಗಬೇಕು. ದೇವರು ಈ ಲೋಕದ ಸಂಗತಿಗಳನ್ನು ಸರಿಯಾದ ರೀತಿಯಲ್ಲಿ ತೂಕಮಾಡಿ ಅದರ ಬೆಲೆಕಟ್ಟುವ ಶಕ್ತಿಯನ್ನು ದಯಪಾಲಿಸುವಂತೆ ಅವರು ಕೇಳಿಕೊಳ್ಳಬೇಕು. ಆಗತ್ಯವಾದಲ್ಲಿ ಈ ಕಾಲದ ಎಲ್ಲಾ ಸ್ವಾರ್ಥ ಸಂಗತಿಗಳಿಗೆ ಸಂಬಂಧಿಸಿದವುಗಳು ಮತ್ತು ಸ್ವಭಾವಿಕ ಮನಸ್ಸು ಬಯಸುವ ಎಲ್ಲಾ ಸಂಗತಿಗಳು ಎಷ್ಟೊಂದು ನಶ್ವರ ಮತ್ತು ಅತೃಪಿಕರ ಎಂಬುದನ್ನು ಅವರು ಅನುಭವಮಾಡಿಕೊಳ್ಳಬೇಕು. ಈ ರೀತಿಯಲ್ಲಿ ಅವರು ಸಮರ್ಪಣೆಯನ್ನು ಮಾಡಲು ಶಕ್ತರಾಗಿ, ಕೆಳಗಿನವುಗಳ ಮೇಲೆ ಮನಸ್ಸಿಡದೆ ಮೇಲಿನವುಗಳ ಮೇಲೆಯೇ ತಮ್ಮ ಮನಸ್ಸಿಡುವವರಾಗುತ್ತಾರೆ. ಮತ್ತು ಮೊದಲನೆಯವುದನು ಎರಡನೆಯವುಗಳಿಗಾಗಿ ತ್ಯಾಗಮಾಡಲು ಸಿದ್ಧರಾಗುತ್ತಾರೆ.

ಇಲ್ಲಿ ಮತ್ತೊಂದು ಅಂಶ ಹುಟ್ಟಿಕೊಳ್ಳುತ್ತದೆ ; 'ಮಹಾಕರೆ'ಯು ಮುಕ್ತಾಯಗೊಂಡಿದೆ ಎಂಬ ಸತ್ಯದ ದೃಷ್ಟಿಯಿಂದ ಅಭಿಷಕ್ತರಿಗೆ ನೂತನ ಸೃಷ್ಟಿಯ ಬಹುಮಾನ, ಅದರ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಪಡಕೊಳ್ಳುವ ಅವಕಾಶವನ್ನು ಪೂರ್ಣವಾಗಿ ಖಚಿತಪಡಿಸುವಂತಿಲ್ಲ – ಇದು ಪ್ರತಿಷ್ಟೆಗೆ ಯಾವು ಬದಲಾವಣೆಯನ್ನು ಮಾಡುತ್ತದೆ?. ನಾವು ಯಾವ ಬದಲಾವಣೆಯನ್ನೂ ಮಾಡುವುದಿಲ್ಲ ಎಂಬ ಉತ್ತರವನ್ನು ನೀಡುತ್ತೇವೆ ; ಪ್ರತಿಷ್ಟೆಯು ದೇವಜನರಿಗೆ ಹೇಗಾದರೂ ಒಂದು ವಿವೇಚನಾ ಪೂರ್ವಕವಾದ ಸರಿಯಾದ ಕ್ರಮ. – ಧರ್ಮಯುಗದ ಆಶೀರ್ವಾದಗಳಲ್ಲಿ ಜೀವಿಸಿ ಅದರಲ್ಲಿ ಪೂರ್ಣ

ಸಂತೋಷಪಡುತ್ತಿರುವವರಿಗೆ ಸಂಪೂರ್ಣವಾದ ಪ್ರತಿಷ್ಟೆಯ ಅವಶ್ಯಕತೆ ಇದೆ. – ಇದಕ್ಕಿಂತ ಕಡಿಮೆ ಇಲ್ಲ. ಅಧಿಕಗೊಳ್ಳುವ ಅವಕಾಶ ಮತ್ತು ಬಹುಮಾನಗಳ ಬಗ್ಗೆ : ನಾವೀಗಾಗಲೇ ಸೂಚಿಸಿರುವಂತೆ, ನಮಗೆ ತಿಳಿದಿರುವಂತೆ, ಈಗಾಗಲೇ ಪ್ರತಿಷ್ಟೆ ಹೊಂದಿದ್ದರೂ ಬಹುಮಾನವನ್ನು ಪಡೆಯುವ ಮಟ್ಟಕ್ಕೆ ತಮ್ಮ ಓಟವನ್ನು ಓಡದೆ ಈ ಓಟದಿಂದ ಹೊರಹಾಕಲ್ಪಟ್ಟವರೆಂದು ಪರಿಗಣಿಸಲ್ಪಡುವ ಹಲವರ ಸ್ಥಾನದಲ್ಲಿ ಬೇರೆ ಅನೇಕರು ಈ 'ಮಹಾಕರೆಯ' ಸವಲತ್ತುಗಳಿಗೆ ಬಾಧ್ಯರಾಗುತ್ತಾರೆ. ಆದರೆ, ಇದರಲ್ಲಿ ಯಾರೂ ಪ್ರತಿಷ್ಟೆ ಮತ್ತು ತ್ಯಾಗದ ತಗ್ಗಾದ ದ್ವಾರದ ಮೂಲಕ ಪ್ರವೇಶಿಸದ ಹೊರತು ಆ ಸವಲತ್ತುಗಳಿಗೆ ಬಾಧ್ಯರಾಗುವುದಿಲ್ಲ ಎಂದು ನಮಗೆ ಖಚಿತವಾಗಿ ತಿಳಿದಿದೆ.

ಈ ತಗ್ಗಾದ ದ್ವಾರದ ಮೂಲಕ ಪ್ರವೇಶಿಸಿದವರೆಲ್ಲರೂ ತನ್ನ ಪ್ರಾಮಾಣಿಕ ನೂತನ ಸೃಷ್ಟಿಗಳಿಗಾಗಿ ದೇವರು ಸಂಗ್ರಹಿಸಿಟ್ಟಿರುವ ಶ್ರೀಮಂತ ಆಶೀರ್ವಾದಗಳನ್ನು ಸ್ಪಷ್ಟವಾಗಿ ಕಂಡು ಅವುಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲಾರರು ಎಂಬುದು ಬಹುಶಃ ಸತ್ಯ. ಅವರು ಮೊದಲಿಗೆ ಕೇವಲ ವಿವೇಚನಾಪೂರ್ವಕವಾದ ಸೇವೆಯನ್ನು ನೋಡಿದ್ದಾರೆ, ನಂತರದಲ್ಲಿ ದೇವರ ಒಳ್ಳೆಯತನ ಮತ್ತು ಮಹಾಕರೆಯ ಸವಲತ್ತುಗಳ ಉದ್ದ–ಅಗಲ, ಎತ್ತರ–ಆಳ ಇವುಗಳ ಬಗ್ಗೆ ಕಲಿತಿದ್ದಾರೆ. ಆದುದರಿಂದ ಈಗ ಪ್ರವೇಶಿಸುವವರೊಂದಿಗೆ ಅವರು ಮೊದಲಿಗೆ ತಮ್ಮ ವಿವೇಚನಾಪೂರ್ವಕವದ ಸೇವೆಯನ್ನು ಪುರ್ಣ ಪ್ರತಿಷ್ಟೆಯೊಂದಿಗೆ ಮಾಡುವ ಮಟ್ಟಕ್ಕೆ ತಲುಪದ ಹೊರತು ಅವರು ಪರಲೋಕದ ಆತ್ಮೀಕ ಸಂಗತಿಗಳನ್ನು ಪೂರ್ಣವಾಗಿ ಮೆಚ್ಚಿಕೊಳ್ಳಲಾರರು. ತಮ್ಮನ್ನೆ ಸಂಪೂರ್ಣವಾಗಿ ಸಮರ್ಪಿಸುವ ಮತ್ತು ದೇವರ ಹಿತಕ್ಕಾಗಿ ಪೂರ್ಣ ತ್ಯಾಗವನ್ನು ಮಾಡುವವರಿಗೆ ಕರ್ತನು ಬೇರೆ ರೀತಿಯ ತುಂಬಿದ ಆಶೀರ್ವಾದಗಳನ್ನು ಕೊಡಬಲ್ಲನು ಎಂಬುವ ಖಚಿತತೆ ನಮಗಿದೆ. ಆತನ ಈ ಎಲ್ಲ ಆಶೀರ್ವಾದಗಳು ಪ್ರತಿಷ್ಟೆ ಹೊಂದಿದವರಿಗೆ ಮತ್ತು ಸ್ವಯಂ–ಸಮರ್ಪಕರಿಗೆ. ಬಹುಶಃ ಇವರುಗಳನ್ನು ತ್ಯಾಗದ ಪ್ರವೃತ್ತಿ ಹೊಂದಿದ್ದು ದೇವರಿಗೆ ಪ್ರೀಯರಾಗಿದ್ದ 'ಮಹಾಕರೆಯ' ಪೂರ್ವದಲ್ಲಿ ಇದ್ದ ಪುರಾತನ ಅರ್ಹರೊಂದಿಗೆ ಎಣಿಕೆಮಾಡಲಾಗುವುದು.

### ಪವಿತ್ರಪಡಿಸುವಿಕೆಯ ಬಗ್ಗೆ ಇರುವ ದೋಷಪೂರಿತ ದೃಷ್ಟಿಕೋನಗಳು.

ದೇವರವಾಕ್ಯಗಳಲ್ಲಿ ತಿಳಿಸಲ್ಪಟ್ಟಿರುವ ಆತನ ಯೋಜನೆ, ಸಮರ್ಥನೆ ಮತ್ತು ಶುದ್ಧಪಡಿಸುವಿಕೆ ಇವುಗಳ ಬಗ್ಗೆ ಕ್ರೈಸ್ತರಲ್ಲಿ ಪ್ರಚಲಿತವಾಗಿರುವ ಅಲೋಚನೆಗಳ ಗೊಂದಲಗಳನ್ನು ಪರಿಗಣಿಸಿ ಪ್ರಬಲವಾಗಿರುವ ಗಣನೀಯ ಗೊಂದಲಗಳ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ತುಲನಾತ್ಮಕವಾಗಿ ಅಲ್ಪ ಪ್ರಮಾಣದ ದೇವಜನರಲ್ಲಿರುವ ಒಂದು ತಪ್ಪು ದೃಷ್ಟಿಯು ಅವರ ಹಾನಿಗೇ ಕಾರಣವಾಗುವುದು. ಇದು ನಿಜವಾದ ಪವಿತ್ರತೆ ಮತ್ತು ಸಮರ್ಪಕತೆಯ ಬಗ್ಗೆ. ಕೆಲವೊಂದು ಉಪಾಸಕರು ತಾವು 'ವರ್ಷಾನುಕಾಲದಿಂದ ಪಾಪವೇ ಮಾಡಿಲ್ಲ' ಮುಂತಾಗಿ ಹೇಳಿಕೊಳ್ಳುತ್ತಾರೆ. ಇವರು ಕರ್ತನ ಕಾಲದ ಫರಿಸಾಯರಿಗೆ ಸಮವಾಗಿದ್ದಾರೆ. ಅವರು ತಾವು ನೀತಿವಂತರೆಂದು ನಂಬಿ ಇತರರನ್ನು ಕೀಳಾಗಿ ಕಾಣುತ್ತಿದ್ದರು. ಇಂಥಾಃ ಸ್ವಯಂ ನೈತಿಕತೆಯನ್ನು ಅನುಭವಿಸುವವರು ಕರ್ತನ ವಿಮೋಚನಾ ಕಾರ್ಯದಲ್ಲಿ ತೋರಿಬಂದ ಅನುಕೂಲತೆಗಳು ಮತ್ತು ಕರುಣೆಯನ್ನು ಉದಾಸೀನ ಮಾಡಿದ್ದರು.

ಈ ರೀತಿಯಲ್ಲಿ 'ಪವಿತ್ರ ಜನರು' ಮತ್ತು 'ಪಾಪ ರಹಿತರು'ಎಂದು ಹೇಳಿಕೊಳ್ಳುವ ಜನರು ಹಾಗಿದ್ದರೂ ತಮ್ಮ ತಪ್ಪಿನಿಂದ ಕರ್ತನಲ್ಲಿ ಭಕ್ತಿ, ಆತನ ವಿಮೋಚನಾ ಕಾರ್ಯದಲ್ಲಿ ವಿಶ್ವಾಸ, ಆತನ ಸಮರ್ಪಣೆಯ ಅರ್ಹತೆಯಲ್ಲಿ ನಂಬಿಕೆ ಇವುಗಳಿಂದ ತಿರುಗಿಕೊಳ್ಳುವಲ್ಲಿ ಗಣನೀಯವಾದ ಶ್ರೇಣಿಯಲ್ಲಿ ದೂರವುಳಿಯುತ್ತಾರೆ. ಯಾಕೆಂದರೆ, ಅವರು ದೇವರ ಕಟ್ಟಳೆಗಳನ್ನು ಸರಿಯಾಗಿ ಕೈಗೊಳ್ಳುವರಾದಲ್ಲಿ ಯಾಕೆ ಆತನ ಅರ್ಹತೆ ಅಥವಾ ಕೃಪೆಯ ಮೇಲೆ ಆತುಕೊಳ್ಳಬೇಕು?, ಅವರನ್ನು ಆ ಸ್ಥಿತಿಗೆ ನಡೆಸುವಲ್ಲಿಇರುವ ಒಂದು ಕಷ್ಟವೆಂದರೆ ಕರ್ತನ ಬಗ್ಗೆ ಗೌರವದ ಕೊರತೆ ಮತ್ತು ಮತ್ತೊಂದು ತಮ್ಮ ಬಗ್ಗೆ ಮಿತಿಮೀರಿದ ಮೆಚ್ಚುಗೆ. ದೇವರಿಗೆ ಸೂಕ್ತ ಗೌರವ ತೋರಿದಲ್ಲಿ ಆತನ ಮಹತ್ವ, ಸಾರ್ವಭೌಮತ್ವ ಮತ್ತು

ಆತನ ಪವಿತ್ರತೆಯ ಮಟ್ಟ ಕಂಡುಕೊಳ್ಳಬಹುದು. ಇವುಗಳಿಂದ ತಮ್ಮ ಸ್ವಂತ ನಡತೆಗಳನ್ನು ಸರಿಪಡಿಸಿಕೊಳ್ಳ ಬಹುದು ; ತಮ್ಮ ಬಗ್ಗೆ ಸರಿಯಾದ ಅಂದಾಜು ಮಾಡಿದಲ್ಲಿ ಅವರಿಗೆ ತಾವು ದೇವರ ವಾಕ್ಯದಲ್ಲಿನ ಮಟ್ಟಕ್ಕೆ ತಮ್ಮ ಕಾರ್ಯ ಮತ್ತು ಆಲೋಚನೆಗಳಲ್ಲಿ ಇನ್ನೂ ಬಹಳ ಕಡಿಮೆಯ ಮಟ್ಟದಲ್ಲಿದ್ದೇವೆಂದು ಅವರಿಗೆ ಶೀಘ್ರಗತಿಯಲ್ಲಿ ಮನದಟ್ಟಾಗುವುದು (ಅದು ಇತರರಿಗೂ ಮನದಟ್ಟಾಗುವುದು).

ತಮ್ಮನ್ನು 'ಪವಿತ್ರ ಜನರು'ಎಂದು ಹೇಳಿಕೊಳ್ಳುವ ಮತ್ತೊಂದು ವರ್ಗದವರು ಈ ವಿಷಯದಲ್ಲಿ ತಾವು 'ಪಾಪ ರಹಿತರು' ಎಂದು ಹೇಳಿ ಕೊಳ್ಳುವ ತೀವ್ರ ಮಟ್ಟಕ್ಕೆ ಹೋಗದೆ ತಮ್ಮ ಅಸಮರ್ಪಕತೆಯನ್ನು ಒಪ್ಪಿಕೊಳ್ಳುತ್ತಾರೆ ಮತ್ತು ತಾವು ಇನ್ನುಮುಂದೆ ಪಾಪದಿಂದ ದೂರವಿರುತ್ತೇವೆ – ಪಾಪವಿಲ್ಲದೆ ಜೀವಿಸುತ್ತೇವೆ ಎಂಬ ನೆಲೆಯಲ್ಲಿ ಪವಿತ್ರತೆ ಮತ್ತು ಪೂರ್ಣ ಶುದ್ಧಗೊಳಿಸುವಿಕೆ ಮುಂತಾದವುಗಳನ್ನು ಹಕ್ಕಿನಿಂದ ಕೇಳುತ್ತಾರೆ. ಈಗಾಗಾಲೇ ತೋರಿಸಿರುವಂತೆ ಪ್ರತಿಷ್ಠೆ ಹೊಂದಿದವರೆಲ್ಲರೂ ತಮ್ಮ ಶಕ್ತ್ಯಾನುಸಾರ ಪಾಪದಿಂದ ದೂರವಿರಲು ಬಯಸಬೇಕೆಂಬುದನ್ನು ನಾವು ಸಮ್ಮತಿಸುತ್ತೇವೆ. ನಾವು ಟೀಕಿಸುತ್ತಿರುವವರ ತಪ್ಪು ಏನೆಂದರೆ, ಅವರುಗಳು ಪಾಪವನ್ನು ದೂರೀಕರಿಸುವುದು ಮಾತ್ರವೇ ಸಮರ್ಪಣೆಗಾಗಿರುವ ಅವರ ಏಕೈಕ ಉದ್ಧೇಶ ಮತ್ತು ಗುರಿ ಎಂದು ತಿಳಿಯುತ್ತಾರೆ. ಅವರು ಈ ವಿಷಯವನ್ನು ಸಂಪೂರ್ಣ ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆ. ದೇವರ ಯಾವ ಸೃಷ್ಟಿಯೂ ಎಂದೂ ಪಾಪ ಮಾಡುವ ಅಧಿಕಾರವನ್ನು ಹೊಂದಿಲ್ಲ. ಆದುದರಿಂದ ತಾನು ಮಾಡಲು ಅಧಿಕಾರವಿಲ್ಲದ ಆ ಪಾಪದಿಂದ ಗೈರುಹಾಜರಾಗುವುದನ್ನು ಸರಿಯಾದ ಜ್ಞಾನದಲ್ಲಿ ತ್ಯಾಗ ಎಂದು ಕರೆಯಲು ಅಥವಾ ಪರಿಗಣಿಸಲು ಸಾಧ್ಯವಿಲ್ಲ. ದೇವರ ವಾಕ್ಯವು ಎಲ್ಲೂ ನಮಗೆ ಪಾಪವನ್ನು ತ್ಯಾಗಮಾಡಲು ಹೇಳುವುದಿಲ್ಲ. ಪಾಪವನ್ನು ದೂರೀಕರಿಸುವ ಸಮರ್ಪಣೆಗಿಂತ ಮುಂದೆ ಹೋಗಲಾರದ ಈ ಪ್ರೀಯ ಸ್ನೇಹಿತರು ಎಲ್ಲಾ ಸಮರ್ಥನೆಗೊಂಡವರು ಹೋಗುವಲ್ಲಿಯವರೆಗೆ ಮಾತ್ರ ಹೋಗಿದ್ದಾರೆ ; ಇನ್ನೂ ಸ್ವಯಂ–ಸಮರ್ಪಣೆಯ ತಗ್ಗಾದ ದ್ವಾರವನ್ನು ಪ್ರವೇಶಿಸಿರುವುದಿಲ್ಲ. ಹಾಗೆಂದರೆ, ಸರಿಯಾದ, ನ್ಯಾಯಬದ್ಧವಾದ ಮತ್ತು ಯೋಗ್ಯವಾದ ಸಂಗತಿಗಳನ್ನು ಬಿಟ್ಟುಬಿಡುವುದು –ಸ್ವಯಿಚ್ಚೆಯಿಂದ ಅವುಗಳ ಶರಣಾಗುವುದರಿಂದ ನಾವು ಕರ್ತನ ಮತ್ತು ಆತನ ಉದ್ದೇಶಗಳ ಉತ್ತಮವಾದ ಸೇವೆಯನ್ನು ಮಾಡಬಹುದಾಗಿದೆ.

## ಕ್ರಿಸ್ತನು ನಮಗೆ ವಿಮೋಚನೆಯನ್ನುಂಟು ಮಾಡಿದ್ದಾನೆ

ವಿಮೋಚನೆ ಎಂಬ ಪದವನ್ನು ಇಲ್ಲಿ ಬಿಡುಗಡೆ, ರಕ್ಷಣೆ ಎಂಬ ಅರ್ಥದಲ್ಲಿ ಉಪಯೋಗಿಸಲಾಗಿದೆ. ಇದು ವಿಮೋಚನಾ ಕಾರ್ಯದ ಫಲ – ಈಡು ಬಲಿ ಅಥವಾ ಅನುರೂಪವಾದ ಕ್ರಯ ತೆತ್ತದುದರ ಫಲಿತಾಂಶ. ಈ ಪದದಲ್ಲಿ ಅಡಗಿರುವ ಆಲೋಚನೆಯು ನಮ್ಮನ್ನು ಸಭೆಯ ವಿಜಯದ ಪೂರ್ಣವಾದ ಅಂತ್ಯಕ್ಕೆ, ನೂತನ ಸೃಷ್ಟಿಯ ಜನ್ಮ ಸ್ಥಿತಿಗೆ ಕೊಂಡೊಯ್ಯುತ್ತದೆ –ಹೀಗಿದ್ದರೂ ನಮ್ಮ ಮೂಲ ಪಾಠದಲ್ಲಿ ಇದನ್ನು ಇಕ್ಕಟ್ಟಿನ ಹಾದಿಯಲ್ಲಿ ರಕ್ಷಣೆಯ ಉನ್ನತ ಸ್ಥಿತಿಗೆ ಬರಲಿರುವ ಎಲ್ಲಾ ವಿಶ್ವಾಸಿಗಳನ್ನು ಮಧ್ಯಂತರವಾಗಿ ಮತ್ತು ಆಕಸ್ಮಿಕವಾಗಿ ಬಿಡುಗಡೆಗಳಿಸಿ ಅವರನ್ನು ಪ್ರಥಮ ಪುನರುತ್ಥಾನದ ಸಮಯದಲ್ಲಿ ಮಹಿಮೆಯಲ್ಲಿ, ಗೌರವದಲ್ಲಿ ಮತ್ತು ನಿರ್ಲಯತ್ವಗಳಲ್ಲಿ ಪರಮಾವಧಿಗೆ ತರುವಂತೆ ಸರಿಯಾಗಿ ಅನ್ವಯಿಸಲಾಗಿದೆ.

ಅಪೋಸ್ತಲನು ನಮಗೆ ದೃಢಪಡಿಸುವುದೇನೆಂದರೆ, ನಮ್ಮ ಕರ್ತನ ಸಮರ್ಪಣೆಯು ನಮಗೆ 'ನಿರಂತರವಾದ ವಿಮೋಚನೆ'ಯನ್ನುಂಟುಮಾಡಿದ್ದು ಅದು ಪಾಪದ ದಾಸತ್ವದಿಂದ ಮತ್ತು ಅದರ ದಂಡನೆಯಾದ ಮರಣದಿಂದ ಶಾಶ್ವತವಾದ ಬಿಡುಗಡೆಯನ್ನುಂಟುಮಾಡುವುದಾಗಿದೆ (ಇಬ್ರಿಯ ೭:೨೫, ೯:೧೨ ನೋಡಿರಿ) ; ಈ ವಿಮೋಚನೆಯು ಇಡೀ ಪ್ರಪಂಚಕ್ಕೆ ಎಂಬುದು ನಿಜ ; ಮತ್ತು ನಮ್ಮ ಕರ್ತನು ಯಾರ್ಯಾರು ದೇವರ ಅಗತ್ಯತೆಗಳ ಸಾಮರಸ್ಯಕ್ಕೆ ಬರುತ್ತಾರೋ ಅವರೆಲ್ಲರಿಗೂ ಅಂತಿಮವಾಗಿ ಪಾಪದಿಂದಲೂ, ಪಾಪದ ದಂಡನೆಯಾದ ಮರಣದಿಂದಲೂ ಶಾಶ್ವತವಾದ ಬಿಡುಗಡೆಯನ್ನು

ಉಂಟುಮಾಡುವವನಾಗಿದ್ದಾನೆ ; ಆದರೆ, ನಾವೀಗಾಗಲೇ ನೋಡಿದಂತೆ, ಈ ಶಾಶ್ವತವಾದ ಬಿಡುಗಡೆಯು ಮುಂದಿನ ಕಾಲದಲ್ಲಿ ಎಲ್ಲರನ್ನು ಸತ್ಯದ ಜ್ಞಾನಕ್ಕೆ ಮತ್ತು ದೇವರ ರಾಜ್ಯದ ಪ್ರಭುತ್ವಕ್ಕೆ ತರುವುದರ ಮೂಲಕ ಇಡೀ ಪ್ರಪಂಚಕ್ಕೆ ಅನ್ವಯಿಸುವುದಾಗಿದೆ. ಈ ಕಾಲದಲ್ಲಿ ಇದು ವಿಶ್ವಾಸದ ಮನೆಯವರಿಗೆ ಮಾತ್ರ ಅನ್ವಯಿಸುತ್ತದೆ – ಇವರಲ್ಲಿ ಸಹಾ ಮಹಾ ಯಾಜಕನ ಹೆಜ್ಜೆ ಜಾಡಿನಲ್ಲಿ ಈಗ ಸ್ವಯಂ–ಸಮರ್ಪಣೆಯೊಂದಿಗೆ ರಾಜ ಯಾಜಕತ್ವದ ಸದಸ್ಯರಾಗಿ ನಡೆಯುತ್ತಿದ್ದಾರೋ ಅಂದರೆ, ಪಾಪ ಮತ್ತು ಮರಣದಿಂದ 'ಶಾಶ್ವತವಾದ ಬಿಡುಗಡೆ'ಯ ಮಹಿಮೆಯುಳ್ಳ ಕಿರೀಟ, ಗೌರವ ಮತ್ತು ನಿರ್ಲಯತ್ವಗಳನ್ನು ಹೊಂದಿದ ನೂತನ ಸೃಷ್ಟಿಯ ಸದಸ್ಯರಾಗಿದ್ದಾರೋ ಅವರಿಗೆ ಮಾತ್ರ.

ನಾವೀಗ ಗ್ರೀಕ್ ಪದವಾದ 'Apolutrosis'(ಬಿಡುಗಡೆ, ರಕ್ಷಣೆ) ಎಂಬುದನ್ನು 'ವಿಮೋಚನೆ' ಎಂಬ ಅರ್ಥದಲ್ಲಿ ಉಪಯೋಗಿಸಿರುವುದನ್ನು ಪರೀಕ್ಷಿಸೋಣ. ನಮ್ಮ ಕರ್ತನು ನಮಗೆ ರಕ್ಷಣೆಯ ಬಗ್ಗೆ ಒತ್ತಾಸೆ ಕೊಟ್ಟು ಅದನ್ನು ಪ್ರಥಮ ಪುನರುತ್ಥಾನದಲ್ಲಿ ನಮಗೆ ತಂದು ಕೊಟ್ಟು ಕಾಲದ ಅಂತ್ಯದಲ್ಲಿ ಜೀವಿಸುತ್ತಾ ಆ ಕಾಲದ ಕೆಲವು ಖಚಿತವಾದ ಸೂಚನೆ ಗಳನ್ನು ಗ್ರಹಿಸುವವರಿಗೆ " **ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ ; ನಿಮ್ಮ ಬಿಡುಗಡೆಯು ಸಮೀಪವಾಗಿದೆ"** (ಲೂಕ ೨೧:೨೮) ಅನ್ನುತ್ತಾನೆ. ಅಪೋಸ್ತಲನು ಇದೇ ವರ್ಗದ ನೂತನ ಸೃಷ್ಟಿಗಳೊಂದಿಗೆ ಮಾತನಾಡುತ್ತಾ **" ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆಹೊಂದಿದ್ದೀರಲ್ಲಾ"** (ಎಫೆಸ ೪:೩೦) ಎಂದು ಎಚ್ಚರಿಸುತ್ತಾನೆ. ಈ ಮೂಲ ಪಾಠಗಳಲ್ಲಿಯೂ ಸಹಾ ನಾವು ನಮ್ಮ ಕರ್ತನು ತನ್ನ ಸಮರ್ಪಣೆಯಲ್ಲಿ ಸಾಧಿಸಿದ ವಿಮೋಚನೆಯ ಬಗ್ಗೆ ನೋಡದೆ, ಅದು ಆತನ ದೇಹವಾದ ಸಭೆಯನ್ನು ಸಮರ್ಪಕಗೊಳಿಸಲು ಪ್ರಥಮ ಪುನರುತ್ಥಾನದಲ್ಲಿ ಮಾಡಿದ ಕಾರ್ಯಗಳ ಬಗ್ಗೆ ನೋಡುವವರಾಗಿದ್ದೇವೆ. ಅದೇ ಪತ್ರಿಕೆಯಲ್ಲಿ ಅಪೋಸ್ತಲನು **"ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು"** (ಎಫೆಸ ೧:೭) ಎಂದಿದ್ದಾನೆ. ಆತನು ಇಲ್ಲಿ ನಿಶ್ಚಯವಾಗಿ ನಮ್ಮ ಕರ್ತನ ಸಮರ್ಪಣೆಯ ಅರ್ಹತೆಯ ಮೇರೆಗೆ ನಾವು ಈ ಕಾಲದಲ್ಲಿ ಅನುಭವಿಸುತ್ತಿರುವ ಆತನ ಆಶೀರ್ವಾದಗಳ ಬಗ್ಗೆ ಸೂಚಿಸುವವನಾಗಿದ್ದಾನೆ. ಇವು ನಮ್ಮ ಎಲ್ಲಾ ತಪ್ಪು ದೋಷಗಳನ್ನು ಮುಚ್ಚಿಹಾಕಿ ನಮಗೋಸ್ಕರ ಬಹಳ ಹೆಚ್ಚಿನ ಮತ್ತು ಶಾಶ್ವತವಾದ ತೂಕದ ಮಹಿಮಾ ಕಾರ್ಯವನ್ನು ಎಸಗುತ್ತಿದೆ ಮತ್ತು ನಾವು ದೇವರಚಿತ್ತಾನುಸಾರ ಅತನಿಗೆ ಸಂತೋಷವನ್ನುಂಟುಮಾಡುವ ಕಾರ್ಯಗಳನ್ನು ಮಾಡಲು ನಮ್ಮೊಳಗೆ ಕೆಲಸ ಮಾಡುತ್ತದೆ. ಕ್ರಿಸ್ತನು ಈ ಕಾಲದಲ್ಲಿ ನಮಗೆ ವಿಮೋಚನೆಯನ್ನುಂಟು ಮಾಡಿದ್ದಾನೆ – ಈ ಕಾಲದ ತಿಕ್ಕಾಟಗಳಲ್ಲಿ ಕ್ರಿಸ್ತನು ನಮಗೆ ಜಯವನ್ನುಂಟುಮಾಡುವವನಾಗಿದ್ದಾನೆ, ಅಂತ್ಯದಲ್ಲಿ ಆತನು ನಮ್ಮನ್ನು ಆತನ ಹೋಲಿಕೆಗೆ ತಕ್ಕಂತೆ ಸಮರ್ಪಕರನ್ನಾಗಿ ಮಾಡುವುದರ ಮೂಲಕ ನಮಗೆ ಸಂಪೂರ್ಣ ವಿಜಯವನ್ನು ದಯಪಾಲಿಸುತ್ತಾನೆ ಎಂಬ ಅಲೋಚನೆಯು ನಮ್ಮಲ್ಲಿ ಅಚ್ಚೊತ್ತುತ್ತದೆ.

ಈ ಅಲೋಚನೆಯನ್ನು ಅದೇ ಲೇಖಕನು ಮುಂದುವರಿಸುತ್ತಾ **" ಅವರು ನೀತಿವಂತರೆಂದು ನಿರ್ಣಯಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು"** (ರೋಮ ೩:೨೪) ಎಂದು ಎಚ್ಚರಿಸುವುದರ ಮೂಲಕ ದೇವರ ಕೃಪೆಯು ಉಚಿತವಾಗಿ ಕ್ರಿಸ್ತ ಯೇಸುವಿನಲ್ಲಿರುವ ವಿಮೋಚನೆಯ ಮೂಲಕ ನಮ್ಮನ್ನು ಸಮರ್ಥರನ್ನಾಗಿ ಮಾಡಿದೆ (ಮತ್ತು ನಾವು ಕ್ರಿಸ್ತನಲ್ಲಿ ನೆಲೆಗೊಂಡಿರುವವರೆಗೆ ನಮ್ಮ ಸಮರ್ಥನೆಯು ಹಾಗೆಯೇ ಕಾಪಾಡಲ್ಪಡುವುದು) ಎಂದು ಖಚಿತಪಡಿಸುತ್ತಾನೆ..ನಾವು ಆತನಂತೆ ಮಾಡಲ್ಪಟ್ಟಾಗ, ಆತನನ್ನು ಆತನಿರುವಂತೆಯೇ ನೋಡಲು ನಾವು ನೋಡುವಾಗ ಮತ್ತು ಆತನ ಮಹಿಮೆಯನ್ನು ವಿಮೋಚನಾ (ಬಿಡುಗಡೆಯ) ದಿನದಲ್ಲಿ ನಾವು ಕಾಣುವಾಗ ಅದು ನಮ್ಮಮಟ್ಟಿಗೆ ಪೂರ್ಣತೆಯನ್ನು ತಲಪುತ್ತದೆ. ಅದೇ ಪತ್ರಿಕೆಯಲ್ಲಿ ಅಪೋಸ್ತಲನು ಪುನಃ ನಮ್ಮ ವಿಮೋಚನೆ ಅಥವಾ ಬಿಡುಗಡೆಯ ಬಗ್ಗೆ ಮಾತನಾಡುತ್ತಾ ನಾವು ದೇವರ ನಿಗದಿ ಪಡಿಸಿದ ಕಾಲ ಬರುವವರೆಗೆ ಆದಕ್ಕಾಗಿ ಯಾವ ರೀತಿಯಲ್ಲಿ ಕಾದುಕೊಂಡಿರ

ಬೇಕೆಂದು ತಿಳಿಸುತ್ತಾ –**"ಇದು ಮಾತ್ರವಲ್ಲದೆ ಪ್ರಥಮಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೂ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ. ನಾವು ರಕ್ಷಣೆಯನ್ನು ಹೊಂದಿದವರಾದರೂ ಎನ್ನು ಎದುರುನೋಡುವವರಾಗಿದ್ದೇವೆ'** (ರೋಮ ೮:೨೩:೨೪) ಎಂದು ಬರೆಯುತ್ತಾನೆ. ಈ ಅಂಶವನ್ನು ಆತನು ಸೂಚಿಸಿದ ಮೇಲೆ ಆತನು " ಅವರು ಮಾತ್ರವಲ್ಲ, (ನೂತನ ಸೃಷ್ಟಿಯಾಗಲು ಕರೆಯಲ್ಪಟ್ಟವರು, ಹಾಗೆ ಪಡೆಯಲ್ಪಟ್ಟವರು, ಆತ್ಮನ ಪ್ರಥಮ ಫಲವನ್ನು ಪಡೆದವರಾದ ನಾವು ಸಹಾ ದತ್ತು ಸ್ವೀಕಾರಕ್ಕಾಗಿ ಕಾಯುವವರಾಗಿದ್ದು, ಸಭೆಯೆಂಬ ಕ್ರಿಸ್ತನ ದೇಹವಾದ ನಮ್ಮ ದೇಹದ ವಿಮೋಚನೆಗಾಗಿ (ಬಿಡುಗಡೆಗಾಗಿ) ಏನೂ ತಿಳಿಯದವರಾಗಿ ನಮ್ಮೊಳಗೆ ನರಳುವವರಾಗಿದ್ದೇವೆ. ಈ ದೇಹದ ಶಿರಸ್ಸು ಕ್ರಿಸ್ತನೇ ಆಗಿದ್ದು ನಾವು ಅದರ ಪ್ರತೀಕ್ಷಿತ ಸದಸ್ಯರುಗಳಾಗಿದ್ದೇವೆ. ಇದು ನಮ್ಮಲ್ಲಿ ವಿಮೋಚನಾ ಕಾರ್ಯದ ಅಂತ್ಯವಾಗಿದೆ ; ನಾವು ಈ ಮಧ್ಯೆ ವಿಮೋಚನೆಯ ಬಹಳಷ್ಟು ಆಶೀರ್ವಾದಗಳನ್ನು ಹಂಚಿಕೊಳ್ಳುವವರಾದರೂ ನಾವು ಆವರೆಗೆ ವಿಮೋಚನೆಯನ್ನು ಸಂಪೂರ್ಣ ವಾಗಿ ಪಡಕೊಳ್ಳುವುದಿಲ್ಲ (ರೋಮ ೮ ೨೦–೨೩ ನೋಡಿರಿ).

ನಮ್ಮ ಪ್ರಸ್ತುತ ಪರಿಸ್ಥಿತಿಯ ಸಂಬಂಧವಾಗಿ ಈಗಾಗಲೇ ನಮ್ಮದಾಗಿರುವ ವಿಮೋಚನೆಯಲ್ಲಿ ನಮ್ಮ ಪಾಲು ಏನೆಂದು ಕರ್ತನು ಪ್ರಕಟಿಸುತ್ತಾ **" ನನ್ನನ್ನು ನಂಬಿರುವವನು ನಿತ್ಯಜೀವ ಹೊಂದಿದ್ದಾನೆ"** (ಯೋಹಾನ ೬: ೪೭) ಎಂದು ಹೇಳುತ್ತಾನೆ. ಈ ನಂಬಿಕೆಯನ್ನು ನಾವು ಕೇವಲ ದೇವರ ರಕ್ಷಣಾ ಯೋಜನೆಗೆ ಸಂಬಂಧಿಸಿದ ಕೆಲವು ಸತ್ಯಗಳ ಒಂದು ಮಾನಸಿಕ ಸಮ್ಮತಿಯೆಂದು ತಿಳಿಯಬಾರದು. ಆದರೆ ಇದು ಪ್ರಾಯಶ್ಚಿತ್ತ ಯಜ್ಞದಲ್ಲಿನ ನಂಬಿಕೆ ಮತ್ತು ಅದರಂತೆ ಪಾಪಕ್ಕೆ ವಿರೋಧವಾದ ನಡವಳಿಕೆ ಎಂದು ತಿಳಿಯಬೇಕು. ಇದೊಂದು ಜೀವಕರ ವಿಶ್ವಾಸವಾಗಿದ್ದು ಹೃದಯಪೂರ್ವಕವಾದ ವಿಧೇಯತೆಯಲ್ಲಿ ಪ್ರಕಟವಾಗುತ್ತದೆ. ಅದರಂತೆ ವಿಶ್ವಾಸಿಗಳು ಪೂರ್ಣವಾದ ಅರ್ಥದಲ್ಲಿ ನಿತ್ಯಜೀವವನ್ನು ಪಡಕೊಳ್ಳುವರು ಎಂಬುದಾಗಿಯೂ ನಾವು ತಿಳಿಯಬಾರದು. ನಿಜವಾದ ಅರ್ಥದಲ್ಲಿ ಇದು ಕಟ್ಟಕಡೆಯದಾಗಿ ಪ್ರಥಮ ಪುನರುತ್ಥಾನದ ಭಾಗವಾಗಿ ಅವರಿಗೆ ನೀಡಲ್ಪಡುತ್ತದೆ. ನಿಜವಾಗಿ ಹೇಳುವುದಾದರೆ, ಸಮರ್ಪಣೆಗೊಂಡ ವಿಶ್ವಾಸಿಗಳು ಜೀವನದ ನವೀನತೆಗೆ ಪಡಕೊಂಡವರಾಗಿದ್ದು, ಅವರು ಪ್ರಥಮ ಪುನರುತ್ಥಾನದಲ್ಲಿದ್ದು ಅವರ ಚಿತ್ತವು ನೂತನ ಸೃಷ್ಟಿಯ ಆರಂಭದೋಪಾದಿಯಲ್ಲಿರುವಂತೆ ದೇವರಿಗೆ ಒಪ್ಪಿಗೆಯಾಗಿದೆ.

"ನಾವು ನಿರೀಕ್ಷೆಯಿಂದ ರಕ್ಷಿಸಲ್ಪಟ್ಟಿದ್ದೇವೆ" ಎಂಬ ಅಪೋಸ್ತಲನ ಈ ಹೇಳಿಕೆಗಳನ್ನು ಪೂರ್ಣವಾದ ಸಾಮರಸ್ಯದಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ – ನಂಬಿಕೆಯಿಂದ – ರಕ್ಷಿಸಲ್ಪಟ್ಟಿದ್ದೇವೆಂದು ಎಣಿಸಲ್ಪಟ್ಟಿದ್ದೇವೆ, ಸಂಪೂರ್ಣವಾಗಿ ರಕ್ಷಿಸಲ್ಪಡಲಿಲ್ಲ. ಆದುದರಿಂದ ನಾವು ದೇವರ ನಮ್ಮಲ್ಲಿ ಆರಂಬಿಸಿರುವ ಒಳ್ಳೇ ಕಾರ್ಯವು ಪೂರ್ಣಗೊಳ್ಳುವ ತನಕ ತಾಳ್ಮೆಯಿಂದ ಕಾಯಬೇಕು – ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಮಗೆ ಉಂಟಾಗುವ ದೇವರ ಕೃಪೆ ರಕ್ಷಣೆ) ಗಾಗಿ ಕಾಯಬೇಕು. **" ಯೆಸುಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ"** (೧ ಪೇತ್ರ ೧:೧೩, ೨ ಥೆಸ ೧:೧೦ ಸಹಾ ನೋಡಿರಿ).

ಕ್ರಿಸ್ತಯೇಸುವಿನಲ್ಲಿರುವ ವಿಮೋಚನೆ (ಬಿಡುಗಡೆ) ಯನ್ನು ನಾವೀಗ ಅನುಭವಿಸುತ್ತಿದ್ದೇವೆ ಮತ್ತು ಇದು ಪದೇ ಪದೇ ನಮ್ಮಲ್ಲಿ ಪೂರ್ಣಗೊಳ್ಳುತ್ತಿರುತ್ತಿದೆ. ಇದು ಸತ್ಯವೇದದಲ್ಲಿ ಎಲ್ಲೆಡೆ ಕ್ರಿಸ್ತನು ನಮಗಾಗಿ ಅರ್ಪಿಸಿದ ಸಮರ್ಪಣೆಯೊಂದಿಗೆ ತೋರಿಬರುತ್ತದೆ. ಆತನ ಮರಣವು ನಮ್ಮ ಪಾಪದ ದಂಡವಾಗಿ ತೆತ್ತ ಮೊತ್ತವಾದರೆ, ಆತನ ಪುನರುತ್ಥಾನವು ಅಗತ್ಯ. ಯಾಕೆಂದರೆ, ಸತ್ತಾತನು ವಿಮೋಚನೆಗೊಂಡವರಿಗೆ ಅವರು ಕಳಕೊಂಡದ್ದನ್ನು ಹಿಂದಕ್ಕೆ ಪಡೆಯುವಲ್ಲಿ ಸಹಾಯಮಾಡಲಾರನು. ಸಮರ್ಪಣೆಯ ಸಂಬಂಧದಲ್ಲಿ ನಮ್ಮ ಕರ್ತನ ಸ್ವಯಂ ಅನುಭವವು ತನ್ನ ರಕ್ತದ ಬೆಲೆಯಿಂದ ಕೊಂಡುಕೊಂಡವರನ್ನು ನರಳಾಟದಿಂದ ಬಿಡುಗಡೆಮಾಡಲು ಆತನನ್ನು ಹೆಚ್ಚು ಅರ್ಹನನ್ನಾಗಿ ಮಾಡುವುದೆಂಬ

ಭರವಸೆ ನಮಗೆ ಉಂಟುಮಾಡುತ್ತದೆ. ಅಪೋಸ್ತಲನು ಈ ಬಗ್ಗೆ ಹೇಳುವುದೇನೆಂದರೆ **“ ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವುದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವುದಕ್ಕೆ ಶಕ್ತನಾಗಿದ್ದಾನೆ”** (ಇಬ್ರಿಯ ೨:೧೮) ಅವರನ್ನು ಅಧೀನಪಡಿಸಿಕೊಳ್ಳಬಹುದಾದ ಶೋಧನೆಗಳಿಂದ ಬಿಡಿಸುವವನಾಗಿದ್ದಾನೆ. “ **ನಿಮ್ಮ ಶಕ್ತಿಗೆ ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸಿಕೊಳ್ಳಲು ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು”** (೧ ಕೊರಿ ೧೦:೧೩). ಆತನು ನಮ್ಮನ್ನು ಮುಗ್ಗರಿಸುವಂತೆ ಮಾಡಬಹುದು, ಆದರೆ ನಾವು ಆತನನ್ನು ನಂಬುವವರೆಗೆ ಆತನು ನಾವು ಸಂಪೂರ್ಣವಾಗಿ ಮುಗ್ಗರಿಸಿ ಬೀಳುವಂತೆ – ಎರಡನೆಯ ಮರಣಕ್ಕೆ ತುತ್ತಾಗದಂತೆ ಕಾಪಾಡುವನು.

ನಮ್ಮ ಸ್ವಂತ ಬಲಹೀನತೆಗಳನ್ನು ಕಂಡುಕೊಳ್ಳುವಂತೆ ಮತ್ತು ಆತನನ್ನು ನಮ್ಮ ಕುರುಬನು ಹಾಗೂ ವಿಮೋಚಕನು ಎಂದು ನೋಡಲಿಕ್ಕಾಗುವ ಅಮೂಲ್ಯ ಪಾಠಗಳನ್ನು ನಮಗೆ ಕಲಿಸುವ ಸಲುವಾಗಿಯೇ ಆತನು ನಾವು ಮುಗ್ಗರಿಸಲು ಅನುಮತಿಸಬಹುದು. ಈ ರೀತಿಯಲ್ಲಿ ನಾವು ಆತನ ಸಕ್ತಿಯ ಮೂಲಕ ಆತನಲ್ಲಿ ಬಲಗೊಳ್ಳಬಹುದಾಗಿದೆ. ಆತನು ನಮ್ಮ ಮುಂದೆ ಮಹಾಯಾಜಕನಾಗಿ ಕಾಣಿಸಿಕೊಳ್ಳುತ್ತಾನೆ. ನಮ್ಮ ಬಲಹೀನತೆಗಳಲ್ಲಿ ನಮ್ಮನ್ನು ಸ್ಪರ್ಷಿಸಲು ಶಕ್ತನಾಗಿದ್ದಾನೆ. ಅದೇ ಸಮಯದಲ್ಲಿ ನಮ್ಮ ಶೋಧನೆಗಳಲ್ಲಿ ನಮ್ಮನು ಬಿಡಿಸಬಲ್ಲವನಾಗಿದ್ದಾನೆ. ಆತನು ತಿಳಿಗೇಡಿಗಳ ಬಗ್ಗೆ, ಆತನ ಮಾರ್ಗವನ್ನು ಬಿಟ್ಟು ತಿರುಗಾಡುತ್ತಿರುವವರ ಬಗ್ಗೆ ಅನುಕಂಪವುಳ್ಳವನಾಗಿರುತ್ತಾನೆ ಎಂದು ವಿಶಿಷ್ಟವಾಗಿ ಹೇಳಲಾಗಿದೆ. ಆತನ ಮೂಲಕವಾಗಿ ತಂದೆಯನ್ನು ಸಮೀಪಿಸುವವರಿಗೆ ಮತ್ತು ಆತನಲ್ಲಿ ಜೀವಕರ ವಿಶ್ವಾಸದಲ್ಲಿ ನೆಲೆಗೊಂಡವರಿಗೆ ಆತನು ಉನ್ನತವಾದ ರೀತಿಯ ರಕ್ಷಣೆಯನ್ನು ಒದಗಿಸಿಕೊಡಲು ಶಕ್ತನಾಗಿದ್ದಾನೆ. ಇದು ಅವರ ಶಕ್ತ್ಯಾನುಸಾರವಾದ ವಿಧೇಯತೆಯ ಅಭಿಪ್ರಾಯವನ್ನು ನೀಡುತ್ತದೆ. ಈ ರೀತಿಯಲ್ಲಿ ನಾವು ನಮ್ಮ ವಿಮೋಚಕನೊಂದಿಗೆ ನಮ್ಮ ಪ್ರಸ್ತುತ ರಕ್ಷಕ, ವಿಮೋಚಕ ಮತ್ತು ತಡವಿಲ್ಲದೆ ಪುನರುತ್ಥಾನದ ಮೂಲಕ ನಮ್ಮನ್ನು ಸಮಾಧಿಯಿಂದ ಬಿಡುಗಡೆ ಮಾಡಬಲ್ಲಾತನೆಂದು ಆತನಲ್ಲಿ ಹರ್ಷಿಸಬಹುದಾಗಿದೆ. ಆತನು ನಮ್ಮ ನಂಬಿಕೆಯನ್ನು ಪೂರೈಸುವವನಾಗಿದ್ದಾನೆ. (ಇಬ್ರಿಯ ೨:೧೭, ೧೮ ; ೪:೧೫, ೧೬,; ೫:೨ ; ೭:೨೫,೨೬ ಇವುಗಳನ್ನು ನೋಡಿರಿ).

**+ 000000000000 +**